# ಕಾರ್ಮಿಕ ದೃಷ್ಟಿಕೋನ

**SUCI (C)** ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಸಂಪುಟ: 37 । ಸಂಚಿಕೆ: 03 । ಮೇ 2024 । ಬೆಲೆ: ರೂ. 7/-


## ಒಳ ಪುಟಗಳಲ್ಲಿ............


ಹಸಿವು – ಭಾರತದಲ್ಲಿ ಆಕ್ರಂದನ------------------ 2
ಕಾಮ್ರೇಡ್ ವಿ. ವೇಣುಗೋಪಾಲ್ ಲಾಲ್ ಸಲಾಂ------ 5
ಮಾಧ್ಯಮ ಪ್ರತಿನಿಧಿಗಳ ಜೊತೆ ಸಂವಾದ--------- 7
ಎಸ್‌ಯುಸಿಐ(ಸಿ) ಪಕ್ಷದ 77ನೇ ಸಂಸ್ಥಾಪನಾ ದಿನ-- 9
ಬಿಜೆಪಿಯ ನರಕಸದೃಶ ಆಳ್ವಿಕೆಯ ಅನಾವರಣ!----- 10
13ನೇ 'ವಿಜಯಪುರ ಸಾಂಸ್ಕೃತಿಕ ಜನೋತ್ಸವ'------ 11


**18ನೇ ಲೋಕಸಭಾ ಚುನಾವಣೆ:**

# ಜನಪರ ಹೋರಾಟದ ಕುಲುಮೆಯಲ್ಲಿ ಹದಗೊಂಡ ಎಸ್‌ಯುಸಿಐ (ಸಿ) ಅಭ್ಯರ್ಥಿಗಳು ಕಣದಲ್ಲಿ....




**ರಾಯಚೂರು: ಬಹಿರಂಗ ಸಭೆಯಲ್ಲಿ ಮಾತನಾಡುತ್ತಿರುವವರು, ಕಾ. ಕೆ. ರಾಧಾಕೃಷ್ಣ, ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು**

ಇದೀಗ ತಾನೇ ರಾಜ್ಯದದಲ್ಲಿ 18ನೇ ಲೋಕಸಭಾ ಚುನಾವಣೆಯು ಮುಗಿದಿದೆ. ನಮ್ಮ ಪಕ್ಷ ಎಸ್‌ಯುಸಿಐ(ಸಿ) ಅಭ್ಯರ್ಥಿಗಳು ರಾಜ್ಯದ 19 ಸ್ಥಾನಗಳಲ್ಲಿ ಸ್ಪರ್ಧಿಸಿದ್ದಾರೆ. ಸದಾ ಜನಪರ ಹೋರಾಟದ ಮುಂಚೂಣಿಯಲ್ಲಿರುವ ನಮ್ಮ ಕಾರ್ಯಕರ್ತರು ಈ ಚುನಾವಣೆಯನ್ನೂ ಸಹ ಈ ಹೋರಾಟದ ಭಾಗವನ್ನಾಗಿಯೇ ಪರಿಗಣಿಸಿದ್ದಾರೆ; ನೆತ್ತಿಯನ್ನು ಸುಡುವ ಉರಿ ಬಿಸಿಲಿನಲ್ಲೂ ಅಭ್ಯರ್ಥಿಗಳು ತಮ್ಮ ನಾಯಕರು ಮತ್ತು ಸಂಗಾತಿಗಳೊಂದಿಗೆ ಜನರ ಮಧ್ಯೆ-ಬೀದಿಗಳಲ್ಲಿ, ಪಾರ್ಕುಗಳಲ್ಲಿ, ಸಂತೆ-ಮಾರುಕಟ್ಟೆಗಳಲ್ಲಿ, ಬಸ್-ರೈಲು ನಿಲ್ದಾಣಗಳಲ್ಲಿ, ಕಛೇರಿಗಳಲ್ಲಿ, ಮನೆಮನೆಗಳಲ್ಲಿ, ಆದಿವಾಸಿಗಳ ಹಾಡಿಗಳಲ್ಲಿ, ಹೀಗೆ ಎಲ್ಲೆಡೆ ನಮ್ಮ ಪಕ್ಷದ ವಿಚಾರಗಳೊಂದಿಗೆ ಹೋಗಿ ಚರ್ಚೆ ಮಾಡುತ್ತಿದ್ದಾರೆ, ನಮ್ಮ ಪಕ್ಷದ ಕರಪತ್ರಗಳನ್ನು, ಚುನಾವಣೆಯಲ್ಲಿ ಯಾರಿಗೆ ಮತ ಕೊಡಬೇಕು ಎಂಬುದರ ಬಗ್ಗೆ ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ವಿವರಿಸಿ ಬರೆದಂತಹ ಪುಸ್ತಕಗಳನ್ನು ಜನರಿಗೆ ಕೊಡುತ್ತಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಎರಡೂ ಒಂದೇ ನಾಣ್ಯದ ಎರಡು ಮುಖಗಳು, ಎರಡೂ ಬಂಡವಾಳಶಾಹಿಗಳ ಪರ ನೀತಿಗಳನ್ನೇ ತರುತ್ತವೆಯೇ ಹೊರತು ಜನಪರ ನೀತಿಗಳನ್ನಲ್ಲ ಎಂಬುದನ್ನು ಬಹುತೇಕವಾಗಿ ಜನರು ತಮ್ಮ ಸ್ವಂತ ಅನುಭವಗಳಿಂದಲೇ ಅರಿತಿದ್ದಾರೆ, ಅವರಿಗೆ ಬೇರೆಬೇರೆ ಸಂಸದೀಯ ಪಕ್ಷಗಳ ಬಗ್ಗೆ ಭ್ರಮ ನಿರಸನವೂ ಆಗಿದೆ. ಆದರೂ ಅವರಿಗೆ ಪರ್ಯಾಯ ಗೋಚರಿಸುತ್ತಿಲ್ಲ. ಎಸ್‌ಯುಸಿಐ(ಸಿ) ಆ ಪರ್ಯಾಯ ಹೇಗೆ ಎಂಬುದನ್ನು ಜನರಿಗೆ ವಿವರಿಸುತ್ತಿದ್ದಾರೆ.

ಹೀಗೆ, ನಮ್ಮ ಅಭ್ಯರ್ಥಿಗಳು, ನಾಯಕರು, ಸಂಗಾತಿಗಳು, ಜನತೆಯ ಮುಂದೆ ನಮ್ಮ ಕ್ರಾಂತಿಕಾರಿ ವಿಚಾರಗಳನ್ನು ಕೊಂಡೊಯ್ಯುತ್ತಿದ್ದಾರೆ, ಅವರಲ್ಲಿ ರಾಜಕೀಯ ಜಾಗೃತಿಯನ್ನು ಉಂಟು ಮಾಡುತ್ತಿದ್ದಾರೆ; ಈ ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ; ಜನರ ಸಮಸ್ಯೆಗಳಿಗಿರುವ ಏಕೈಕ ಪರಿಹಾರವೆಂದರೆ, ಜನ ಹೋರಾಟಗಳು, ಆ ಮೂಲಕ ಪರ್ಯಾಯ ರಾಜಕೀಯ ಶಕ್ತಿಗೆ ಜನ್ಮ ನೀಡುವುದು, ಮುಂಬರುವ ಸಮಾಜವಾದಿ ಕ್ರಾಂತಿಗೆ ಪೂರಕವಾಗಿ ಈ ಕಾರ್ಯವನ್ನು ಸಾಧಿಸುವ ದಾರಿಯನ್ನು ಜನರ ಮುಂದಿಡುವುದು, ಈ ಉದ್ದೇಶ ಈಡೇರಿಕೆಗಾಗಿ ಶ್ರಮಿಸುತ್ತಿದ್ದಾರೆ. ಬಹುತೇಕವಾಗಿ ರಾಜ್ಯದ ಜನರ, ಅದರಲ್ಲೂ ಶ್ರಮಿಕ ಜನತೆಯ ಪ್ರತಿಕ್ರಿಯೆ ಬಹಳ ಪ್ರೋತ್ಸಾಹದಾಯಕವಾಗಿದೆ. ಈ ಬಗ್ಗೆ ಕೆಲವೊಂದು ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

ಮೊದಲನೇದಾಗಿ, ಬಹುತೇಕ ಜನ ದಶಕಗಳಿಂದ ನಮ್ಮನ್ನು ಜನಪರ ಹೋರಾಟದಲ್ಲಿ ನೋಡುತ್ತಿದ್ದಾರೆ, ಚುನಾವಣೆ ಇರಲಿ, ಇಲ್ಲದಿರಲಿ, ನಾವು ಸದಾ ಜನರ ಮಧ್ಯೆ ಇರುವುದನ್ನು ಗಮನಿಸುತ್ತಿದ್ದಾರೆ, ನಮ್ಮ ಕಾಮ್ರೇಡರ ಉನ್ನತ ಸಂಸ್ಕೃತಿಯ ಬಗ್ಗೆ ಅವರಿಗೆ ಅಪಾರ ಮೆಚ್ಚುಗೆ ಇದೆ. ಇದನ್ನು ಈ ಸಂದರ್ಭದಲ್ಲಿ ಅವರೆಲ್ಲಾ ನಮ್ಮೊಡನೆ ಹಂಚಿಕೊಂಡಿದ್ದಾರೆ.

ಬೀದಿಬದಿ ಸಭೆಯಲ್ಲಿ ನಮ್ಮ ಮಾತುಗಳನ್ನು ಕೇಳಿಸಿಕೊಂಡ ಒಬ್ಬರ ಉದ್ಗಾರ: "ಇವತ್ತು ನೀವು ಸೋಲಬಹುದು, ನಾಳೆ ಸಹ ನೀವು ಸೋಲಬಹುದು, ಆದರೆ ನಾಡಿದ್ದು ನೀವು, ನಿಮ್ಮ ವಿಚಾರಗಳು ಗೆಲ್ಲಲೇಬೇಕು."

ಇನ್ನೊಬ್ಬರು ಹೇಳಿದ್ದು: "ನಿಮ್ಮ ಹೋರಾಟಗಳನ್ನು ನಾವೆಲ್ಲಾ ಗಮನಿಸುತ್ತಲೇ ಇದ್ದೇವೆ. ಮುಂದೊಂದು ದಿನ ನಿಮ್ಮ ಗುರಿ ಸಾಧನೆಯಾಗುವುದು ಶತ:ಸಿದ್ಧ. ನಿಮಗೆ ಜಯವಾಗಲಿ!"

ಪಾರ್ಕೊಂದರ ಪ್ರಚಾರ ಸಂದರ್ಭ: ಮಧ್ಯಮವರ್ಗದ ಜನರು ಹೇಳಿದ್ದು: "ನಮಗೆ ಬಿಜೆಪಿ ಮತ್ತು ಕಾಂಗ್ರೆಸ್‌ಗಳಿಗೆ ಪರ್ಯಾಯ ಬೇಕು. ನಿಮ್ಮ ಹೋರಾಟಗಳು ಬೆಳೆಯಬೇಕು, ನಾವು ಆಶಿಸುವ ಬದಲಾವಣೆ ನಿಮ್ಮ ಮೂಲಕ ಬರಬೇಕು."

ಇನ್ನೊಂದು ಪಾರ್ಕಿನಲ್ಲಿ ಇದ್ದ ಮಧ್ಯಮವರ್ಗದ ಜನರು, ನಮ್ಮ ಅಭ್ಯರ್ಥಿಯ ಭಾಷಣವನ್ನು ಆಸ್ಥೆಯಿಂದ ಆಲಿಸಿ, ಜನಪರ ನೀತಿಗಳಿಗಾಗಿ ಆಗ್ರಹಿಸಿ ನಾವು ಮಾಡುತ್ತಿರುವ ಹೋರಾಟಗಳನ್ನು ಬೆಂಬಲಿಸಿ ಮಾತನಾಡಿದರು, ಅಭ್ಯರ್ಥಿಗೆ ಶುಭ ಕೋರಿದರು.

ಒಂದೊಮ್ಮೆ ಸಿಪಿಐ(ಎಂ)ನ ಭದ್ರಕೋಟೆಯಾಗಿದ್ದ ಬಾಗೇಪಲ್ಲಿಯಲ್ಲಿ ನಾವು ಪ್ರಚಾರ ಮಾಡುವಾಗ ಭೇಟಿಯಾದವರಲ್ಲಿ ಹಲವರು ಸಿಪಿಐ(ಎಂ)ನ ಹಳೆಯ ಬೆಂಬಲಿಗರಿದ್ದರು. ಅವರಿಗೆ ಸಿಪಿಐ(ಎಂ)ನ ರಾಜಕೀಯದಿಂದ ತೀವ್ರ ಭ್ರಮನಿರಸನ ಉಂಟಾಗಿದ್ದರೂ, ಹೋರಾಟಗಳಲ್ಲಿ, ಅದರಲ್ಲೂ ಕ್ರಾಂತಿಕಾರಿ ಚಳುವಳಿಗಳಲ್ಲಿ ಇನ್ನೂ ಬಲವಾದ ನಂಬಿಕೆಯಿದೆ. ನಮ್ಮ ಪಕ್ಷದ ನಿಲುವನ್ನು ಅವರು ತುಂಬು ಹೃದಯದಿಂದ ಶ್ಲಾಘಿಸಿದರು, ನಮಗೆ ಬೆಂಬಲ ವ್ಯಕ್ತ ಪಡಿಸಿದರು.

ಮೈಸೂರಿನ ಒಂದು ಇಲೆಕ್ಟ್ರಾನಿಕ್ಸ್ ಕಂಪನಿಯಲ್ಲಿ ಯೂನಿಯನ್ ಕಟ್ಟಲು ಪ್ರಯತ್ನಿಸಿದ್ದಕ್ಕೆ 5 ಜನ ಕಾರ್ಮಿಕರನ್ನು ಹೈದರಾಬಾದ್‌ಗೆ ವರ್ಗಾವಣೆ ಮಾಡಲಾಯಿತು. ಆದರೆ, ಅವರು ಅಲ್ಲಿಗೆ ಹೋಗಿಲ್ಲ. ಅವರ ಹೋರಾಟಕ್ಕೆ ನಮ್ಮ ಕಾರ್ಮಿಕ ಸಂಘಟನೆ ಬೆಂಬಲ ನೀಡುತ್ತಿದೆ. ಜೀವನೋಪಾಯಕ್ಕಾಗಿ ಅವರಲ್ಲಿ ಕೆಲವರು ಆಟೋ ಓಡಿಸುತ್ತಾ ಇದ್ದಾರೆ. ತಮ್ಮ ಆಟೋದಲ್ಲಿ ಎಐಯುಟಿಯುಸಿ ಮತ್ತು ಪಕ್ಷದ ಬಾವುಟಗಳನ್ನು ಕಟ್ಟಿಕೊಂಡಿದ್ದಾರೆ. ಇತ್ತೀಚೆಗೆ ಅವರು ನಮ್ಮ ಪಕ್ಷದ ಕಚೇರಿಗೆ ಬಂದು ನಿಮ್ಮ ಚುನಾವಣಾ ವೆಚ್ಚಕ್ಕೆ ನಮ್ಮ ಕಿರು ಕಾಣಿಕೆ ಎಂದು ರೂ.10,000 ಕೊಟ್ಟು ಹೋಗಿದ್ದಾರೆ. ಶ್ರಮಿಕ ಜೀವಿಗಳ ಈ ಬೆಂಬಲ ನಮ್ಮ ಬೆನ್ನೆಲುಬಾಗಿ ನಿಂತಿದೆ!

ಕೊಪ್ಪಳದ ರೋಣ ತಾಲೂಕಿನ, ಜಾತ್ರೆಗಳ ಕಾಲದಲ್ಲಿ ಪುಸ್ತಕ ವ್ಯಾಪಾರ ಮಾಡುವ, ಉಳಿದ ದಿನಗಳಲ್ಲಿ ಕಟ್ಟಡ ಕಾರ್ಮಿಕರಾಗಿ ಕೂಲಿ ಕೆಲಸ ಮಾಡುವ, ಅಲ್ಪಸಂಖ್ಯಾತ ಬಡ ಮಹಿಳೆಯೊಬ್ಬರು ನಮ್ಮ ಪಕ್ಷದ ಬೆಂಬಲಿಗರಾಗಿದ್ದು, ನಮ್ಮ ಹೋರಾಟಗಳಲ್ಲಿ ಭಾಗವಹಿಸುತ್ತಾರೆ. ಕೊಪ್ಪಳದಲ್ಲಿ ನಮ್ಮ ಅಭ್ಯರ್ಥಿ ಕಾ. ಶರಣಪ್ಪನವರೊಂದಿಗೆ ನಾಮಪತ್ರ ಸಲ್ಲಿಸಿ ಬರುವುದರೊಳಗೆ, ತಮ್ಮ ಖರ್ಚಿನಲ್ಲೇ ಎಲ್ಲರಿಗೂ ಪಕ್ಷದ ಆಫೀಸಿನಲ್ಲಿ ಸಿಹಿ ಊಟದ ಪುಟ 3 ಕ್ಕೆ

## ಪ್ರಧಾನಿ ಮೋದಿ ಯವರ ಆಕ್ಷೇಪಾರ್ಹ ಭಾಷಣಕ್ಕೆ ಎಸ್‌ಯುಸಿಐ (ಸಿ) ತೀವ್ರ ಖಂಡನೆ

ರಾಜಸ್ಥಾನ ಮತ್ತು ಮಧ್ಯಪ್ರದೇಶಗಳ ಲೋಕಸಭಾ ಚುನಾವಣಾ ಸಭೆಗಳಲ್ಲಿ ಪ್ರಧಾನಿ ಮೋದಿಯವರ ಆಕ್ಷೇಪಾರ್ಹ ಭಾಷಣವನ್ನು ಖಂಡಿಸುತ್ತಾ 23.04.24 ರಂದು ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ನೀಡಿರುವ ಪತ್ರಿಕಾ ಹೇಳಿಕೆ:

ಭಾರತದಲ್ಲಿ ಮುಸ್ಲಿಂ ನಾಗರಿಕರು ನುಸುಳುಕೋರರು ಮತ್ತು ಅವರು ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಜನ್ಮ ನೀಡುತ್ತಾರೆ ಮತ್ತು ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ದೇಶದ ಸಂಪತ್ತನ್ನು ಮುಸ್ಲಿಮರಿಗೆ ಹಂಚಬೇಕಾಗುತ್ತದೆ ಎಂಬರ್ಥದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಭಾಷಣ ಮಾಡುವ ಮೂಲಕ ಕೋಮು ಉದ್ವಿಗ್ನತೆ ಮತ್ತು ಹಿಂದೂ ಅಂಧಾಭಿಮಾನವನ್ನು ಪ್ರಚೋದಿಸುವ ಪ್ರಧಾನಿ ಮೋದಿಯವರ ರಾಜಾರೋಷ ಪ್ರಯತ್ನವನ್ನು ನಾವು ಬಲವಾಗಿ ಖಂಡಿಸುತ್ತೇವೆ.

ಈ ಹೇಯ ಹೇಳಿಕೆಯು ಜನಜೀವನದ ಜ್ವಲಂತ ಸಮಸ್ಯೆಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆಯುವ ಮತ್ತು ಕೋಮು ಧ್ರುವೀಕರಣವನ್ನು ಹುಟ್ಟುಹಾಕುವ ಪ್ರಯತ್ನವಾಗಿದೆ. ಇದು ಚುನಾವಣಾ ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ ಮತ್ತು ಚುನಾವಣಾ ಆಯೋಗದ ತಕ್ಷಣದ ಕ್ರಮಕ್ಕೆ ನಾವು ಒತ್ತಾಯಿಸುತ್ತೇವೆ.

ದೇಶದ ಎಲ್ಲಾ ಪ್ರಜಾಸತ್ತಾತ್ಮಕ ಮನಸ್ಸಿನ ಜನರು ಪ್ರತಿಭಟನೆಯ ಧ್ವನಿ ಎತ್ತುವಂತೆ ನಾವು ಕರೆ ನೀಡುತ್ತೇವೆ ಮತ್ತು ಚುನಾವಣಾ ಆಯೋಗವು ತನ್ನ ಲೆಕ್ಕಾಚಾರದ ಮೌನವನ್ನು ಕೊನೆಗೊಳಿಸುವಂತೆ ಆಗ್ರಹಿಸುತ್ತೇವೆ.

## ಹಸಿವು – ಭಾರತದಲ್ಲಿ ಆಕ್ರಂದನ

# ಕಣ್ಕಟ್ಟು ಪ್ರಗತಿ(!)ಯ ಸ್ಪಷ್ಟ ಅನಾವರಣ

2023 ರಲ್ಲಿ ಬಿಡುಗಡೆಯಾದ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತವು 125 ದೇಶಗಳ ಪೈಕಿ 111ನೇ ಸ್ಥಾನದಲ್ಲಿ ತಿಣುಕುತ್ತಿದೆ. ಆ ಪಟ್ಟಿಯಲ್ಲಿ 28.7 ಅಂಕವನ್ನು ಪಡೆದಿರುವುದರಿಂದ ಭಾರತದಲ್ಲಿನ ಹಸಿವಿನ ಮಟ್ಟವನ್ನು 'ಗಂಭೀರವಾದದ್ದು' ಎಂದು ಗುರುತಿಸಲಾಗಿದೆ. ದೇಶದ ಜನರು ಹೇಗೆ ನಿರಂತರವಾಗಿ ಹಸಿವಿನ ವಿರುದ್ಧ ಹೋರಾಡುತ್ತಿದ್ದಾರೆ ಮತ್ತು ದುಡಿಯುವ ಕೋಟ್ಯಂತರ ಮಂದಿ ಬದುಕನ್ನು ನಡೆಸಲು ಕನಿಷ್ಠ ಸೌಲಭ್ಯಗಳಿಂದಲೂ ಹೇಗೆ ವಂಚಿತರಾಗಿದ್ದಾರೆ ಎಂಬ ಕಟು ವಾಸ್ತವವನ್ನು ಈ ಸೂಚ್ಯಂಕವು ಹೊರಗೆಡಹಿದೆ. ಇಂದಿಗೂ ಕೂಡ 100 ಕೋಟಿ ಭಾರತೀಯರು ಅಂದರೆ ಜನಸಂಖ್ಯೆಯ ಶೇ.74ರಷ್ಟು ಜನ ಆರೋಗ್ಯದಾಯಕ ಆಹಾರವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಎಲ್ಲೆಡೆ ಆರ್ಥಿಕ ಪ್ರಗತಿಯಾಗಿದೆ, ತಾಂತ್ರಿಕ ಅಭಿವೃದ್ಧಿಯಾಗಿದೆ ಎಂದೆಲ್ಲಾ ಅಬ್ಬರಿಸುವ ದೇಶವೊಂದರಲ್ಲಿ ಜನರಿಗೆ ಆಹಾರದಂತಹ ಮೂಲಭೂತ ಅವಶ್ಯಕತೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬ ಕಟುವಾದ ಪ್ರಶ್ನೆಯನ್ನು ಈ ವಾಸ್ತವಾಂಶವು ಹುಟ್ಟು ಹಾಕುತ್ತದೆ. ಭಾರತಕ್ಕಿಂತಲೂ ಕಡಿಮೆ ಅಭಿವೃದ್ಧಿ ಹೊಂದಿರುವ ಬಾಂಗ್ಲಾದೇಶ, ಗಂಭೀರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕವೂ ಕೂಡ ಹಸಿವಿನ ಸೂಚ್ಯಂಕದಲ್ಲಿ ಭಾರತವನ್ನು ಹಿಂದಿಕ್ಕಿವೆ. ಹಸಿವನ್ನು ನೀಗಿಸಲು ಆ ದೇಶಗಳು ಬಹಳ ಚೆನ್ನಾಗಿ ಪ್ರಯತ್ನಿಸುತ್ತಿವೆ. ವಿಶ್ವದ ಹಸಿದ ಜನರಲ್ಲಿ ಮೂರನೇ ಒಂದು ಭಾಗದಷ್ಟು ಜನರು ಭಾರತದಲ್ಲಿದ್ದಾರೆ ಎಂಬುದು ಕಟುವಾಸ್ತವ.

### ಅಸಮಾನತೆಯೇ ಮೂಲ ಕಾರಣ

ಭಾರತವು ಎದುರಿಸುತ್ತಿರುವ ಈ ಭಯಾನಕ ಹಸಿವಿನ ಬಿಕ್ಕಟ್ಟಿಗೆ ಸಂಪನ್ಮೂಲಗಳ ಕೊರತೆ ಕಾರಣವಲ್ಲ. ಬದಲಿಗೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ಅನ್ಯಾಯ ಮತ್ತು ಅಸಮಾನತೆಗಳೇ ಕಾರಣ. ಬಹುಶತಕೋಟ್ಯಧಿಪತಿ ಏಕಸ್ವಾಮ್ಯಾಧಿಪತಿಗಳು ಸೇರಿದಂತೆ ಕೈ ಬೆರಳಣಿಕೆಯಷ್ಟಿರುವ ಕೆಲವೇಕೆಲವು ಅತಿಶ್ರೀಮಂತರು ಅಸಂಖ್ಯಾತ ಬಡಜನತೆಯ ಬೆವರಿನ ಬುನಾದಿಯ ಮೇಲೆ ಹುಲುಸಾಗಿ ಬೆಳೆಯುತ್ತಿದ್ದಾರೆ. ಇಂತಹವರ ಬೆಳವಣಿಗೆಯನ್ನೇ ದೇಶದ ಅಭಿವೃದ್ಧಿ ಎಂದು ಬಿಂಬಿಸಲಾಗುತ್ತಿದೆ. ಸರ್ಕಾರದ ವರದಿಗಳ ಪ್ರಕಾರವೇ ದೇಶದಲ್ಲಿ ಒಂದೆಡೆ ಪ್ರತಿ ವರ್ಷವೂ 1.19 ಲಕ್ಷ ಕೋಟಿ ರೂಪಾಯಿ ಬೆಲೆಯ ಆಹಾರವನ್ನು ಹಾಳುಗೆಡವಲಾಗುತ್ತಿದ್ದರೆ, ಇನ್ನೊಂದೆಡೆ, ಪ್ರತಿದಿನವೂ 7000ಕ್ಕೂ ಹೆಚ್ಚು ಜನ ಹಸಿವಿನಿಂದ ಸಾವನ್ನಪ್ಪುತ್ತಿದ್ದಾರೆ, 20 ಕೋಟಿ ಜನರು ಪ್ರತಿದಿನವೂ ಖಾಲಿಹೊಟ್ಟೆಯೊಂದಿಗೆ ಮಲಗುತ್ತಿದ್ದಾರೆ.

### ರೈತರ ದುರವಸ್ಥೆ

ದೇಶದ ಹಸಿವಿನ ಬಿಕ್ಕಟ್ಟಿಗೆ ಮೂಲ ಕಾರಣವೆಂದರೆ ಕೇಂದ್ರದಲ್ಲಿ ರೈತರ ದುರವಸ್ಥೆಯೇ. ಇಡೀ ದೇಶಕ್ಕೆ ಅನ್ನ ನೀಡಲು ಹಗಲಿರುಳು ದುಡಿಯುವ ರೈತನಿಗೆ ತನ್ನ ಕುಟುಂಬಕ್ಕೆ ಆಹಾರ ಒದಗಿಸಿ ಹಸಿವನ್ನು ನೀಗಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಒಂದು ಕಡೆ ಆತ ಬೆಳೆದ ಬೆಳೆಗೆ ಸರಿಯಾದ ಪ್ರತಿಫಲ ದೊರಕುವುದಿಲ್ಲ. ಜೊತೆಗೆ, ಸಾಲದ ಹೊರೆ, ಕೃಷಿ ಬಳಕೆಯ ವಸ್ತುಗಳ ಬೆಲೆ ಏರಿಕೆ, ಕನಿಷ್ಠ ಮೂಲಭೂತ ನೀರಾವರಿಯ ಕೊರತೆ, ಬೆಳೆ ವಿಮೆ ಎಂಬ ಹೆಸರಿನಲ್ಲಿ ಮೋಸ, ಮನುಷ್ಯ ಸೃಷ್ಟಿಸಿರುವ ಬರ ಮತ್ತು ಪ್ರವಾಹಗಳಿಂದಾಗಿ ತಾನು ಮೈಮುರಿದು ದುಡಿದರೂ ಸಹ ಕನಿಷ್ಠ ಸಂಪಾದನೆಗೂ ಆತ ಪರದಾಡುವಂತಾಗಿದೆ. ಇವೆಲ್ಲವುಗಳೊಂದಿಗೆ ತಮ್ಮ ಬೆವರಿನ ಬೆಲೆಯನ್ನು ಪಡೆದುಕೊಳ್ಳಲು ಇರುವ ಅವರ ಎಲ್ಲ ನ್ಯಾಯಯುತ ಹಕ್ಕುಗಳನ್ನು ಕೂಡ ಕಸಿದುಕೊಳ್ಳಲಾಗುತ್ತಿದೆ. ಇದರಿಂದ ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಭಾರತದ ಕೃಷಿ ಕ್ಷೇತ್ರವು ವಿನಾಶದ ಅಂಚಿನಲ್ಲಿರುವಂತೆ ಕಾಣುತ್ತಿದೆ. ಇನ್ನೊಂದು ಕಡೆಯಲ್ಲಿ, ಖಾಸಗಿ ವ್ಯವಹಾರಸ್ಥರು–ಆಡಳಿತಗಾರರು–ಕರಾಳ ದಂಧೆಕೋರರು–ಅಕ್ರಮ ದಾಸ್ತಾನುಗಾರರು–ಬೆಲೆ ನಿಯಂತ್ರಕರು–ಮಧ್ಯವರ್ತಿಗಳ ದುಷ್ಟಕೂಟದ ಹಾವಳಿಯಿಂದಾಗಿ ಭೂಹೀನ ರೈತರು, ಸಣ್ಣ ಹಿಡುವಳಿದಾರರು ಮತ್ತು ಕೃಷಿ ಕಾರ್ಮಿಕರ ಸಂಖ್ಯೆಯಲ್ಲಿ ವಿಪರೀತ ಹೆಚ್ಚಳವಾಗಿದೆ ಹಾಗೂ ರೈತರ ಆತ್ಮಹತ್ಯೆಯಲ್ಲಿ ತೀವ್ರವಾದ ಏರಿಕೆಯಾಗಿದೆ. ಜೊತೆಗೆ ಕಾರ್ಪೊರೇಟ್‌ಗಳಿಂದ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಭೂಸ್ವಾಧೀನಗಳು ಮತ್ತು ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ನೀತಿಗಳ ಹೇರಿಕೆ ಸಣ್ಣ ಹಿಡುವಳಿದಾರರನ್ನು ಅಳಿವಿನ ಅಂಚಿಗೆ ತಳ್ಳಿವೆ. ಮತ್ತು ಆ ಮೂಲಕ ಗ್ರಾಮೀಣ ಬಡತನ ಮತ್ತು ಹಸಿವು ಉಲ್ಬಣಗೊಂಡಿವೆ. ಜೊತೆಗೆ, ಭಾರತವು ಸೇರಿದಂತೆ ಎಲ್ಲಾ ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಆಡಳಿತಗಾರರು ಇಂಧನ ಬಳಕೆ ಮತ್ತು ಇಂಗಾಲ ಹೊರಸೂಸುವಿಕೆ ಸಂಬಂಧಿತ ನಿಯಮಗಳ ಉಲ್ಲಂಘನೆ ಮಾಡುವುದರಿಂದ ಉಂಟಾಗುವ ಅನಿಯಮಿತ ಹವಾಮಾನ ಬದಲಾವಣೆಯು ಈಗಾಗಲೇ ಸಂಕಷ್ಟಗಳ ಸುಳಿಯಲ್ಲಿ ನರಳುತ್ತಿರುವ ರೈತರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಹಸಿವು ಮತ್ತು ಅಸಮಾನತೆಗಳ ಮೂಲೋತ್ಪಾಟನೆ ಮಾಡಲು ಭೂಮಿಯ ಮರುಹಂಚಿಕೆ ಮತ್ತು ಕೃಷಿಕ್ಷೇತ್ರದಲ್ಲಿ ಸುಧಾರಣೆಗಳನ್ನು ತರುವುದರೊಂದಿಗೆ ಪರಿಸರವನ್ನು ಕಾಪಾಡುವ ಅಗತ್ಯವಿದೆ ಎಂದು ಮಾರ್ಕ್ಸ್‌ವಾದಿ ವಿಶ್ಲೇಷಣೆಯು ಒತ್ತಿ ಹೇಳುತ್ತದೆ.

### ಕಟ್ಟಕಡೆಯ ಬಲಿಪಶು ಯಾರು?

ಭಾರತದಲ್ಲಿ ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಯು ಹಸಿವಿನ ವಿರುದ್ಧದ ಹೋರಾಟಕ್ಕೆ ದೊಡ್ಡ ತಡೆಗೋಡೆಯಾಗಿದೆ. ಪ್ರಗತಿಯ ಫಲ ದಕ್ಕದಂತೆ ಐತಿಹಾಸಿಕವಾಗಿ ವ್ಯವಸ್ಥಿತವಾಗಿ ಹೊರಗಿಡಲ್ಪಟ್ಟ, ಕಟ್ಟಕಡೆಯಲ್ಲಿರುವ ಮತ್ತು ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟ ದಲಿತರು, ಆದಿವಾಸಿಗಳು ಮತ್ತು ಇತರ ಸಮುದಾಯಗಳು ಯಾತನಾದಾಯಕ ನೋವನ್ನು ಅನುಭವಿಸುವಂತಾಗಿದೆ. ಜೊತೆಗೆ, ಇವರು ತೀವ್ರ ಅಪೌಷ್ಟಿಕತೆ ಮತ್ತು ಹಸಿವಿನ ಬಹುದೊಡ್ಡ ಪೆಟ್ಟು ತಿನ್ನುತ್ತಿರುವವರೂ ಸಹ. ಈ ಎಲ್ಲಾ ಸಮುದಾಯಗಳು ಒಂದು ಘನತೆಯ ಬದುಕಿನ ಕನಸು ಕಾಣುವುದೂ ದೂರದ ಮಾತು. ಬದಲಿಗೆ ಜಾತಿ ವ್ಯವಸ್ಥೆಯ ಅಗೋಚರ ತಡೆಗೋಡೆಗಳು ಈ ಸಮುದಾಯಗಳ ಮುಂದಿನ ತಲೆಮಾರುಗಳನ್ನು ಬಡತನ ಮತ್ತು ಹಸಿವಿನ ವಿಷವರ್ತುಲದಲ್ಲಿ ಮುಳುಗಿಸುತ್ತವೆ. ಮಹಿಳೆಯರು ಮತ್ತು ಮಕ್ಕಳು ಈ ವ್ಯವಸ್ಥೆಯ ಕಟ್ಟಕಡೆಯ ಬಲಿಪಶುಗಳು. ಜೊತೆಗೆ ವ್ಯಾಪಕವಾಗಿರುವ ಲಿಂಗ ಅಸಮಾನತೆಯಿಂದಾಗಿ ಮಹಿಳೆಯರು ಮೂಲಭೂತ ಹಕ್ಕುಗಳು ಮತ್ತು ಸಂಪನ್ಮೂಲಗಳಿಂದಲೂ ವಂಚಿತರಾಗುತ್ತಿದ್ದಾರೆ. ಇದೆಲ್ಲದರಿಂದಾಗಿ ಮಹಿಳೆಯರಲ್ಲಿ ರಕ್ತಹೀನತೆಯಂತಹ ಸಮಸ್ಯೆಗಳು ಹೆಚ್ಚಾಗಿ ಅವರು ಮೂಕ ವೇದನೆಯಿಂದ ನರಳುವಂತಾಗುತ್ತಿದೆ. ಇದು ಅಪೌಷ್ಟಿಕ ಮಕ್ಕಳ ಜನನಕ್ಕೆ ಕಾರಣವಾಗಿ ಭವಿಷ್ಯದ ಪೀಳಿಗೆಗೆ ಮಾರಕವಾಗುತ್ತಿದೆ. ಭಾರತದಲ್ಲಿ ಪ್ರತಿ ವರ್ಷವೂ ಅಪೌಷ್ಟಿಕತೆಯಿಂದಾಗಿ 3 ಲಕ್ಷ ಮಕ್ಕಳು ಸಾಯುತ್ತಿವೆ. ಅಂದರೆ ಪ್ರತಿದಿನ 4,500 ಮಕ್ಕಳು ಸಾವಿಗೀಡಾಗುತ್ತಿವೆ. ಇದರಲ್ಲಿ ಮೂರನೇ ಒಂದು ಭಾಗದ ಸಾವನ್ನು ಅಲ್ಪಪ್ರಯತ್ನದಿಂದಲೂ ತಡೆಯಬಹುದು.

### ನೀತಿಗಳ ವೈಫಲ್ಯ ಮತ್ತು ಸಾಂಸ್ಥಿಕ ಸವಾಲುಗಳು

ಸರ್ಕಾರದ ವಿವಿಧ ಘೋಷಿತ ಪೌಷ್ಟಿಕಾಂಶ ಕಾರ್ಯಕ್ರಮಗಳ ಜೊತೆಗೆ ಹಲವಾರು ಲೋಪದೋಷಗಳೊಂದಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ(ಪಿಡಿಎಸ್)ಯು ಅಸ್ತಿತ್ವದಲ್ಲಿದೆ ಎಂದರೂ ಹಸಿವಿನ ಸಮಸ್ಯೆ ಇನ್ನೂ ಜೀವಂತವಾಗಿದೆ ಎಂಬುದನ್ನು ಗುರುತಿಸಬೇಕು. ಇದಕ್ಕೆ ಕಾರಣ ಅನಿಯಂತ್ರಿತ ಭ್ರಷ್ಟಾಚಾರ, ಅಧಿಕಾರಶಾಹಿ ದಮನ, ಸರ್ಕಾರದ ಹೊಣೆಗೇಡಿತನ ಮತ್ತು ಮುಖ್ಯವಾಗಿ ಅಸಮಾನತೆಯಿಂದ ಕೂಡಿದ ಈ ಬಂಡವಾಳಶಾಹಿ ವ್ಯವಸ್ಥೆ. ಕನಿಷ್ಠ ಕ್ಯಾಲೋರಿ ಬಳಕೆಯನ್ನು ಖಾತ್ರಿಪಡಿಸಿಕೊಳ್ಳಲು ಅಕ್ಕಿ ಮತ್ತು ಗೋಧಿಯಂತಹ ಪ್ರಧಾನ ಆಹಾರ ಧಾನ್ಯಗಳನ್ನು ಒದಗಿಸುವಲ್ಲಿರುವ ಆಡಳಿತಾತ್ಮಕ ಗಮನವು ಸೂಕ್ಷ್ಮ ಪೋಷಕಾಂಶಗಳ ಕೊರತೆಯಿಂದ ಉಂಟಾಗುವ 'ಕಣ್ಣಿಗೆ ಕಾಣದ' ಹಸಿವನ್ನು ಕಡೆಗಣಿಸುತ್ತದೆ.

### ಮುಂದಿನ ನಡೆ

ಭಾರತದ ಹಸಿವಿನ ಬಿಕ್ಕಟ್ಟು ಅನಿವಾರ್ಯ ಹಣೆಬರಹವಲ್ಲ. ಬದಲಿಗೆ ಈ ದಮನಕಾರಿ ವ್ಯವಸ್ಥೆಯ ದೋಷಪೂರಿತ ನೀತಿಗಳ ಪರಿಣಾಮವಾಗಿದೆ. ಈ ಹಸಿವಿನ ಬಿಕ್ಕಟ್ಟು ದಶಕಗಳಷ್ಟು ಹಿಂದಿನಿಂದ ಎಲ್ಲ ಸರ್ಕಾರಗಳು ಜಾರಿಗೆ ತಂದಿರುವ ಜನ ವಿರೋಧಿ ನೀತಿಗಳ ಪ್ರತಿಫಲ ಎಂಬುದನ್ನು ಮರೆಯುವಂತಿಲ್ಲ. ಈ ಸತ್ಯವನ್ನ ಅಳಿಸಲು ಸಾಧ್ಯವಿಲ್ಲ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಈ ಕೆಟ್ಟ ಪರಿಸ್ಥಿತಿಗೆ ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ಅಂತರ್ಗತವಾಗಿರುವ ಅಸಮಾನತೆಗಳು ಮತ್ತು ಸಾಮಾಜಿಕ–ಆರ್ಥಿಕ ಸಂರಚನೆಗಳು ಕಾರಣ ಎಂಬುದನ್ನು ಮಾರ್ಕ್ಸ್‌ವಾದದ ವಸ್ತುನಿಷ್ಠ ವೈಜ್ಞಾನಿಕ ವಿಶ್ಲೇಷಣೆಯು ತೋರಿಸುತ್ತದೆ. ಬಂಡವಾಳಶಾಹಿ ಉತ್ಪಾದನಾ ಸಂಬಂಧವೇ ಇಂದು ಆಳವಾಗಿ ಬೇರೂರಿರುವ ಬಡತನಕ್ಕೆ ಕಾರಣವಾಗಿದೆ. ಸಂಪನ್ಮೂಲಗಳ ಮತ್ತು ಅವಕಾಶಗಳ ಅಸಮಾನ ಹಂಚಿಕೆಯ ಜೊತೆಗೆ ಶೋಷಣೆಯಿಂದ ಕೂಡಿದ ದುಡಿಮೆ ಪದ್ಧತಿಗಳು ದುಡಿಯುವ ಜನರಲ್ಲಿ ಮತ್ತು ಗ್ರಾಮೀಣ ಭಾಗದ ರೈತರಲ್ಲಿ ವ್ಯಾಪಕವಾದ ಅಭಾವ ಮತ್ತು ಹಸಿವು ಸೃಷ್ಟಿಸಲು ಕಾರಣವಾಗುತ್ತಿವೆ. ಗರಿಷ್ಠ ಲಾಭವನ್ನೇ ಗುರಿಯಾಗಿಸಿಕೊಂಡ ಈ ಬಂಡವಾಳಶಾಹಿಗಳು ಮತ್ತು ಅವರ ಸೇವಕರು ಕಾರ್ಮಿಕ ವರ್ಗ, ರೈತರು ಮತ್ತು ಇತರೆ ಕಟ್ಟಕಡೆಯ ನಿರ್ಲಕ್ಷಿತ ಸಮುದಾಯಗಳ ಸಮಸ್ತ ಕಲ್ಯಾಣವನ್ನು ಬದಿಗಿಟ್ಟು ತಮ್ಮ ಸ್ವಯಂ ಬೆಳವಣಿಗೆಗೆ ಮಾತ್ರ ಆದ್ಯತೆ ನೀಡುತ್ತಾರೆ. ಇದರಿಂದಾಗಿ ಎಲ್ಲಿಯವರೆಗೂ ಈ ಬಂಡವಾಳಶಾಹಿ ವ್ಯವಸ್ಥೆ ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯವರೆಗೂ ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರವಿಲ್ಲ.

ಆದರೂ ಕಳೆದ ಏಳು ದಶಕಗಳಿಂದ ನಮ್ಮ ಪಕ್ಷ ಎಸ್‌ಯುಸಿಐ(ಕಮ್ಯುನಿಸ್ಟ್) ಮೇಲೆತ್ತುತ್ತಿರುವ ಬೇಡಿಕೆಯಂತೆ ಸರ್ಕಾರವೇ ಮುಂದೆ ನಿಂತು ಅಗತ್ಯ ವಸ್ತುಗಳ, ಅದರಲ್ಲೂ ವಿಶಿಷ್ಟವಾಗಿ ಆಹಾರ ಪದಾರ್ಥಗಳ ವ್ಯಾಪಾರ–ವಹಿವಾಟನ್ನು ತನ್ನ ಕೈಗೆತ್ತಿಕೊಂಡರೆ ಜನರಿಗೆ ಸ್ವಲ್ಪ ಮಟ್ಟಿನ ಪರಿಹಾರವನ್ನು ಒದಗಿಸಬಹುದು. ಇದರರ್ಥ ಸಂಗ್ರಹಣೆ ಅಥವಾ ವಿತರಣಾ ಕಾರ್ಯವಿಧಾನದಲ್ಲಿ ಯಾವುದೇ ಖಾಸಗಿ ಮಾಲೀಕರ ಹಸ್ತಕ್ಷೇಪವಿರಲು ಸಾಧ್ಯವಾಗುವುದಿಲ್ಲ. ಸರ್ಕಾರವು ಸ್ವಯಂ ಉತ್ಪಾದಕರಿಂದ ಸಮಂಜಸವಾದ ಬೆಲೆಗೆ ವಸ್ತುಗಳನ್ನು ಖರೀದಿಸಿ ನಂತರ ಅದನ್ನು ಕೈಗೆಟುಕುವ ದರದಲ್ಲಿ ಜನರಿಗೆ ವಿತರಿಸಬೇಕಾಗುತ್ತದೆ. ಆಗ ಮಾತ್ರ ಈ ಹಸಿವಿನ ಸಮಸ್ಯೆಗಳನ್ನು ಸ್ವಲ್ಪಮಟ್ಟಿಗೆ ಸುಧಾರಿಸಬಹುದು. ■

## ಕಾಮ್ರೇಡ್ ಮಲ್ಲಿನಾಥ ಸಿಂಘೆ ಲಾಲ್ ಸಲಾಮ್!



ಎಸ್‌ಯುಸಿಐ(ಸಿ) ಪಕ್ಷದ ಕಲಬುರಗಿಯ ದಕ್ಷಿಣ ಸ್ಥಳೀಯ ಸಮಿತಿಯ ಸದಸ್ಯರು ಹಾಗೂ ಎಐಯುಟಿಯುಸಿ ಕಾರ್ಮಿಕ ಸಂಘಟನೆಯ ಜಿಲ್ಲಾ ಸಮಿತಿಯ ಸದಸ್ಯರಾದ ಕಾಮ್ರೇಡ್ ಮಲ್ಲಿನಾಥ ಸಿಂಘೆ ಅವರು 25.04.2024ರಂದು ಮಧ್ಯಾಹ್ನ ಭೀಕರ ರಸ್ತೆ ಅಪಘಾತದಲ್ಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ನಮ್ಮ ಪಕ್ಷದಲ್ಲಿ ಸಕ್ರಿಯರಾಗಿದ್ದು, ಎಐಯುಟಿಯುಸಿ ನೇತೃತ್ವದಲ್ಲಿ ಕಾರ್ಮಿಕರನ್ನು ಸಂಘಟಿಸುತ್ತಿದ್ದ ಅವರ ನಿಧನದಿಂದ ಪಕ್ಷ ಹಾಗೂ ನಮ್ಮ ಕಾರ್ಮಿಕ ಸಂಘಟನೆ ಓರ್ವ ಉತ್ಸಾಹಿ, ಸಮರ್ಥ ಕಾರ್ಯಕರ್ತರನ್ನು ಕಳೆದುಕೊಂಡಿದೆ. ಕಾರ್ಮಿಕ ದೃಷ್ಟಿಕೋನ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ. ■

## ಕಾಮ್ರೇಡ್ ಜಮಾಲುದ್ದೀನ್ ಲಾಲ್ ಸಲಾಮ್!



ರಾಯಚೂರು ಎಸ್‌ಯುಸಿಐ(ಸಿ)ಪಕ್ಷದ ಸದಸ್ಯರು ಹಾಗೂ ಎಐಕೆಕೆಎಂಎಸ್ ಜಿಲ್ಲಾಧ್ಯಕ್ಷರಾಗಿದ್ದ ಕಾಮ್ರೇಡ್ ಜಮಾಲುದ್ದೀನ್ 17.04.2024 ರಂದು ಬೆಳಗ್ಗೆ ಹೃದಯಸ್ತಂಭನದಿಂದ ಹಠಾತ್ ನಿಧನರಾದರು. ಸದಾ ಪಕ್ಷದ ಚಟುವಟಿಕೆಗಳಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಭಾಗವಹಿಸುತ್ತಾ, ಸುತ್ತಮುತ್ತಲ ಹತ್ತೇಳು ಗ್ರಾಮಗಳಲ್ಲಿ ರೈತರನ್ನು–ಕೃಷಿಕಾರ್ಮಿಕರನ್ನು ಸಂಘಟಿಸುತ್ತಿದ್ದ ದೊಡ್ಡ ಬಲವೊಂದು ಇಲ್ಲವಾಗಿರುವುದು ವೇದನದಾಯಕ ವಿಷಯ. ಕಿತ್ತು ತಿನ್ನುವ ಕಡು ಬಡತನದ ನಡುವೆಯೂ, ಕೌಟುಂಬಿಕ ಜೀವನದ ಹಲವಾರು ಸಮಸ್ಯೆಗಳ ಮಧ್ಯದಲ್ಲೂ ಸಾಮಾಜಿಕ ಚಳುವಳಿಯಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡಿದ್ದ ಉತ್ಸಾಹಿ ಅವರು. ಇಂತಹ ಮೇರು ವ್ಯಕ್ತಿತ್ವದ ಒಂದು ಬಹುದೊಡ್ಡ ಶಕ್ತಿಯನ್ನು ಕಳೆದುಕೊಂಡ ರೈತ–ಕೃಷಿಕಾರ್ಮಿಕರ–ಜನ ಹೋರಾಟಕ್ಕೆ ಹಾಗೂ ರಾಯಚೂರು ಪಕ್ಷಕ್ಕೆ ತುಂಬಲಾರದ ನಷ್ಟವಾಗಿದ್ದು ಅವರಿಗೆ ಕಾರ್ಮಿಕ ದೃಷ್ಟಿಕೋನ ಅಂತಿಮ ನಮನವನ್ನು ಸಲ್ಲಿಸುತ್ತದೆ. ■

# ಎಸ್‌ಯುಸಿಐ (ಸಿ) ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ....

ಪುಟ 3ರಿಂದ

ಅಡಿಗೆ ಮಾಡಿ ಬಡಿಸಿದ್ದಾರೆ. ಅವರ ಪ್ರೀತಿಗೆ ಬೆಲೆ ಕಟ್ಟಲಾದೀತೇ!

ಕೊಪ್ಪಳದ ಗಡ್ಡಿ ಗ್ರಾಮದಲ್ಲಿ ಕಾ. ಶರಣಪ್ಪನವರ ಚುನಾವಣಾ ನಿಧಿ ಸಂಗ್ರಹಕ್ಕೆ ಹೋದಾಗ, ಗ್ರಾಮದ ಎಲ್ಲಾ ಕಟ್ಟಡ ಕಾರ್ಮಿಕರು, ನಮ್ಮ ಪಕ್ಷದ ಬೆಂಬಲಿಗರು, "ಇದು ನಮ್ಮ ಪಕ್ಷ, ಇದು ಬಡವರ, ಕಾರ್ಮಿಕರ ಪಕ್ಷ, ನಮ್ಮ ಊರಿನ ಹುಡುಗ ನಿಂತಿದ್ದಾನೆ, ನಾವೆಲ್ಲರೂ ಬೆಂಬಲಿಸಬೇಕು." ಎಂದು ಮನದುಂಬಿ ಹರಸಿದರು, ಉದಾರವಾಗಿ ಹಣ ನೀಡಿದರು.



ಕಾ. ಎಸ್.ಎನ್. ಸ್ವಾಮಿ: ಅಭ್ಯರ್ಥಿ, ತುಮಕೂರು

ತುಮಕೂರು ಲೋಕಸಭಾ ಚುನಾವಣೆ ಅಭ್ಯರ್ಥಿಯಾಗಿ ಕಾ. ಎಸ್. ಎನ್. ಸ್ವಾಮಿಯವರು ನಾಮಪತ್ರವನ್ನು ಸಲ್ಲಿಸಿದ ಬಳಿಕ, ತಿಪಟೂರಿನ ಹಣ್ಣಾಪುರ ಬಳಿ ಇರುವ ಕೆಂಚರಾಯನಗರದಲ್ಲಿ ಚುನಾವಣಾ ಪ್ರಚಾರಕ್ಕೆ ಹೋದಾಗ ಬಂದಂಥ ಜನರ ಪ್ರತಿಕ್ರಿಯೆ: "ಇಂತಹ ಒಬ್ಬ ರೈತರ ಕಾಳಜಿ ಇರುವಂತವರು ಮತ್ತು ರೈತರ ಪರವಾಗಿ ಹೋರಾಡುವಂತಹ ವ್ಯಕ್ತಿಯ ಪರವಾಗಿ ಸದಾ ನಾವು ಇರುತ್ತೇವೆ." ತುಮಕೂರಿನ ಮಾರುಕಟ್ಟೆಯ ವ್ಯಾಪಾರಿಗಳು ನಮ್ಮ ಸಂಗಾತಿಗಳ ಅಡುಗೆಗಾಗಿ ತರಕಾರಿ ದೇಣಿಗೆ ನೀಡಿದ್ದಾರೆ.

ಹೊಸದುರ್ಗದ ಪಕ್ಷದ ಬೆಂಬಲಿಗರೊಬ್ಬರು ಫೋನ್ ಮಾಡಿ, ನಾವು ಚಿತ್ರದುರ್ಗದಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಿರುವ ಬಗ್ಗೆ ತುಂಬಾ ಸಂತಸ ವ್ಯಕ್ತಪಡಿಸಿದರು: "ಪ್ರಜಾಸತ್ತಾತ್ಮಕ ಹಕ್ಕುಗಳು ಹರಣವಾಗುತ್ತಿರುವಾಗ, ಪ್ರಜಾಪ್ರಭುತ್ವ ಎಂಬುದೇ ಒಂದು ಕ್ಲೀಷೆಯಂತಾಗಿರುವಾಗ ಜನಪರವಾಗಿ ನಿಜವಾದ ಧ್ವನಿ ಎತ್ತಲು ನಿಮ್ಮಂತಹ ಹೋರಾಟನಿರತ ಪಕ್ಷ ಅಭ್ಯರ್ಥಿಯನ್ನು ನಿಲ್ಲಿಸಿರುವುದು ತುಂಬಾ ಒಳ್ಳೆಯದು. ಎಲ್ಲಾ ಜನವಿರೋಧಿ ಪಕ್ಷದ ಅಭ್ಯರ್ಥಿಗಳನ್ನು ನೋಡಿ ರೋಸಿ ಹೋದ ನಮ್ಮಂತಹವರಿಗೆ ಒಂದು ನಿಜವಾದ ಪರ್ಯಾಯವನ್ನು ಕೊಟ್ಟಂತಾಗುತ್ತದೆ. ಸೋಲು–ಗೆಲುವು ಮುಖ್ಯವಲ್ಲ. ಈ ಸ್ಪರ್ಧೆಯನ್ನು ಒಂದು ವೈಚಾರಿಕ ಸಂಘರ್ಷವೆಂದು ನೀವು ಪರಿಗಣಿಸಿರುವುದು ತುಂಬಾ ವಿಶಿಷ್ಟವಾದುದು. ನನ್ನ ಬೆಂಬಲ ನಿಮಗೆ ಯಾವತ್ತೂ ಇದೆ" ಎಂದು ಹೇಳಿದರು.

ಬೆಂಗಳೂರಿನ ಪಾರ್ಕೊಂದರಲ್ಲಿ ನಮಗೆ ಸಿಕ್ಕಿದ ಕೆಲ ಅಲ್ಪಸಂಖ್ಯಾತರು, ಎಡಪಂಥೀಯರೆನಿಸಿಕೊಂಡ ಸಿಪಿಐ, ಸಿಪಿಐ (ಎಂ) ಬಗ್ಗೆ ಗೊಂದಲದಲ್ಲಿದ್ದರು. ಆದರೆ, ಇವೆರಡೂ ಪಕ್ಷಗಳು ಹೋರಾಟದ ಹಾದಿ ಬಿಟ್ಟು ಕೆಲ ಪಾರ್ಲಿಮೆಂಟರಿ ಸೀಟುಗಳಿಗಾಗಿ ಬಂಡವಾಳಶಾಹಿ ಪಕ್ಷಗಳೊಡನೆ ರಾಜಿ ಮಾಡಿಕೊಂಡಿರುವ ಬಗ್ಗೆ ಅವರೊಡನೆ ಚರ್ಚೆಯ ಬಳಿಕ ಅದು ನಿವಾರಣೆಯಾಯಿತು ಎಂದು ಹೇಳಿದರು.

ಇನ್ನೊಂದೆಡೆ, ನಮ್ಮ ನಾಯಕರ ಭಾಷಣದ ಬಳಿಕ ಅವರ ಬಳಿ ಬಂದ ಕೆಲವರು ಹಿಂದೊಮ್ಮೆ ಸಿಪಿಐ (ಎಂ) ಬೆಂಬಲಿಗರಾಗಿದ್ದು, ಈಗ ಅದರೊಂದಿಗಿನ ಭಿನ್ನಾಭಿಪ್ರಾಯಗಳ ಕಾರಣದಿಂದ ದೂರ ಸರಿದವರು. ನಮ್ಮೊಡನೆಯ ಭೇಟಿ, ಚರ್ಚೆಯ ಬಳಿಕ ತಮ್ಮ ಸಂತೋಷ ವ್ಯಕ್ತ ಪಡಿಸಿ ತಮ್ಮ ಬೆಂಬಲ ನೀಡಿದರು.

ಮನೆಗಳಿಗೆ ನಮ್ಮ ಅಭ್ಯರ್ಥಿಯ ಭೇಟಿಯ ಸಂದರ್ಭದಲ್ಲಿ, ನಮ್ಮ ಬೆಂಬಲಿಗರಾದ ಓರ್ವ ಶಾಲಾ ಶಿಕ್ಷಕಿಯ ಹಲವು ಪರಿಚಯಸ್ಥರೊಂದಿಗೆ ಚರ್ಚೆ ನಡೆಯಿತು. ಅಲ್ಲಿದ್ದ ಪಶ್ಚಿಮ ಬಂಗಾಲದವರೊಬ್ಬರು, ಹಿಂದೆ ತಾವು ಸಿಪಿಐ (ಎಂ) ಬೆಂಬಲಿಗರಾಗಿದ್ದು, ನಂತರ ಟಿಎಂಸಿಗೆ ಮತ ಚಲಾಯಿಸಿದ್ದು, ಇವೆರಡರ ಬಗ್ಗೆಯೂ ಈಗ ನಿರಾಸೆಯಾಗಿದೆ ಎಂದು ಹೇಳಿದರು. "ಸಿಪಿಐ (ಎಂ), ಸಿಪಿಐ ಇಬ್ಬರೂ ನೇತಾಜಿ, ಭಗತ್‌ಸಿಂಗ್‌ರನ್ನು ನಿಮ್ಮ ಹಾಗೆ ಎತ್ತಿ ಹಿಡಿಯುವುದಿಲ್ಲ, ಹಾಗಾಗಿ ನೀವು ಬೇರೆಯೇ ತರಹ. ನಿಮ್ಮ ವೈಚಾರಿಕತೆ, ಮಾತು ಕೇಳಿ ನನಗೂ ರಾಜಕೀಯದಲ್ಲಿ ಆಸಕ್ತಿ ಬರುತ್ತಿದೆ. ನಿಮ್ಮ ಬಗ್ಗೆ ಇನ್ನಷ್ಟು ತಿಳಿದು ನಿಮ್ಮನ್ನು ಬೆಂಬಲಿಸುತ್ತೇನೆ." ಎಂದರು. ಇನ್ನೊಂದು ಮನೆಯಲ್ಲಿದ್ದ ಬಿಜೆಪಿಯ ಸ್ಥಳಿಯ ನಾಯಕರೊಬ್ಬರು, ಸುದೀರ್ಘ ಚರ್ಚೆಯ ಬಳಿಕ ಹೇಳಿದ್ದೆಂದರೆ: "ಬಿಜೆಪಿಯಲ್ಲಿನ ಭ್ರಷ್ಟಾಚಾರವನ್ನು ಕಂಡು ನನಗೆ ಪಕ್ಷದ ಬಗ್ಗೆ ತಿರಸ್ಕಾರ ಉಂಟಾಗಿದ್ದು, ಅದನ್ನು ಬಿಡುವ ಭಾವನೆ ಬಂದಿದೆ. ನಿಮ್ಮೊಂದಿಗಿನ ಚರ್ಚೆಯಲ್ಲಿ ನನಗೆ ಬಹಳಷ್ಟು ವಿಷಯಗಳು ತಿಳಿದವು. ನಿಮ್ಮ ಭೇಟಿ ಆಗಿದ್ದು ಬಹಳ ಖುಷಿ ತಂದಿದೆ. ನಾನು ನಿಮಗೆ ಎಲ್ಲಾ ರೀತಿಯ ಬೆಂಬಲ ಮತ್ತು ಸಹಕಾರ ನೀಡುತ್ತೇನೆ. ಮುಂದೆಯೂ ನಾವು ಜೊತೆಗೂಡಿ ಬಹಳ ಕೆಲಸ ಮಾಡೋಣ." "ರಾಮಮಂದಿರಕ್ಕಾಗಿ ಅಷ್ಟೊಂದು ಹಣ ಖರ್ಚು ಮಾಡುವ ಬದಲಿಗೆ, ಅದನ್ನು ಅವಶ್ಯಕತೆ ಇರುವವರಿಗೆ ಕೊಡಬಹುದಾಗಿತ್ತು." ಎಂದು ಒಬ್ಬ ಮಹಿಳೆ ನಮ್ಮೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಂಡರು. ಮತ್ತವರು ಹೇಳಿದ್ದೆಂದರೆ: "ಸತ್ಯ ನಿಮ್ಮೊಡನೆ ಇರುವಾಗ ನಾವೂ ನಿಮ್ಮ ಜೊತೆಯೇ ಇರಬೇಕು, ಇರುತ್ತೇವೆ." ಎಂದು. ಇನ್ನೊಂದು ಮನೆಯಲ್ಲಿನ ಐಟಿ ವೃತ್ತಿಯಲ್ಲಿನ ಒಬ್ಬರು ಹಾಸನದವರು. ಅವರು 'ಆಶಾ'ಗಳಿಗೆ ನ್ಯಾಯ ದೊರಕಿಸಲು ನಮ್ಮ ಕಾರ್ಮಿಕ ಸಂಘಟನೆ ನಡೆಸುತ್ತಿರುವ ಹೋರಾಟವನ್ನು ಗಮನಿಸಿದ್ದಾರೆ; ನಮ್ಮ 'ಕಾರ್ಮಿಕ ದೃಷ್ಟಿಕೋನ'ವನ್ನು ನಿಯಮಿತವಾಗಿ ಓದುತ್ತಿರುವುದಾಗಿ ಹೇಳಿ ನಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಪಕ್ಷದ ನಾಯಕರು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುವಾಗ, ಓರ್ವ ಯುವಕ ಅದರ ಧ್ವನಿ ಮುದ್ರಿಕೆ ಮಾಡಿ ಸುಮಾರು 15 ಗ್ರೂಪುಗಳಿಗೆ ಕಳುಹಿಸಿ ನಮಗೆ ಮತ ನೀಡಲು ಆಗ್ರಹಿಸಿದ್ದು ಕಂಡುಬಂತು! ಹಲವು ಬೆಂಬಲಿಗರು ನಮ್ಮ ಅಭ್ಯರ್ಥಿಗಳ ಚುನಾವಣಾ ಪೋಸ್ಟರನ್ನು ತಮ್ಮ ಸ್ಟೇಟಸ್ ಆಗಿ ಹಾಕಿಕೊಂಡಿದ್ದಾರೆ.

## ಜನರಿಂದ ಸನ್ಮಾನ

ಬಹಳೆಡೆಗಳಲ್ಲಿ ಪ್ರಚಾರಕ್ಕೆ ಹೋದ ನಮ್ಮ ಕಾಮ್ರೇಡರಿಗೆ ರಾಜಮರ್ಯಾದೆಯೇ, ಅದೂ ಬಡ ಜನರಿಂದ. ಟೀ, ಕಾಫಿ, ಹಣ್ಣಿನ ರಸ ಸರಬರಾಜು, ಕೆಲವೆಡೆ ಊಟ–ತಿಂಡಿ. ತಮ್ಮ ಬಡತನದಲ್ಲೂ ನಮಗೆ ಆತಿಥ್ಯ ನೀಡುವ ಅವರ ಸಹೃದಯತೆ, ಪ್ರೀತಿ ನಮ್ಮ ಅಮೂಲ್ಯ ಸಂಪತ್ತು! ರಾಯಚೂರಿನ ಅಭ್ಯರ್ಥಿ ಕಾ. ರಾಮಲಿಂಗಪ್ಪ ಮತ್ತು ದಾವಣಗೆರೆಯ ಅಭ್ಯರ್ಥಿ, ಕಾ. ಅಣಬೇರು ತಿಪ್ಪೇಸ್ವಾಮಿಯವರು ತಮ್ಮ ಊರುಗಳಿಗೆ ಪ್ರಚಾರಕ್ಕೆ ಹೋದಾಗ, ತಡರಾತ್ರಿಯಾದರೂ ಅಲ್ಲಿ ನೆರೆದಿದ್ದ ನೂರಾರು ಜನ, ಅವರನ್ನು ಪ್ರೀತಿಯಿಂದ ಸ್ವಾಗತಿಸಿದ್ದಾರೆ, ಶಾಲು ಹಾಕಿ ಗೌರವಿಸಿದ್ದಾರೆ.

'ಓಟು ಮತ್ತು ನೋಟು', ಎಂಬ ನಮ್ಮ ಅಭಿಯಾನಕ್ಕೆ, 'ಇದು ನಿಮ್ಮದೇ ಪಕ್ಷ, ನಿಮ್ಮದೇ ಹೋರಾಟ, ಅದಕ್ಕೆ ಕಾಣಿಕೆ ನೀಡಿ' ಎಂಬ ನಮ್ಮ ಮನವಿಗೆ ಸ್ಪಂದಿಸಿದ ಜನ ತಮ್ಮ ಕೈಲಾದಷ್ಟು ಕೊಡುಗೆ ನೀಡಿದ್ದಾರೆ. ಅಸಹಾಯ ಜನರಿಗೆ ಹಣ–ಕೊಡುಗೆಗಳ ಆಮಿಶ ಒಡ್ಡಿ ಅವರ ಮತಗಳನ್ನು ಖರೀದಿಸುವ ದೊಡ್ಡ ದೊಡ್ಡ ಬಂಡವಾಳಶಾಹಿ ಪಕ್ಷಗಳ ಮಧ್ಯೆ, ಇದೊಂದು ಅಪರೂಪದ ಪಕ್ಷ ಎಂದವರಿಗೆ ಅನಿಸಿದೆ. ದಿನನಿತ್ಯದ ಗಳಿಕೆಯಿಂದಲೇ ಜೀವನ ಸಾಗಿಸುವಂತಹ ದಿನಗೂಲಿಗಳು, ಬೀದಿಬದಿ ವ್ಯಾಪಾರಿಗಳು, ಪೌರ ಕಾರ್ಮಿಕರು, ಮನೆಗೆಲಸದವರು ಹೋರಾಟದ ಪಕ್ಷಕ್ಕೆ ನೀಡಿರುವ ದೇಣಿಗೆ, ಹಾರೈಕೆಗಳಿಂದ ಮನತುಂಬಿ ಬಂದಿದೆ.

## ಸಮೂಹ ಮಾಧ್ಯಮಗಳಿಂದ ಸಿಕ್ಕ ಅಭೂತಪೂರ್ವ ಬೆಂಬಲ

ರಾಜ್ಯದ ಕನ್ನಡ, ಇಂಗ್ಲಿಷ್, ಉರ್ದು ದಿನಪತ್ರಿಕೆಗಳು ನಮಗೆ ನೀಡಿದ ಬೆಂಬಲ ಅನನ್ಯ. ಸಾಮಾನ್ಯವಾಗಿ ದೊಡ್ಡದೊಡ್ಡ ಬಂಡವಾಳಶಾಹಿ ಪಕ್ಷಗಳ ಬಗ್ಗೆ ಪೇಜುಗಟ್ಟಳೆ ಬರೆದು, ನಮ್ಮ ಬಗ್ಗೆ ಏನೂ ಬರೆಯದೆ, ಅಥವಾ ಬರೆದರೂ ಸಂಕ್ಷಿಪ್ತವಾಗಿ ಬರೆಯುವ ದಿನಪತ್ರಿಕೆಗಳು ಈ ಬಾರಿ ನಮಗೆ ಸಲ್ಲಬೇಕಾದ ಗೌರವವನ್ನು ತಮ್ಮ ಲೇಖನಗಳ ಮೂಲಕ ಸಲ್ಲಿಸಿವೆ. ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆದ ನಮ್ಮ ಪತ್ರಿಕಾ ಗೋಷ್ಠಿಗಳಲ್ಲೂ ಭಾಗವಹಿಸಿದ ಪತ್ರಿಕಾ ವರದಿಗಾರರು ನಮ್ಮೊಂದಿಗೆ ಚರ್ಚಿಸಿದ್ದಾರೆ, ನಮ್ಮ ಧ್ಯೇಯೋದ್ದೇಶಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ, ನಮ್ಮ ವಿಚಾರಗಳನ್ನು ಪ್ರಚಾರ ಮಾಡಿದ್ದಾರೆ. ಚಾಮರಾಜನಗರದಲ್ಲಿಯ ನಮ್ಮ ಅಭ್ಯರ್ಥಿ ಕಾ. ಸುಮಾ, ದಶಕಗಳ ಬಳಿಕ ಇಲ್ಲಿ ಸ್ಪರ್ಧಿಸಿರುವ ಏಕೈಕ ಮಹಿಳಾ ಅಭ್ಯರ್ಥಿ ಎಂಬ ಪ್ರಶಂಸೆ ಸಹ ವ್ಯಕ್ತವಾಗಿದೆ. ಅಲ್ಲದೆ, ಇತರ ಪಕ್ಷಗಳ ಎಲ್ಲಾ ಅಭ್ಯರ್ಥಿಗಳು ಕೋಟಿಕೋಟಿ ರೂಪಾಯಿ ಮೌಲ್ಯದ ತಮ್ಮ ಮತ್ತು ತಮ್ಮ ಕುಟುಂಬದವರ ಸಂಪತ್ತನ್ನು ಘೋಷಿಸಿಕೊಂಡರೆ, ಬರಿಗೈಯ ಅಥವಾ ಜೀವನೋಪಾಯದ ಕನಿಷ್ಠ ಅಗತ್ಯಗಳನ್ನು ಮಾತ್ರ ಹೊಂದಿರುವ ನಮ್ಮ ಅಭ್ಯರ್ಥಿಗಳ ಬಗ್ಗೆ ಮೆಚ್ಚುಗೆಯೂ ಬಂದಿದೆ.

ಜೊತೆಗೆ, ಟೀವಿ ಮಾಧ್ಯಮ ಸಹ ಇತರ ಪಕ್ಷಗಳ ನಾಯಕರ ಜೊತೆಗೆ ನಮ್ಮ ಸಂಗಾತಿಗಳೊಂದಿಗೆಯೂ ಚರ್ಚೆ ಏರ್ಪಡಿಸಿ ನಮ್ಮ ಪ್ರಚಾರದಲ್ಲಿ ಕೈಜೋಡಿಸಿವೆ.

ಈ ಮಾಧ್ಯಮಮಿತ್ರರಿಗೆ ನಮ್ಮ ನಮಸ್ಕಾರ!

ಅಷ್ಟಲ್ಲದೆ, ಸಾಮಾಜಿಕ ಮಾಧ್ಯಮವಾದ ಫೇಸ್‌ಬುಕ್‌ನಲ್ಲಿ ಪ್ರಸಾರವಾದ ನಮ್ಮ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಕೆ. ರಾಧಾಕೃಷ್ಣರವರ ಭಾಷಣಗಳು ಸಹ, ನಮ್ಮ ವಿಚಾರಗಳನ್ನು ರೈತ–ಕೃಷಿ ಕಾರ್ಮಿಕರು, ಕಾರ್ಮಿಕರು ಮತ್ತು ಯುವಜನರನ್ನು ತಲುಪಿಸುವುದರಲ್ಲಿ ಯಶಸ್ವಿಯಾಗಿವೆ.



ಚಿತ್ರದುರ್ಗ: ಅಭ್ಯರ್ಥಿ ಕಾ. ಸುಜಾತಾ ಡಿ. ಪರ ಪಕ್ಷದ ಕಾರ್ಯದರ್ಶಿ ಕಾ. ಕೆ. ಉಮಾ ಅವರ ಪ್ರಚಾರಾಂದೋಲನ

ಜೊತೆಗೆ, ಅಭ್ಯರ್ಥಿಗಳ ಪರವಾಗಿಯೂ ಕಾ. ರಾಧಾಕೃಷ್ಣ ಮತ್ತು ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ.ಉಮಾ ಅವರನ್ನು ಒಳಗೊಂಡಂತೆ ಇತರ ರಾಜ್ಯ ನಾಯಕರೂ ಸಹ ವಿವಿಧ ಜಿಲ್ಲೆಗಳಲ್ಲಿ ಪ್ರಚಾರಾಂದೋಳನ ನಡೆಸಿದ್ದಾರೆ. ಅಲ್ಲಿ ಒಗ್ಗೂಡಿದ ಜನ ಸಾಗರ ಅವರ ಮಾತುಗಳನ್ನು ಆಲಿಸಿದೆ, ತಮ್ಮ ಬೆಂಬಲ ಸೂಚಿಸಿದೆ.

ಚುನಾವಣೆಯ ಫಲಿತಾಂಶ ಏನೇ ಇರಲಿ, ನಮ್ಮ ಪ್ರಮುಖ ಗುರಿಗಳಾದ ಜನರನ್ನು ರಾಜಕೀಯವಾಗಿ ಜಾಗೃತಗೊಳಿಸುವುದು ಮತ್ತು ಅವರ ಬೆಂಬಲ ಗಳಿಸುವುದು, ಇವನ್ನು ತಲುಪುವಲ್ಲಿ ನಮ್ಮ ಪಕ್ಷ ಯಶಸ್ವಿಯಾಗಿದೆ. ■

## ಅಭ್ಯರ್ಥಿಗಳಿಂದ ಪ್ರಚಾರಾಂದೋಲನ



ಕಾ. ಸುಮಾ ಎಸ್.: ಅಭ್ಯರ್ಥಿ, ಚಾಮರಾಜನಗರ




ಕಾ. ಎನ್. ಕಲಾವತಿ: ಅಭ್ಯರ್ಥಿ, ಚಿಕ್ಕಬಳ್ಳಾಪುರ

## ಮತದಾರರೊಂದಿಗೆ ಸಂವಾದ



ಕಾ. ಎಚ್.ಪಿ. ಶಿವಪ್ರಕಾಶ್: ಅಭ್ಯರ್ಥಿ, ಬೆಂಗಳೂರು ಕೇಂದ್ರ


ಕಾ. ದೇವದಾಸ್: ಅಭ್ಯರ್ಥಿ, ಬಳ್ಳಾರಿ


ಕಾ. ಸುನಿಲ್ ಟಿ.ಆರ್.: ಅಭ್ಯರ್ಥಿ, ಮೈಸೂರು-ಕೊಡಗು


ಕಾ. ಹೇಮಾವತಿ: ಅಭ್ಯರ್ಥಿ, ಬೆಂಗಳೂರು ಗ್ರಾಮೀಣ

## ಪಾದಯಾತ್ರೆ


ಕಾ. ರಾಮಲಿಂಗಪ್ಪ: ಅಭ್ಯರ್ಥಿ, ರಾಯಚೂರು


ಕಾ.ಶರಣಬಸವ ಗೋನವಾರ: ಅಭ್ಯರ್ಥಿ, ಧಾರವಾಡ

## ಮಾಧ್ಯಮಮಿತ್ರರೊಂದಿಗೆ ಪತ್ರಿಕಾ ಗೋಷ್ಠಿ



ಕಾ. ಗಂಗಾಧರ್ ಬಡಿಗೇರ್: ಅಭ್ಯರ್ಥಿ, ಹಾವೇರಿ



ಕಾ. ಮಲ್ಲಿಕಾರ್ಜುನ ಎಚ್.ಟಿ.: ಅಭ್ಯರ್ಥಿ, ಬಾಗಲಕೋಟೆ

## ಓಟು-ನೋಟು-ಅಭ್ಯರ್ಥಿಗಳಿಂದ ಜನರಲ್ಲಿ ಮನವಿ




ಕಾ. ನಾಗಜ್ಯೋತಿ: ಅಭ್ಯರ್ಥಿ, ವಿಜಯಪುರ




ಕಾ. ಸುಜಾತಾ ಡಿ.: ಅಭ್ಯರ್ಥಿ, ಚಿತ್ರದುರ್ಗ

## ನಾಮಪತ್ರ ಸಲ್ಲಿಸಲು ರ್‍ಯಾಲಿಯಲ್ಲಿ ಅಭ್ಯರ್ಥಿ ಮತ್ತು ಪಕ್ಷದ ನಾಯಕರು




ಕಾ. ನಿರ್ಮಲಾ ಎಚ್.ಎಲ್.: ಬೆಂಗಳೂರು ಉತ್ತರ




ಕಾ. ಎಸ್‌ಎಂ. ಶರ್ಮಾ: ಕಲಬುರ್ಗಿ




ಕಾ. ಲಕ್ಷ್ಮಣ ಜಡಗಣ್ಣನವರ: ಬೆಳಗಾವಿ




ಕಾ. ಅಣಬೇರು ತಿಪ್ಪೇಸ್ವಾಮಿ: ದಾವಣಗೆರೆ




ಕಾ. ಗಣಪತಿ ಹೆಗಡೆ: ಉತ್ತರ ಕನ್ನಡ




ಕಾ.ಶರಣಪ್ಪ: ಕೊಪ್ಪಳ

# ಕಾಮ್ರೇಡ್ ವಿ. ವೇಣುಗೋಪಾಲ್ ಲಾಲ್ ಸಲಾಮ್!




ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು, ಪಕ್ಷದ ಕೇರಳ ರಾಜ್ಯ ಸಮಿತಿಯ ಮಾಜಿ ಕಾರ್ಯದರ್ಶಿಗಳೂ ಆದ ಕಾಮ್ರೇಡ್ ವಿ. ವೇಣುಗೋಪಾಲ್ ಅವರು ಕಳೆದ ಮಾರ್ಚ್ 30ರಂದು ತಮ್ಮ 68ನೇ ವಯಸ್ಸಿನಲ್ಲಿ ನಮ್ಮನ್ನು ಅಗಲಿದರು. ಕಳೆದ ಒಂಬತ್ತು ವರ್ಷಗಳಿಂದ ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದ ಅವರು ಅಂಬಳಪುರದ ಸೂರ್ಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಕಳೆದ ಎರಡು ವರ್ಷ ಒಂಬತ್ತು ತಿಂಗಳಿಂದ ಆಸ್ಪತ್ರೆಯಲ್ಲಿಯೇ ತಜ್ಞ ವೈದ್ಯರ ನಿಗಾದಲ್ಲಿದ್ದರು. ಕೇರಳ ರಾಜ್ಯದ ಕಾಮ್ರೇಡರು ಹಾಗೂ ವೈದ್ಯರ ತಂಡ ಅವರನ್ನು ಉಳಿಸಿಕೊಳ್ಳಲು ನಿರಂತರ ಪ್ರಯತ್ನ ಮಾಡಿತ್ತಾದರೂ ಅದು ಸಾಧ್ಯವಾಗಲಿಲ್ಲ.

ಕೇರಳದ ಅಂಬಳಪುರದಲ್ಲಿ ಏಪ್ರಿಲ್ 1 ರಂದು ಮತ್ತು ಕೊಲ್ಕತ್ತಾದಲ್ಲಿ ಏಪ್ರಿಲ್ 12ರಂದು ನಡೆದ ಸಂಸ್ಮರಣ ಸಭೆಯಲ್ಲಿ ಪಕ್ಷದ ನಾಯಕರು, ಸಂಘಟನಾಕಾರರು ಹಾಗೂ ಪಕ್ಷದ ಬೆಂಬಲಿಗರು ಕಾ. ವಿ.ವೇಣುಗೋಪಾಲ್‌ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## 12 ಏಪ್ರಿಲ್ 2024, ಕೊಲ್ಕತ್ತಾ: ಎಸ್‌ಯುಸಿಐ(ಸಿ) ಕೇಂದ್ರಸಮಿತಿ ಸಂಘಟಿತ ಸ್ಮರಣ ಸಭೆ

12.04.24 ರಂದು ಕೊಲ್ಕತ್ತಾದ ಯುವಕೇಂದ್ರದಲ್ಲಿ ನಡೆದ ಕಾ. ವಿ.ವೇಣುಗೋಪಾಲ್‌ರವರ ಸಂಸ್ಮರಣ ಸಭೆಯಲ್ಲಿ ಮೊದಲಿಗೆ, ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಅಮಿತಾವ್ ಚಟರ್ಜಿಯವರು ಅಗಲಿದ ಸಂಗಾತಿ ಕುರಿತಾದ ಕೇಂದ್ರ ಸಮಿತಿಯ ಶ್ರದ್ಧಾಂಜಲಿ ಹೇಳಿಕೆಯನ್ನು ಸಭೆಯ ಮುಂದಿಟ್ಟರು.

### ಶ್ರದ್ಧಾಂಜಲಿ ಹೇಳಿಕೆಯಲ್ಲಿನ ಸಾರಾಂಶ:

“ಈ ಯುಗದ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರೂ, ನಮ್ಮ ಪಕ್ಷ ಎಸ್‌ಯುಸಿಐ(ಸಿ) ಸಂಸ್ಥಾಪಕ ಕಾರ್ಯದರ್ಶಿಗಳೂ ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಚಿಂತನೆಗಳಿಂದ ಆಕರ್ಷಿತರಾಗಿ 1975ರಲ್ಲಿ ಕಾ. ವೇಣುಗೋಪಾಲ್‌ರವರು ತಿರುವನಂತಪುರದ ಸರ್ಕಾರಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ದೆಸೆಯಿಂದಲೇ ಪಕ್ಷದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೆಲವೇ ಸಮಯದಲ್ಲಿ ಅವರು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ಕಾರ್ಯನಿರತರಾದರು. ಅಂದಿನಿಂದ ತಮ್ಮ ಕೊನೆಯ ಉಸಿರಿರುವವರೆಗೂ ಕ್ರಾಂತಿಕಾರಿ ಹೋರಾಟಗಳನ್ನು ಇನ್ನೂ ಉನ್ನತ ಹಂತಕ್ಕೆ ಕೊಂಡೊಯ್ಯುವಲ್ಲಿ ತಮ್ಮ ಜವಾಬ್ದಾರಿಯನ್ನು ಪರಿಪೂರ್ಣವಾಗಿ ನಿರ್ವಹಿಸಿದರು. ಪಕ್ಷವನ್ನು ಸಂಘಟಿಸುವ ಆರಂಭದ ದಿನಗಳಲ್ಲಿ ಕಾ. ವೇಣುಗೋಪಾಲ್ ಹಲವಾರು ಸವಾಲು, ಅಡೆತಡೆಗಳನ್ನು ಎದುರಿಸಬೇಕಾಯಿತು. ಅದರಲ್ಲಿ ಅವರು ಯಶಸ್ವಿಯೂ ಆದರು. ಕಠಿಣ ಸವಾಲುಗಳನ್ನು ನಿಭಾಯಿಸುವಲ್ಲಿ ಅವರು ಸದಾ ಮುಂದೆ ಇರುತ್ತಿದ್ದರು. ಇದು ಅವರ ವಿಶೇಷ ಗುಣವೂ ಆಗಿತ್ತು. ಅವರು ಜನಿಸಿದ್ದು ಕೇರಳದ ಮಧ್ಯಮವರ್ಗದ ಕುಟುಂಬ ಒಂದರಲ್ಲಿ. ಅವರ ತಂದೆ ತಾಯಿ ಇಬ್ಬರೂ ಶಿಕ್ಷಕರು. ಈ ಕೌಟುಂಬಿಕ ಹಿನ್ನೆಲೆಯು ಅವರು ರಾಜಕೀಯ ಜೀವನಕ್ಕೆ ಬರುವುದಕ್ಕೆ, ಅಲ್ಲಿನ ಕಷ್ಟ ಕಾರ್ಪಣ್ಯಗಳನ್ನು ಸಹಿಸುವುದಕ್ಕೆ ಯಾವುದೇ ಅಡ್ಡಿ ಮಾಡಲಿಲ್ಲ.

ಕೇರಳದಲ್ಲಿ ಪಕ್ಷವನ್ನು ಕಟ್ಟುವ ಉದ್ದೇಶದಿಂದ ಪಕ್ಷದ ಕೇಂದ್ರ ಸಮಿತಿ ಸದಸ್ಯರಾಗಿದ್ದ ಕಾ. ಕೃಷ್ಣ ಚಕ್ರವರ್ತಿಯವರನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಅವರ ಪ್ರಯತ್ನದಿಂದ ಅಲ್ಲಿ ಪಕ್ಷದ ಕೆಲಸ ಪ್ರಾರಂಭವಾದರೂ, ಮೊದಲಿಗೆ ಪಕ್ಷಕ್ಕೆ ಬಂದವರಲ್ಲಿ ಕೆಲವರು ಕಠಿಣ ಕ್ರಾಂತಿಕಾರಿ ಜೀವನದ ಹೋರಾಟವನ್ನು ನಡೆಸಲು ಸಾಧ್ಯವಾಗದೆ ಹೊರಟುಹೋದರು. ಆದರೆ, ಕಾ. ವೇಣುಗೋಪಾಲ್, ನಮ್ಮನ್ನಗಲಿದ ಪಕ್ಷದ ಹಿರಿಯ ನಾಯಕರಾಗಿದ್ದ ಕಾಮ್ರೇಡರುಗಳಾದ ಸಿ.ಕೆ. ಲೂಕೋಸ್, ಎ. ಜಲಾಲುದ್ದೀನ್, ಜಿ.ಎಸ್. ಪದ್ಮಕುಮಾರ್ ಸೇರಿದಂತೆ ಇತರರೊಂದಿಗೆ ಪಕ್ಷದ ಧ್ವಜವನ್ನು ಎತ್ತಿ ಹಿಡಿದು ಪಕ್ಷವನ್ನು ಮುನ್ನಡೆಸಿದರು. ಕಾ. ವೇಣುಗೋಪಾಲ್ ಅವರು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಎರಡು ಬಾರಿ ಬಂಧಿತರಾಗಿ ಪೊಲೀಸ್ ಕಸ್ಟಡಿಯಲ್ಲಿ ದಿನಗಳನ್ನು ಕಳೆದಿದ್ದರು. ವಿದ್ಯಾರ್ಥಿ ನಾಯಕರಾಗಿದ್ದ ಅವರು ಸಿಪಿಎಂ ಗೂಂಡಾಗಳಿಂದ ಹಲ್ಲೆಗೂ ಒಳಗಾಗಿದ್ದರು. ಅದೆಲ್ಲವನ್ನೂ ಸಹಿಸಿಕೊಂಡು ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಗೆ ಪ್ರಬಲ ನಾಯಕತ್ವವನ್ನು ನೀಡಿದ್ದರು; ದೀರ್ಘಕಾಲ ಎಐಡಿಎಸ್‌ಓ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು.

1993ರಲ್ಲಿ ವೈದ್ಯಕೀಯ ಪದವಿಯನ್ನು ಪಡೆದ ಬಳಿಕ, ವೈದ್ಯರಾಗಿ ತಮ್ಮ ವೃತ್ತಿ ಜೀವನವನ್ನು ಶುರು ಮಾಡಬಹುದಾಗಿತ್ತು. ಆದರೆ, ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ವೈದ್ಯ ವೃತ್ತಿಯನ್ನೇ ತೊರೆದರು. ಇದನ್ನು ವಿರೋಧಿಸಿದ ತಮ್ಮ ಪೋಷಕರು, ಶಿಕ್ಷಕರು ಹಾಗೂ ಸಹಪಾಠಿಗಳಿಗೆ, ಅವರು ಕ್ರಾಂತಿಕಾರಿ ಜೀವನವು ಇನ್ನೂ ಹೆಚ್ಚು ಉದಾತ್ತವಾದುದು ಎಂಬ ಕಾ. ಶಿವದಾಸ್ ಘೋಷ್ ಮಾತುಗಳನ್ನು ಉಲ್ಲೇಖಿಸಿ ತಿಳಿ ಹೇಳುತ್ತಿದ್ದರು. ವೈದ್ಯ ವೃತ್ತಿ ತೊರೆಯುವುದರ ಮೂಲಕ ತಾನು ಏನೋ ಮಹಾನ್ ತ್ಯಾಗ ಮಾಡಿದ್ದೇನೆ ಎಂಬ ಭಾವನೆ ಅವರಿಗೆ ಎಂದೂ ಬರಲಿಲ್ಲ. ಅವರ ಮಹಾನತೆಯ ಬಗ್ಗೆ ಮೆಚ್ಚುಗೆ ಇದ್ದ ಅವರ ಶಿಕ್ಷಕರು ಹಾಗೂ ಸಹಪಾಠಿಗಳು, ಅವರು ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಾರೆ ಎಂಬ ಮಾಹಿತಿ ತಿಳಿದು ದೊಡ್ಡಮಟ್ಟದ ಹಣವನ್ನು ಸ್ವಯಂಪ್ರೇರಣೆಯಿಂದ ಸಂಗ್ರಹಿಸಿ ಪಕ್ಷಕ್ಕೆ ನೀಡಿದ್ದರು.

ಅವರ ಇಡೀ ಜೀವನವು ಪಕ್ಷದ ಹಿತಾಸಕ್ತಿ ಮತ್ತು ಕ್ರಾಂತಿಗಾಗಿ ಮುಡಿಪಾಗಿತ್ತು. ಕಾ. ಶಿವದಾಸ್ ಘೋಷ್‌ರ ಬೋಧನೆಯಂತೆ ವೇಣುಗೋಪಾಲ್‌ರವರ ವೈಯಕ್ತಿಕ ಹಿತಾಸಕ್ತಿಯು ವರ್ಗ, ಪಕ್ಷ ಮತ್ತು ಕ್ರಾಂತಿಯೊಂದಿಗೆ ಸಮ್ಮಿಳಿತಗೊಂಡಿತ್ತು. ಅವರು ಆ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರಿಂದ ಅವರಿಗೆ ಪಕ್ಷವು ಸ್ಟಾಫ್ ಸದಸ್ಯತ್ವವನ್ನು ನೀಡಿತ್ತು. ವ್ಯಕ್ತಿವಾದದ ಪ್ರಭಾವಕ್ಕೆ ಅವರೆಂದಿಗೂ ಒಳಗಾಗಿರಲಿಲ್ಲ. ಕಾ. ವೇಣುಗೋಪಾಲ್ ಅವರು ರಾಜ್ಯದಾದ್ಯಂತ ಪಕ್ಷ ವಿಸ್ತರಿಸುವ ಹೋರಾಟದಲ್ಲಿ ಕಾ. ಸಿ.ಕೆ. ಲೂಕೋಸ್ ಅವರೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅಲ್ಲದೇ, ಹಲವು ಕಾಮ್ರೇಡರನ್ನು ಬೆಳೆಸುತ್ತಾ ಪಕ್ಷದ ಹಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಅವರಿಗೆ ಪ್ರೇರಣೆ ನೀಡಿದ್ದರು. ಪಕ್ಷದ ಯುವ ಕಮ್ಯುನಿಸ್ಟ್ ಘಟಕವಾದ ಕೊಮ್‌ಸೊಮೊಲ್ ಅನ್ನು ಕೇರಳದಲ್ಲಿ ಬೆಳೆಸುವಲ್ಲಿ ಪರಿಶ್ರಮಿಸಿದ್ದರು. ಪಕ್ಷದ ರಾಜ್ಯ ಸಮಿತಿಯ ಮುಖವಾಣಿಯಾದ ‘ಯೂನಿಟಿ’ಯ ಸಂಪಾದಕೀಯ ಮಂಡಳಿಯ ಸದಸ್ಯರಾಗಿ ನಾಲ್ಕು ದಶಕಗಳ ಕಾಲ ಮಹತ್ವದ ಪಾತ್ರವನ್ನು ವಹಿಸಿದ್ದರು. ಪ್ರಧಾನ ಸಂಪಾದಕರಾಗಿ ಐದು ವರ್ಷ ಸೇವೆ ಸಲ್ಲಿಸಿದ್ದರು. ಜರ್ಮನಿಯಲ್ಲಿ 1995ರಲ್ಲಿ ನಡೆದ ಜಾಗತಿಕ ಯುವ ಸಮಾವೇಶದಲ್ಲಿ ಎಐಡಿವೈಓ ಮುಂದಳವನ್ನು ಪ್ರತಿನಿಧಿಸಿದ್ದರು.

ಜನಪರ ಚಳವಳಿಗಳನ್ನು ಸಂಘಟಿಸುವಾಗ ಕಾ. ವೇಣುಗೋಪಾಲ್ ತೋರಿಸುತ್ತಿದ್ದ ಬದ್ಧತೆ ಹಾಗೂ ಸಾಮರ್ಥ್ಯ ಅಸಾಧಾರಣವಾದದ್ದು. ತ್ರಿಕುನ್ನಪುಳದಲ್ಲಿ ಕಪ್ಪು ಮರಳು ಗಣಿಗಾರಿಕೆ ವಿರೋಧಿ ಹೋರಾಟವನ್ನು ಸಂಘಟಿಸುವಲ್ಲಿ ಅವರು ವಹಿಸಿದ್ದ ಮಹತ್ವದ ಪಾತ್ರ, ಚೆಂಗಾರಾ ಭೂ ಹೋರಾಟ, ತ್ಯಾಜ್ಯ ವಿಲೇವಾರಿಗಾಗಿ ನಡೆದ ವಿಲಾಪಿಸ್ಲಲಾ ಚಳವಳಿ, ಮೂಲಂಬಿಲ್ಲಿ ಹೋರಾಟ ಮತ್ತು ಯಾವುದೇ ಪರಿಹಾರ ನೀಡದೇ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲು ಮುಂದಾದ ಕ್ರಮವನ್ನು ಖಂಡಿಸಿ ನಡೆದ ಹೋರಾಟ, ಅಲಪ್ಪುಳ ಕರಾವಳಿಯ ಕಾರ್ಮಿಕರನ್ನು ಸಂಘಟಿಸಿ ನಡೆಸಿದ ಹೋರಾಟಗಳು ಇವುಗಳಲ್ಲಿ ಪ್ರಮುಖವಾದವು. ಕ್ಷುಲ್ಲಕ ಸಂಸದೀಯ ಪಕ್ಷ ರಾಜಕಾರಣದ ಮಧ್ಯೆಯೂ ‘ಕೇರಳ ರಾಜ್ಯ ಜನಾಕೀಯ ಪ್ರತಿರೋಧ ಸಮಿತಿ’ಯನ್ನು ಕಟ್ಟಿ ಅದರ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸಿದ್ದರು. ಈ ಸಮಿತಿಯಲ್ಲಿ ಗಣ್ಯ ವ್ಯಕ್ತಿಗಳಾದ ಜಸ್ಟಿಸ್ ವಿ.ಆರ್. ಕೃಷ್ಣ ಅಯ್ಯರ್, ಶ್ರೀಮತಿ ಲಕ್ಷ್ಮಿ ಎನ್. ಮೆನನ್, ಡಾ.ಎನ್.ಎ. ಕರೀಂರಂಥವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಈ ಸಮಿತಿಯಿಂದ ಕೈಗೆತ್ತಿಕೊಳ್ಳಲಾಗಿದ್ದ ‘ಶಿಕ್ಷಣ ಉಳಿಸಿ’ ಹೋರಾಟದಲ್ಲಿ ಕಾ. ವೇಣುಗೋಪಾಲ್ ಮುಂಚೂಣಿಯಲ್ಲಿದ್ದರು. ನಂತರ ರಾಜ್ಯ ಸರ್ಕಾರವು ಅವರನ್ನು ಪಠ್ಯ ಪರಿಷ್ಕರಣ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿತು.

ಕಾ. ವೇಣುಗೋಪಾಲ್ ಅವರು ಅಂಬಳಪುರದಲ್ಲಿ ಸೂರ್ಯ ಆಸ್ಪತ್ರೆಯನ್ನು ಆರಂಭಿಸಿದ್ದರು. ಈ ಆಸ್ಪತ್ರೆಯು ಕಳೆದ ನಾಲ್ಕು ದಶಕಗಳಿಂದ ಅತ್ಯಂತ ಕೈಗೆಟಕುವ ಶುಲ್ಕದಲ್ಲಿ ಅಲ್ಲಿನ ಬಡ ಮೀನುಗಾರರು ಹಾಗೂ ಕೃಷಿಕರಿಗೆ ವೈದ್ಯಕೀಯ ಸೇವೆಯನ್ನು ನೀಡುತ್ತಿದೆ.”

ಶ್ರದ್ಧಾಂಜಲಿ ಸಲ್ಲಿಸಿದ ನಂತರ, ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ, ಕೇರಳದ ರಾಜ್ಯ ಕಾರ್ಯದರ್ಶಿಗಳೂ ಆದ ಕಾ. ಜೈಸನ್ ಜೊಸೆಫ್‌ರವರು, ಬಹಳವೇ ಭಾವಪರವಶೆಯಿಂದ ಕಾ. ವೇಣುಗೋಪಾಲ್‌ರವರ ಅನನ್ಯ ಚಾರಿತ್ರ್ಯವನ್ನು ಕೆಲವೊಂದು ಘಟನೆಗಳ ಮೂಲಕ ನೆನಪಿಸಿಕೊಂಡರು. ಹಲವಾರು ಸಂಕಷ್ಟಗಳ ನಡುವೆಯೂ ಅವರು ಹೇಗೆ ಕ್ರಾಂತಿಕಾರಿ ದಾರ್ಢ್ಯದಿಂದ ಮುನ್ನಡೆದರು ಎಂದು ವಿವರಿಸಿದರು.

ಮುಖ್ಯ ಭಾಷಣಕಾರರಾದ, ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ **ಕಾ. ಪ್ರವಾಶ್ ಘೋಷ್‌ರವರು,** ಕಾ. ವೇಣುಗೋಪಾಲ್‌ರವರು ತಮ್ಮ ಕ್ರಾಂತಿಕಾರಿ ಸಹಯೋಧರೂ, ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು ಮತ್ತು ಕೇರಳ ರಾಜ್ಯ ಕಾರ್ಯದರ್ಶಿಗಳಾಗಿದ್ದ ದಿವಂಗತ ಕಾ. ಲೂಕೋಸ್ ಮತ್ತು ಇನ್ನಿತರರ ಜೊತೆಗೂಡಿ ಕೇರಳದಲ್ಲಿ ಪಕ್ಷವನ್ನು ಕಟ್ಟಿದ್ದನ್ನು ನೆನಪಿಸಿಕೊಂಡರು. ರಾಜ್ಯಾದ್ಯಂತ ಅವರು ಓಡಾಡಿ ಪಕ್ಷವನ್ನು ಕಟ್ಟುತ್ತಾ ಅದನ್ನು ಬಲ ಪಡಿಸಿದರು, ಒಂದು ಅಪರೂಪದ ರಾಜಕೀಯೇತರ ಜನ ಸಂಘರ್ಷ ಸಮಿತಿಯಾದ ‘ಜನಕೀಯ ಪ್ರತಿರೋಧ ಸಮಿತಿ’ಯನ್ನು ಮುನ್ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿದರು ಎಂದವರು ಹೇಳಿದರು. ಕಾ. ಲೂಕೋಸ್‌ರವರು ಸಮಿತಿಯ ರೂಪುರೇಶೆಗಳನ್ನು ಹಾಕಿದರೆ, ಕಾ. ವೇಣುಗೋಪಾಲ್‌ರವರು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು; ಸಮಿತಿಯಲ್ಲಿ ಮುಖ್ಯ ಪಾತ್ರ ವಹಿಸಿದ್ದ ಜಸ್ಟಿಸ್ ವಿ.ಆರ್, ಕೃಷ್ಣ ಐಯ್ಯರ್ ಅವರು, ಸಿಪಿಐ(ಎಂ) ಮತ್ತಿತರರು ತಮ್ಮನ್ನು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಕೇಳಿಕೊಂಡಾಗ, ಈ ಬಗ್ಗೆ ಕಾ. ವೇಣುಗೋಪಾಲ್‌ರವರ ಅಭಿಪ್ರಾಯವನ್ನು ಕೇಳಿದ್ದರು, ಅವರಿಬ್ಬರ ನಡುವೆ ಇಂಥಾ ಒಂದು ಬಂಧ ಇತ್ತು ಎಂದು ಕಾ. ಪ್ರವಾಶ್ ಘೋಷ್ ಹೇಳಿದರು. ಕಾ. ವೇಣುಗೋಪಾಲ್ ಮುನ್ನಡೆಸಿದ ಹತ್ತು ಹಲವು ವಿದ್ಯಾರ್ಥಿ ಚಳುವಳಿಗಳನ್ನು ಸ್ಮರಿಸುತ್ತಾ, 1981ರಲ್ಲಿ ಅವರು ಕೇರಳದಲ್ಲಿ ಎಐಡಿಎಸ್‌ಓದ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನವನ್ನು ಸಂಘಟಿಸಿದ್ದರು; ಶ್ರಮಿಕ ಜನರನ್ನು ಸಂಘಟಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು ಎಂದು ಹೇಳಿದರು. ಅಂಬಳಪುರದಲ್ಲಿ ಬಡ ಜನರಿಗೋಸ್ಕರ ನಡೆಯುತ್ತಿರುವ ‘ಸೂರ್ಯ’ ಆಸ್ಪತ್ರೆ ಅವರ ಮುಂದೊಡಗಿನಿಂದ ಶುರುವಾಗಿದ್ದು ಎಂದು ಕಾ. ಪ್ರವಾಶ್ ಘೋಷ್ ಹೇಳುತ್ತಾ, ಅವರ ಅಕಾಲಿಕ ನಿಧನ ಕೇರಳದ ಪಕ್ಷಕ್ಕೆ ಮಾತ್ರವಲ್ಲ, ದೇಶದಲ್ಲಿನ ಇಡೀ ಪಕ್ಷಕ್ಕೇ ಬಹಳ ದೊಡ್ಡ ನಷ್ಟ ಎಂದು ಭಾವುಕರಾಗಿ ನುಡಿದರು. ಅವರು ಬಿಟ್ಟುಹೋದ ನಿರ್ವಾತವನ್ನು ತುಂಬಲು ಕೇರಳದ ಪಕ್ಷ ಓರ್ವ ಮಾನವನಂತೆ ಎದ್ದು ನಿಲ್ಲಬೇಕು ಮತ್ತು ಎಲ್ಲರೂ ಅವರು ನಡೆಸಿದ ಕ್ರಾಂತಿಕಾರಿ ಸಂಘರ್ಷದಿಂದ ಪಾಠ ಕಲಿಯಬೇಕು ಎಂದು ಕರೆ ನೀಡಿದರು.

ಪಕ್ಷದ ಹಿರಿಯ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಅಸಿತ್ ಭಟ್ಟಾಚಾರ್ಯರವರು, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಕಾ. ಶಿವದಾಸ್ ಘೋಷ್ ತೋರಿಸಿಕೊಟ್ಟಂತೆ ಎಲ್ಲರೂ ಒಂದು ಪ್ರಕ್ರಿಯೆಯ ಉತ್ಪನ್ನಗಳೇ ಆಗಿರುವಂತೆ, ಕಾ. ವೇಣುಗೋಪಾಲ್ ಸಹ ಆಗಿದ್ದರು; ಜೀವನದ ಎಲ್ಲಾ ಸ್ತರಗಳನ್ನು ಒಳಗೊಂಡಂತೆ, ಇತರ ಕಾಮ್ರೇಡರ ಜೊತೆಗೂಡಿ ಸಾಮೂಹಿಕ ಸಂಘರ್ಷವನ್ನು ನಡೆಸುವ ಮೂಲಕ ನಾವು ಓರ್ವ ಕ್ರಾಂತಿಕಾರಿಯಾಗಿ ಹೊರಹೊಮ್ಮುವುದೇ ಈ ಪ್ರಕ್ರಿಯೆ; ಎಲ್ಲಿಯವರೆಗೆ ಕಾ.ಶಿವದಾಸ್ ಘೋಷ್‌ರವರು ಸ್ಥಾಪಿಸಿದಂತಹ ಈ ಪ್ರಕ್ರಿಯೆ ಜಾರಿಯಲ್ಲಿ ಇರುವುದೋ, ಅಲ್ಲಿಯವರೆಗೆ ಕಾ. ವೇಣುಗೋಪಾಲ್‌ರಂತಹ ಕ್ರಾಂತಿಕಾರಿಗಳು ಹೊರಹೊಮ್ಮುತ್ತಾರೆ ಎಂದು ವಿವರಿಸಿದರು.

ಏಪ್ರಿಲ್ 1 ರಂದು ಕೇರಳದ ಅಂಬಳಪುರದಲ್ಲಿ ನಡೆದ ಸಂಸ್ಮರಣಾ ಸಭೆಯನ್ನುದ್ದೇಶಿಸಿ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಕೆ.ರಾಧಾಕೃಷ್ಣ ಮತ್ತು ಕಾ. ಅಮಿತಾವ್ ಚಟರ್ಜಿಯವರು ಮಾತನಾಡಿ ಕಾ.ವೇಣುಗೋಪಾಲ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಆಸ್ಪತ್ರೆಯಲ್ಲಿ ಯಾತನಾದಾಯಕ ಕಾಯಿಲೆಯೊಂದಿಗೆ ಹೋರಾಡುತ್ತಿದ್ದರೂ ಕಾ. ವೇಣುಗೋಪಾಲ್ ಮನಸ್ಸು ಸದಾ ಪಕ್ಷ ಮತ್ತು ಅದರ ಪ್ರಗತಿಯ ಬಗ್ಗೆಯೇ ಚಿಂತನೆ ಮಾಡುತ್ತಿತ್ತು. ಅವರು ಸದಾಕಾಲವೂ ಕ್ರಾಂತಿಕಾರಿಯಾಗಿಯೇ ಇದ್ದವರು. ಅವರ ಕ್ರಾಂತಿಕಾರಿ ಹೋರಾಟದ ಮಾದರಿಯನ್ನು ನಾವೆಲ್ಲರೂ ಅಳವಡಿಸಿಕೊಳ್ಳುವ ಮೂಲಕ ನಮ್ಮಲ್ಲಿ ಅವರಂತಹ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ.

**ಕಾಮ್ರೇಡ್ ವಿ.ವೇಣುಗೋಪಾಲ್ ಲಾಲ್ ಸಲಾಮ್!**

## 'ಮಾಧ್ಯಮ ಪ್ರತಿನಿಧಿಗಳ ಜೊತೆ ಸಂವಾದ'

# "ಬಿಜೆಪಿ ನೇತೃತ್ವದ ಎನ್‌ಡಿಎ-ಕಾಂಗ್ರೆಸ್ ನೇತೃತ್ವದ ಇಂಡಿಯಾ, ಇವೆರಡನ್ನೂ ನಾವು ಸಮಾನವಾಗಿ ವಿರೋಧಿಸುತ್ತೇವೆ ಜನಪರ ಹೋರಾಟಗಳಲ್ಲಿ ಪಳಗಿರುವ ಎಸ್‌ಯುಸಿಐ(ಸಿ) ಅಭ್ಯರ್ಥಿಗಳನ್ನು ಗೆಲ್ಲಿಸಿ." – ಕಾಮ್ರೇಡ್ ಕೆ.ರಾಧಾಕೃಷ್ಣ




ವೇದಿಕೆಯಲ್ಲಿ: ಮಾತನಾಡುತ್ತಿರುವವರು ಕಾ.ಕೆ.ರಾಧಾಕೃಷ್ಣ. ಅವರ ಬಲಗಡೆ: ಅಭ್ಯರ್ಥಿ ಕಾ. ಡಿ. ಸುಜಾತ, ಎಡಗಡೆ: ಪಕ್ಷದ ಸ್ಥಳೀಯ ಸಮಿತಿ ಮುಖಂಡರಾದ ಕಾ॥ ರವಿಕುಮಾರ್ ಮತ್ತು ರಾಜ್ಯ ನಾಯಕರಾದ ಕಾ॥ ಎಂ.ಎನ್ ಮಂಜುಳ

**ಚಿತ್ರದುರ್ಗ:**

ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರೂ, ದಕ್ಷಿಣ ರಾಜ್ಯಗಳ ಉಸ್ತುವಾರಿಯೂ ಆಗಿರುವ ಕಾಮ್ರೇಡ್ ಕೆ. ರಾಧಾಕೃಷ್ಣರವರು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುಜಾತ ಡಿ., ಇವರ ಚುನಾವಣಾ ಪ್ರಚಾರದ ಅಂಗವಾಗಿ ಚಿತ್ರದುರ್ಗಕ್ಕೆ ಆಗಮಿಸಿದ್ದಾಗ, 19.04.24 ರಂದು ಅವರೊಡನೆ, 'ಮಾಧ್ಯಮ ಪ್ರತಿನಿಧಿಗಳ ಜೊತೆಯಲ್ಲೊಂದು ಸಂವಾದ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪಕ್ಷದ ಸ್ಥಳೀಯ ಸಮಿತಿ ಮುಖಂಡರಾದ ಕಾ॥ ರವಿಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾ. ಕೆ.ರಾಧಾಕೃಷ್ಣ ಅವರು ಮಾತನಾಡುತ್ತಾ, "ದೇಶದಾದ್ಯಂತ ಇಂದು ಎರಡು ಒಕ್ಕೂಟಗಳು ಜನರ ಮುಂದಿವೆ. ಒಂದು ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಇನ್ನೊಂದು ಕಾಂಗ್ರೆಸ್ ನೇತೃತ್ವದ ಇಂಡಿಯಾ. ಇವೆರಡನ್ನೂ ನಾವು ಸಮಾನವಾಗಿ ವಿರೋಧಿಸುತ್ತೇವೆ. ಈ ಪಕ್ಷಗಳು ಅಧಿಕಾರದಲ್ಲಿ ಇರುವಾಗ ಜನತೆಗೆ ದ್ರೋಹ ಬಗೆದಿವೆ. ತಾವು ಕೊಟ್ಟ ಭರವಸೆಗಳನ್ನು ಈಡೇರಿಸಿಲ್ಲ. ಭ್ರಷ್ಟಾಚಾರ ಮುಕ್ತ ಭಾರತವನ್ನು ನಿರ್ಮಿಸುತ್ತೇವೆ ಎಂದು ಕಳೆದ ಹತ್ತು ವರ್ಷದಿಂದೀಚೆಗೆ ಭಾರಿ ಭರವಸೆಗಳೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದಿತ್ತು. ವರ್ಷಕ್ಕೆ ಎರಡು ಕೋಟಿ ಉದ್ಯೋಗ, ಬಡವರ ಪಾಲಿಗೆ ಅಚ್ಛೇದಿನ್, ಕಪ್ಪು ಹಣವನ್ನು ವಾಪಸ್ ತಂದು ಹಂಚುವುದು, ಬೇಟಿ ಬಚಾವೋ-ಬೇಟಿ ಪಡಾವೋ, ಇವೇ ಮೊದಲಾದ ಆಶ್ವಾಸನೆಗಳನ್ನು ನೀಡಿತ್ತು. ಆದರೆ ಅವೆಲ್ಲವನ್ನು ಹುಸಿಗೊಳಿಸಿದೆ. ಕೊಟ್ಟ ಮಾತಿಗೆ ವಿರುದ್ಧವಾಗಿ ನಡೆದುಕೊಂಡಿದೆ. ಕಾಂಗ್ರೆಸ್ ಕಳೆದ 60 ವರ್ಷಗಳಲ್ಲಿ ಮಾಡಿದ ಹಗರಣಗಳನ್ನು ಕೇವಲ ಹತ್ತು ವರ್ಷಗಳಲ್ಲಿ ಮಾಡಿ ಮುಗಿಸಿದೆ. ಈಗ ಇದಕ್ಕೆ ಪರ್ಯಾಯವಾಗಿ ಕೆಲವು ಪಕ್ಷಗಳು ಸೇರಿ ಕಾಂಗ್ರೆಸ್ ನೇತೃತ್ವದಲ್ಲಿ 'ಇಂಡಿಯಾ' ಒಕ್ಕೂಟ ರಚಿಸಿಕೊಂಡಿವೆ. ಇನ್ನು, ಸಿಪಿಐ ಸಿಪಿಐಎಂ ನಂತಹ ಎಡಪಕ್ಷಗಳು, ಕೆಲ ಪ್ರಾದೇಶಿಕ ಪಕ್ಷಗಳು 'ಇಂಡಿಯಾ' ಒಕ್ಕೂಟದ ಬೆಂಬಲಕ್ಕೆ ನಿಂತಿವೆ. ಆದರೆ ಇದು ಜನತೆಗೆ ನಿಜವಾದ ಪರ್ಯಾಯವಲ್ಲ. ಬಂಡವಾಳಶಾಹಿಗಳ ಪರ್ಯಾಯ ಆಯ್ಕೆ ಅಷ್ಟೇ. ಈ ಎರಡು ದೊಡ್ಡ ಪಕ್ಷಗಳು ಜಾರಿಗೊಳಿಸುವ ಮತ್ತು ಅನುಸರಿಸುವ ನೀತಿಗಳು ಒಂದೇ ಆಗಿವೆ. ಅಲ್ಲದೆ ಅವುಗಳ ಒಕ್ಕೂಟದಲ್ಲಿರುವ ಮಿತ್ರ ಪಕ್ಷಗಳು ಅದೇ ನೀತಿಗಳನ್ನು ಅನುಸರಿಸುತ್ತಿವೆ. ಆದ್ದರಿಂದ ಜನಜೀವನದ ಜ್ವಲಂತ ಸಮಸ್ಯೆಗಳ ವಿರುದ್ಧ ಬಲಿಷ್ಠ ಜನಾಂದೋಲನ ಕಟ್ಟುವ ಮೂಲಕ ಪರ್ಯಾಯ ರಾಜಕೀಯ ಶಕ್ತಿಯನ್ನು ಕಟ್ಟಿಕೊಳ್ಳಲು ಜನಗಳಿಗೆ ನಾವು ಕರೆ ನೀಡುತ್ತೇವೆ. ಹಾಗಾಗಿ, ಇಂದು ನೈಜ ಜನಪರ ಹೋರಾಟಗಳನ್ನು ಬೆಳೆಸುತ್ತಿರುವ ನಮ್ಮ ಪಕ್ಷ ಏಕಾಂಗಿಯಾಗಿ ದೇಶದ 151 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ; ರಾಜ್ಯದಲ್ಲಿ 19 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಸಂಸತ್ತಿನಲ್ಲಿ ಜನಪರ ಹೋರಾಟದ ಧ್ವನಿಯೆತ್ತಲು ಜನತೆ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು" ಎಂದು ಮನವಿ ಮಾಡಿದರು.

## ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ನಡೆದ ಸಂವಾದದ ಸಾರಾಂಶ ಇಲ್ಲಿದೆ:

**ಪ್ರಶ್ನೆ:** ಜಾಗತಿಕವಾಗಿ ಬಲಪಂಥೀಯರು ಮೇಲುಗೈ ಸಾಧಿಸುತ್ತಿರುವಾಗ, ಭಾರತದಲ್ಲಿಯೂ ಮೋದಿ ಸರ್ಕಾರ ಅಘೋಷಿತವಾಗಿ ತುರ್ತುಪರಿಸ್ಥಿತಿಯನ್ನು ಹೇರುತ್ತಿರುವಾಗ, ನೀವು ಜನರಿಗೆ ಪರ್ಯಾಯ ಕೊಡುವ ನಿಟ್ಟಿನಲ್ಲಿ ಉಳಿದ ಪ್ರಗತಿಪರರೊಂದಿಗೆ ಒಂದಾಗುವುದು ಸರಿಯೋ ಅಥವಾ ಪ್ರತ್ಯೇಕವಾಗಿ ಚುನಾವಣೆಯನ್ನು ಎದುರಿಸುವುದು ಸರಿಯೋ?

**ಉತ್ತರ:** ಇಂದು ಕೇವಲ ಬಿಜೆಪಿ ಪಕ್ಷ ದೇಶದ ಮೇಲೆ ಫ್ಯಾಸೀವಾದವನ್ನು ಹೇರುತ್ತಿಲ್ಲ. ಈ ಹಿಂದೆ ಕಾಂಗ್ರೆಸ್ ಕೂಡ ಈ ಪ್ರಯತ್ನ ನಡೆಸಿದೆ. ಬಂಡವಾಳಶಾಹಿಗಳ ಹಿತ ಕಾಯಲು ಈ ಎಲ್ಲಾ ಬಂಡವಾಳಶಾಹಿ ಪರವಾದಂತಹ ಪಕ್ಷಗಳು ಫ್ಯಾಸೀವಾದಿ ಕ್ರಮಗಳನ್ನು ಜನರ ಮೇಲೆ ಹೇರಿವೆ. ಆದ್ದರಿಂದ ನಮಗೆ ಐಕ್ಯರಂಗ ಬೇಕಿರುವುದು ಹೋರಾಟಕ್ಕಾಗಿಯೇ ಹೊರತು ಕೇವಲ ಚುನಾವಣೆಯನ್ನು ಎದುರಿಸಲು ಅಲ್ಲ. ಇಂದು 'ಇಂಡಿಯಾ'ದ ನೇತೃತ್ವ ವಹಿಸಿರುವ ಕಾಂಗ್ರೆಸ್ ಕೂಡ ತುರ್ತು ಪರಿಸ್ಥಿತಿಯನ್ನು ಹೇರಿ ಫ್ಯಾಸಿಸ್ಟ್ ಆಳ್ವಿಕೆಯನ್ನು ನಡೆಸಿತ್ತು. ಹಾಗಾಗಿ ಬಂಡವಾಳಗಾರರ ಸೇವೆಗೈಯುವ ಸಲುವಾಗಿ ರಚನೆಯಾಗುವ ಐಕ್ಯರಂಗ ನಮಗೆ ಬೇಕಿಲ್ಲ. ಜನಗಳ ಸಮಸ್ಯೆಯನ್ನು ಹೋರಾಡಲು ಒಂದು ಹೋರಾಟದ ಐಕ್ಯರಂಗ ಅವಶ್ಯಕವಾಗಿದೆ. ಅದಕ್ಕಾಗಿ ಎಲ್ಲಾ ಎಡ ಪಕ್ಷಗಳಿಗೆ ಮತ್ತು ನಾಡಿನ ಎಲ್ಲಾ ಹೋರಾಟ ನಿರತ ಸಂಘಟನೆಗಳಿಗೆ ನಾವು ಕರೆ ನೀಡುತ್ತೇವೆ. ಇಲ್ಲವಾದಲ್ಲಿ ಚುನಾವಣೆಗಾಗಿ ಮಾತ್ರವೇ ಐಕ್ಯರಂಗ ರಚಿಸಿಕೊಳ್ಳುವುದು ಅವಕಾಶವಾದವಾಗುತ್ತದೆ.

**ಪ್ರಶ್ನೆ:** ಮೋದಿಗೆ ಪರ್ಯಾಯವಾಗಿ ನೀವು ಯಾರನ್ನು ಬೆಂಬಲಿಸುತ್ತೀರಿ?

**ಉತ್ತರ:** ಮೋದಿ ನೇತೃತ್ವದ ಎನ್‌ಡಿಎಗೆ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಯಾವ ರೀತಿಯಿಂದಲೂ ಪರ್ಯಾಯವಾಗಲು ಸಾಧ್ಯವಿಲ್ಲ. ತಮ್ಮ ತಮ್ಮ ಆಡಳಿತ ಅವಧಿಯಲ್ಲಿ ಈ ಎಲ್ಲಾ ಪಕ್ಷಗಳು ಸಹ ಫ್ಯಾಸಿಸ್ಟ್ ಆಳ್ವಿಕೆಯನ್ನು ನಡೆಸಿದವರೇ ಆಗಿದ್ದಾರೆ. ಆದ್ದರಿಂದ ನಮ್ಮ ಕರೆ ಎನ್‌ಡಿಎ ಒಕ್ಕೂಟವನ್ನು ಖಂಡಿತ ಸೋಲಿಸಬೇಕು. ಆದರೆ ಅದಕ್ಕೆ ಪರ್ಯಾಯವಾಗಿ 'ಇಂಡಿಯಾ' ಒಕ್ಕೂಟವನ್ನು ಗೆಲ್ಲಿಸಬೇಕಿಲ್ಲ. ಏಕೆಂದರೆ ಇವರು ಅನುಸರಿಸುತ್ತಿರುವ ನೀತಿಗಳು ಒಂದೇ ಆಗಿವೆ. ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಎನ್‌ಇಪಿ2020 ಇಂದ ಹಿಡಿದು ಎಲ್ಲಾ ಕಾರ್ಮಿಕ ಸಂಹಿತೆಗಳು, ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೊಳಿಸಲು ಇವರೂ ಸಹ ಉತ್ಸುಕರಾಗಿದ್ದಾರೆ. ಆದ್ದರಿಂದ ಯಾರು ನಿಜವಾಗಿಯೂ ಜನಪರವಾದ ಹೋರಾಟಗಳನ್ನು ಬೆಳೆಸುತ್ತಿದ್ದಾರೆಯೋ ಅವರನ್ನು ಗೆಲ್ಲಿಸಿ. ಅಂತಹ ಹೋರಾಟನಿರತ ಪಕ್ಷವಾಗಿರುವ ಎಸ್‌ಯುಸಿಐ(ಕಮ್ಯುನಿಸ್ಟ್)ನ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಹೇಳುತ್ತೇವೆ. ಎಲ್ಲಿ ನಾವು ಸ್ಪರ್ಧಿಸುತ್ತಿಲ್ಲವೋ ಅಲ್ಲಿ ಹೋರಾಟಗಳಿಂದ ಹೊರಹೊಮ್ಮಿದ ಅಭ್ಯರ್ಥಿಯನ್ನು ಗೆಲ್ಲಿಸಿ. ಹೋರಾಟದಿಂದ ಹೊರಹೊಮ್ಮಿದವರು ಅಲ್ಲಿ ಇಲ್ಲವಾದಲ್ಲಿ ಕಡೆಯ ಪಕ್ಷ ಇರುವವರಲ್ಲೇ ಪ್ರಾಮಾಣಿಕರನ್ನು ಗೆಲ್ಲಿಸಿ ಎಂದು ಕರೆ ನೀಡುತ್ತೇವೆ.

**ಪ್ರಶ್ನೆ:** ಎನ್‌ಡಿಎ ಮತ್ತು 'ಇಂಡಿಯಾ' ಒಕ್ಕೂಟಗಳಿಗೆ ಸಮನಾಗಿ ಎಸ್‌ಯುಸಿಐ (ಕಮ್ಯುನಿಸ್ಟ್) ಜನಪ್ರಿಯವಾಗಿಲ್ಲ. ಹಾಗಿದ್ದ ಮೇಲೆ ಚುನಾವಣೆಯನ್ನು ನೀವು ಹೇಗೆ ಎದುರಿಸುತ್ತೀರಿ?

**ಉತ್ತರ:** ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಸಿಕ್ಕಷ್ಟು ಮಾಧ್ಯಮಗಳ ಬೆಂಬಲ ನಮಗೆ ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೆ ನಾವು ಸಹ ಎಲ್ಲಾ ಜನರನ್ನು ತಲುಪಲು ಸಾಧ್ಯ. ಆದಾಗ್ಯೂ ರಾಜ್ಯದ 19 ಕ್ಷೇತ್ರಗಳಲ್ಲಿ ಮತ್ತು ಇಡೀ ದೇಶದ 19 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳೂ ಸೇರಿ ಒಟ್ಟು 151 ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸಲಾಗಿದೆ. ಅವರನ್ನು ಗೆಲ್ಲಿಸುವುದು ಜನಗಳ ಮುಂದಿರುವ ಪರ್ಯಾಯ. ನಮ್ಮದು ಕೇವಲ ಪಾರ್ಲಿಮೆಂಟರಿ ರಾಜಕಾರಣ ಮಾಡುವ ಪಕ್ಷವಲ್ಲ. ಜನಪರ ಹೋರಾಟಗಳನ್ನು ಕಟ್ಟುವ ಪಕ್ಷ. ವಿದ್ಯಾರ್ಥಿ-ಯುವಜನ-ಮಹಿಳೆಯರು-ಕಾರ್ಮಿಕರು ರೈತರ ಸಮಸ್ಯೆಗಳನ್ನು ತೆಗೆದುಕೊಂಡು ನಮ್ಮ ಪಕ್ಷ ಮತ್ತು ಮುಂದಳಗಳು ಸದಾ ಹೋರಾಟಗಳನ್ನು ನಡೆಸುತ್ತಿವೆ. ಹೋರಾಟದ ಗತಿಯಲ್ಲಿ ಚುನಾವಣೆ ಎದುರಾದಾಗ ಅದನ್ನೂ ಸಹ ಹೋರಾಟದ ಭಾಗವೆಂದು ಪರಿಗಣಿಸಿ ನಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ. ನಿಜವಾದ ಜನ ಹೋರಾಟಗಳು ಬೆಳೆಯಬೇಕೆಂದರೆ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ನಾವು ಜನರಲ್ಲಿ ಮನವಿ ಮಾಡುತ್ತೇವೆ. ನಮ್ಮ ಮನವಿಯನ್ನು ಜನತೆಗೆ ತಲುಪಿಸುವ ಹೊಣೆ ನಿಮ್ಮದು. ಅಲ್ಲದೆ ಇತಿಹಾಸದ ಪಾಠವೆಂದರೆ ನಾವು ಅನುಸರಿಸುತ್ತಿರುವ ಮಾರ್ಗ ಸರಿಯಾಗಿದ್ದರೆ, ಸತ್ಯ ಮತ್ತು ನ್ಯಾಯಸಮ್ಮತವಾಗಿದ್ದರೆ ಇಂದಲ್ಲ ನಾಳೆ ಗೆಲುವು ನಮ್ಮದೇ. ಈ ನಂಬಿಕೆಯೊಂದಿಗೆ ನಮ್ಮ ಹೋರಾಟ ಮುಂದುವರೆಯುತ್ತಿದೆ.

**ಪ್ರಶ್ನೆ:** ಇತರೆ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಎನ್‌ಡಿಎ ಒಕ್ಕೂಟವನ್ನು ಸೋಲಿಸುವುದು ಹೇಗೆ ಸಾಧ್ಯ?

**ಉತ್ತರ:** ಎನ್‌ಡಿಎ ಒಕ್ಕೂಟವನ್ನು ನಮ್ಮೊಬ್ಬರಿಂದಲೇ ಸೋಲಿಸಲು ಸಾಧ್ಯವಿಲ್ಲ. ಆದರೆ ನಾವು ಜನಗಳಿಗೆ ಮನವಿ ಮಾಡುವುದೇನೆಂದರೆ ನಮ್ಮ ಅಭ್ಯರ್ಥಿಗಳು ಇರುವೆಡೆ ಅವರನ್ನು ಗೆಲ್ಲಿಸಿ, ಇಲ್ಲದಿರುವ ಕಡೆ ಹೋರಾಟ ನಿರತ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂಬುದಾಗಿದೆ. ಆಗ ಎನ್‌ಡಿಎ ಒಕ್ಕೂಟವನ್ನು ಸೋಲಿಸಲು ಸಾಧ್ಯ.

**ಪ್ರಶ್ನೆ:** ಎನ್‌ಡಿಎ ಒಕ್ಕೂಟವನ್ನು ಸೋಲಿಸಬೇಕೆಂದು ಹೇಳುವ ನೀವು ಮತ್ತು ಇತರ ಎಲ್ಲಾ ಎಡ ಪಕ್ಷಗಳು ಒಕ್ಕೂಟ ರಚಿಸಿಕೊಳ್ಳದೆ ಪ್ರತ್ಯೇಕವಾಗಿ ಅಭ್ಯರ್ಥಿಗಳನ್ನು ನಿಲ್ಲಿಸಿದರೆ ಮತಗಳು ಚದುರುವುದಿಲ್ಲವೇ?

**ಉತ್ತರ:** ನಮಗೆ ಒಕ್ಕೂಟ ಬೇಕು. ಆದರೆ ಅದು ಹೋರಾಟದ ಉದ್ದೇಶದಿಂದ ಆಗಬೇಕು. ಕೇವಲ ಚುನಾವಣೆಗೋಸ್ಕರ ಒಕ್ಕೂಟ ರಚಿಸಿಕೊಳ್ಳುವುದಲ್ಲ. ಜನಗಳ ಸಮಸ್ಯೆಗಳ ವಿರುದ್ಧ ಹೋರಾಡಲು ಒಕ್ಕೂಟರಂಗದ ಅವಶ್ಯಕತೆ ಇದೆ. ಕಡೇ ಪಕ್ಷ ಎಡಪಕ್ಷಗಳಾದರೂ ಈ ಒಕ್ಕೂಟರಂಗವನ್ನು ರಚಿಸಿಕೊಳ್ಳುವ ಅವಶ್ಯಕತೆ ಇದೆ. ಮಾರ್ಕ್ಸ್‌ವಾದ, ಲೆನಿನ್‌ವಾದದಲ್ಲಿ ನಂಬಿಕೆ ಇರುವ ಪಕ್ಷಗಳಾದರೆ ಈ ಒಕ್ಕೂಟ ಹೋರಾಟಕ್ಕೆ ಕೈ ಹಾಕಬೇಕು. ಲೆನಿನ್ "ಒಕ್ಕೂಟದ ಅವಶ್ಯಕತೆ ಇರುವುದು ಜನ ಹೋರಾಟಗಳನ್ನು ಬಲಪಡಿಸಲು. ಬಲಿಷ್ಠವಾದ ಹೋರಾಟಗಳನ್ನು ಕಟ್ಟಿ ತನ್ಮೂಲಕ ಜನಗಳ ಪರ್ಯಾಯ ರಾಜಕೀಯ ಶಕ್ತಿಯನ್ನು ನಿರ್ಮಿಸಬೇಕು" ಎನ್ನುತ್ತಾರೆ. ಅವರ ವಿಚಾರದಲ್ಲಿ ನಂಬಿಕೆ ಇರುವವರು ಈ ಒಕ್ಕೂಟ ಹೋರಾಟ ರಂಗವನ್ನು ಸೇರಬೇಕು. ಬದಲಿಗೆ ಹೇಗಾದರೂ ಸರಿಯೇ ಪಾರ್ಲಿಮೆಂಟಿನಲ್ಲಿ ಸ್ಥಾನಗಿಟ್ಟಿಸಿಕೊಳ್ಳಲು ಒಮ್ಮೆ ಕಾಂಗ್ರೆಸ್ ಜೊತೆಗೆ, ಮತ್ತೊಮ್ಮೆ ಜೆಡಿಎಸ್ ಜೊತೆಗೆ ಸೇರುವುದು ಅವಕಾಶವಾದವಲ್ಲವೇ?

**ಪ್ರಶ್ನೆ:** ನಿಮ್ಮದು ಜನಪರ ಸಂಘಟನೆಯೇ ಅಥವಾ ರಾಜಕೀಯ ಪಕ್ಷವೇ?

**ಉತ್ತರ:** ಎರಡೂ ಹೌದು. ನಮ್ಮದು ನೈಜ ಕಾರ್ಮಿಕ ವರ್ಗದ ರಾಜಕೀಯ ಪಕ್ಷ. ಜನಪರ ಆಶಯಗಳನ್ನು ಎತ್ತಿ ಹಿಡಿಯುವ ನೈಜ ಕಮ್ಯುನಿಸ್ಟ್ ಪಕ್ಷ ನಮ್ಮದಾಗಿದೆ. ಆದರೆ ಸಿಪಿಐ, ಸಿಪಿಐ(ಎಂ)ಗಳು ಇಂದು ಹೋರಾಟದ ಮಾತುಗಳನ್ನು ನಿಲ್ಲಿಸಿ ಬಿಟ್ಟಿವೆ.

**ಪ್ರಶ್ನೆ:** ದೇಶಾದ್ಯಂತ 151 ಕ್ಷೇತ್ರಗಳಲ್ಲಿ ನೀವು ಗೆದ್ದರೂ ಸರ್ಕಾರ ರಚಿಸಲು ಸಾಧ್ಯವಿಲ್ಲ, ಆಗ ಹೊಂದಾಣಿಕೆ ಮಾಡಿಕೊಳ್ಳಲೇಬೇಕಲ್ಲವೇ?

**ಉತ್ತರ:** ನಾವು ಈ ಚುನಾವಣೆಯನ್ನು ಒಂದು ಹೋರಾಟದ ವೇದಿಕೆಯಾಗಿ ಪರಿಗಣಿಸುತ್ತೇವೆ. ಚುನಾವಣೆಯ ಸಂದರ್ಭದಲ್ಲಿ ಜನತೆ ರಾಜಕೀಯವಾಗಿ ಎಚ್ಚರಗೊಂಡಿರುವಾಗ ವಿಚಾರಗಳನ್ನು ಕೇಳಿಸಿಕೊಳ್ಳುವ ಮನಸ್ಥಿತಿ ಹೊಂದಿರುವಾಗ ನಮ್ಮ ಹೋರಾಟದ ರಾಜಕೀಯದ ಬಗ್ಗೆ ಜನರೊಡನೆ ಚರ್ಚಿಸಲು ಈ ಅವಕಾಶವನ್ನು ಬಳಸಿಕೊಳ್ಳುತ್ತೇವೆ. ನಮ್ಮದು ನೈಜ ಕ್ರಾಂತಿಕಾರಿ ಪಕ್ಷ, ಸಂಸದೀಯ ರಾಜಕಾರಣಕ್ಕೆ ನಾವು ಸೀಮಿತವಾಗಿಲ್ಲ.

ಜನಗಳಿಗೆ ಜಾತಿ, ಧರ್ಮ, ಕೋಮು ಸಮಸ್ಯೆಗಳನ್ನು ದೊಡ್ಡದಾಗಿ ಬಿಂಬಿಸಿ ಅವರ ನೈಜ ಸಮಸ್ಯೆಗಳಿಂದ ವಿಮುಖರಾಗುವಂತೆ ಮಾಡಿರುವ ಇಂದಿನ ರಾಜಕೀಯಕ್ಕೆ ಪರ್ಯಾಯವಾಗಿ ನೈಜ ಜನಪರ ರಾಜಕೀಯವನ್ನು ಚರ್ಚಿಸುವ ಸಲುವಾಗಿ ನಾವು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ. ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಜನತೆಗೆ ಮನವಿಯನ್ನು ಮಾಡುತ್ತೇವೆ. ಆದರೆ ಈ ಕುರಿತು ಯಾವುದೇ ಭ್ರಮೆಗಳಿಲ್ಲ. ಹೋರಾಟದ ವಿಚಾರಧಾರೆಯನ್ನು ಹರಡುವುದೇ ನಮ್ಮ ಉದ್ದೇಶ. ಚುನಾವಣೆಯ ನಂತರವೂ ಈ ನಮ್ಮ ಕಾರ್ಯ ಮುಂದುವರಿಯುತ್ತದೆ.

**ಪ್ರಶ್ನೆ:** ನೀವೇ ಬಹುಮತ ಪಡೆದು ಗೆದ್ದು ಬಂದರೆ ದೇಶಕ್ಕೆ ನಿಮ್ಮ ಕೊಡುಗೆ ಏನು?

**ಉತ್ತರ:** ಈ ಸಂಸದೀಯ ವ್ಯವಸ್ಥೆಯು ಬಂಡವಾಳಿಗರ ಸೇವೆ ಮಾಡಲು ಹುಟ್ಟಿಕೊಂಡ ವ್ಯವಸ್ಥೆಯಾಗಿದೆ. ಸಂಪೂರ್ಣ ಸಮಾಜದ ಮೂಲಭೂತ ಬದಲಾವಣೆಗೆ ಸಮಾಜವಾದಿ ಕ್ರಾಂತಿ ಅನಿವಾರ್ಯ. ಅಲ್ಲಿಯವರೆಗೂ ಈ ವ್ಯವಸ್ಥೆಯಲ್ಲೇ ನಾವು ಗೆದ್ದು ಬಂದರೆ ಈ ಸಂಸತ್ತಿನ ಚೌಕಟ್ಟಿನೊಳಗೆ ಜನಪರವಾದ ಕ್ರಮಗಳನ್ನು ಕೈಗೊಳ್ಳುತ್ತೇವೆ. ಕಾರ್ಮಿಕ ಕಾನೂನುಗಳನ್ನು ಬಲಪಡಿಸುವುದು, ಖಾಸಗೀಕರಣವನ್ನು ಸಂಪೂರ್ಣವಾಗಿ ಪುಟ 8 ಕ್ಕೆ

ಪುಟ 7 ರಿಂದ ರದ್ದು ಮಾಡುವುದು, ನೈಜ ಜನಪರ ಕಾನೂನುಗಳನ್ನು ಜಾರಿಗೊಳಿಸುವುದು, ಶಿಕ್ಷಣ ಮತ್ತು ಆರೋಗ್ಯವನ್ನು ಸಂಪೂರ್ಣ ಉಚಿತವಾಗಿ ನೀಡುವುದು, ಶಿಕ್ಷಣವನ್ನು ಚಾರಿತ್ರ್ಯ ನಿರ್ಮಾಣದ ಸಾಧನವನ್ನಾಗಿ ಮಾರ್ಪಡಿಸುವುದು, ಮಹಾನ್ ವ್ಯಕ್ತಿಗಳ ವಿಚಾರಗಳನ್ನು ಅಳವಡಿಸುವುದು ಇವೇ ಮೊದಲಾದ ಸುಧಾರಣೆಗಳನ್ನು ಕ್ರಾಂತಿಗೆ ಪೂರಕವಾಗಿ ತರುತ್ತೇವೆ.

**ಪ್ರಶ್ನೆ:** ಬೇರೆ ಯಾವುದೇ ಪಕ್ಷಗಳೊಂದಿಗೆ ನಿಮಗೆ ಹೊಂದಾಣಿಕೆ ಇದೆಯೇ?

**ಉತ್ತರ:** ಯಾವುದೇ ಪಕ್ಷಗಳೊಂದಿಗೆ ಹೊಂದಾಣಿಕೆ ಇಲ್ಲ. ಸಿಪಿಐ, ಸಿಪಿಎಂ ಪಕ್ಷಗಳಿಗೆ ಕರೆ ನೀಡಿದ್ದೇವೆ. ಅವರು ಹೋರಾಟಗಳಿಗೆ ನಮ್ಮ ಜೊತೆ ಇರುತ್ತಾರೆ. ಆದರೆ ಚುನಾವಣೆ ಬಂದೊಡನೆ ಕಾಂಗ್ರೆಸ್ ಅಥವಾ ಜೆಡಿಎಸ್ ಜೊತೆ ಹೋಗುತ್ತಾರೆ. ಈಗ ನಾವು ಏಕಾಂಗಿಯಾಗಿ ಚುನಾವಣೆಯನ್ನು ಎದುರಿಸುತ್ತಿದ್ದೇವೆ.

**ಪ್ರಶ್ನೆ:** ಎಡ ಪಕ್ಷಗಳು ಜನಸಮೂಹದ ಮೇಲೆ ತಮ್ಮ ಹಿಡಿತ ಕಳೆದುಕೊಳ್ಳುತ್ತಿವೆ ಏಕೆ?

**ಉತ್ತರ:** ಸಮಾಜವಾದ ಉತ್ತುಂಗದಲ್ಲಿದ್ದಂತಹ ಸಂದರ್ಭದಲ್ಲಿ ದೇಶದಾದ್ಯಂತ ಎಡ ಪಕ್ಷಗಳಿಗೆ ಇದ್ದಂತಹ ಜನಪ್ರಿಯತೆಯು ಈಗ ಕಡಿಮೆಯಾಗಿದೆ. ಇಲ್ಲಿ ಕಮ್ಯುನಿಸ್ಟ್ ಪಕ್ಷಗಳು ಎಂದು ಕರೆದುಕೊಂಡ ಸಿಪಿಐ ಮತ್ತು ಸಿಪಿಎಂ ಪಕ್ಷಗಳು ಎಂದೂ ನೈಜ ಕಮ್ಯುನಿಸ್ಟ್ ಆಗಲಿಲ್ಲ. ಅಲ್ಲದೇ ಇತಿಹಾಸದಲ್ಲಿ ತೆಗೆದುಕೊಂಡಂತಹ ತಪ್ಪು ನಿರ್ಣಯಗಳಿಂದಾಗಿ ಜನಮಾನಸದಿಂದ ದೂರ ಉಳಿದಿದ್ದಾರೆ. ಸಿಪಿಐ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಲೇ ಇಲ್ಲ. ಇನ್ನು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಿಪಿಐ ಇಂದಿರಾ ಗಾಂಧಿಯವರನ್ನು ಬೆಂಬಲಿಸಿತು. ಸಿಪಿಎಂ ಜೆಪಿ ಚಳುವಳಿಯಲ್ಲಿ ಜನಸಂಘ ಸೇರ್ಪಡೆಯಾಗಿದೆ ಎಂಬ ಕಾರಣಕ್ಕೆ ಹೋರಾಟದಲ್ಲಿ ಭಾಗವಹಿಸಲೇ ಇಲ್ಲ. ಅದಲ್ಲದೆ 1991ರಲ್ಲಿ ಸಮಾಜವಾದಿ ಒಕ್ಕೂಟದ ಪತನ, 2003ರಲ್ಲಿ ಚೀನಾ ಸಮಾಜವಾದದ ಪತನವು ಜನರಲ್ಲಿ ಎಡಪಕ್ಷಗಳ ಬಗ್ಗೆ ಇದ್ದ ಭರವಸೆಯನ್ನು ಕಡಿಮೆ ಮಾಡಿವೆ. ಈ ಹಿನ್ನೆಲೆಯಲ್ಲಿ ಸಿಪಿಐ, ಸಿಪಿಐ(ಎಂ) ಪಕ್ಷಗಳಿಗೂ ಸಹ ಹಿನ್ನಡೆಯಾಗಿರುವುದು ಸಹಜವೇ. ಆದರೆ ಜಾಗತಿಕವಾಗಿ ಈ ತಾತ್ಕಾಲಿಕ ಹಿನ್ನಡೆಯಿಂದ ನಾವು ವಿಚಲಿತರಾಗಿಲ್ಲ. ನಮ್ಮ ಪಕ್ಷದ ಸಂಸ್ಥಾಪಕರು ಹಾಗೂ ಈ ಯುಗದ ಓರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರ ಪ್ರಖರ ಮತ್ತು ಸ್ಪಷ್ಟ ವಿಚಾರಧಾರೆಯೊಂದಿಗೆ ನಮ್ಮ ಪಕ್ಷ ದೇಶದಾದ್ಯಂತ ವಿಸ್ತರಣೆಯಾಗುತ್ತಿದೆ. ಬಂಡವಾಳಶಾಹಿ ಬಿಕ್ಕಟ್ಟು ದಿನೇ ದಿನೇ ಉಲ್ಬಣಗೊಳ್ಳುತ್ತಿದೆ. ಮತ್ತೆ ಕಾರ್ಮಿಕ ವರ್ಗದ ಹೋರಾಟಕ್ಕೆ ಕಾಲ ಪಕ್ವವಾಗುತ್ತಿದೆ. ಭವಿಷ್ಯದಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಮತ್ತೆ ಜನಮನ್ನಣೆ ಸಿಕ್ಕೇ ಸಿಗುತ್ತದೆ. ಆದ್ದರಿಂದಲೇ ನಮ್ಮ ಪಕ್ಷ ಇಂದು ರೈತರು–ಕಾರ್ಮಿಕರ ನಡುವೆ ಚಳುವಳಿಗಳನ್ನು ಬಲಪಡಿಸುತ್ತಾ ಜನಮಾನಸದಲ್ಲಿ ಉಳಿಯುತ್ತಿದೆ, ಬೆಳೆಯುತ್ತಿದೆ. ಇಂದು ದೇಶದಾದ್ಯಂತ 22 ರಾಜ್ಯಗಳಲ್ಲಿ ನಮ್ಮ ಪಕ್ಷದ ಚಟುವಟಿಕೆಗಳು ನಡೆಯುತ್ತಿವೆ. ವಿಚಾರ ಮತ್ತು ಮಾರ್ಗ ಎರಡು ಸ್ಪಷ್ಟವಾಗಿದ್ದರೆ ಗೆಲುವು ನಿಶ್ಚಿತ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ.

ಅಂತಿಮವಾಗಿ, ಈ ವಿಚಾರಗಳನ್ನು ಜನತೆಗೆ ತಲುಪಿಸಿ, ಜನಪರ ಹೋರಾಟಗಳಲ್ಲಿ ತೊಡಗಿರುವ ಅಭ್ಯರ್ಥಿ ಕಾ. ಸುಜಾತ ಡಿ. ಅವರನ್ನು ಗೆಲ್ಲಿಸಬೇಕೆಂದು ಕಾ॥ ಕೆ.ರಾಧಾಕೃಷ್ಣ ಕರೆ ನೀಡಿದರು.

ಈ ಸಂದರ್ಭದಲ್ಲಿ ಅಭ್ಯರ್ಥಿ ಕಾ, ಸುಜಾತ ಡಿ. ಮತ್ತು ಪಕ್ಷದ ರಾಜ್ಯ ಮುಖಂಡರಾದ ಕಾ. ಎಂ.ಎನ್. ಮಂಜುಳಾ ಉಪಸ್ಥಿತರಿದ್ದರು.

### ತಿಪಟೂರು, ತುಮಕೂರು ಜಿಲ್ಲೆ:

ತಿಪಟೂರಿನಲ್ಲಿ ಸಂಘಟಿಸಲಾದ ಮುಕ್ತ ಸಂವಾದವನ್ನು ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಲ್ಲೊಬ್ಬರಾದ ಕಾ. ಕೆ.ರಾಧಾಕೃಷ್ಣ ನಡೆಸಿಕೊಟ್ಟರು. ಇಲ್ಲಿಯೂ ಸಹ ಪ್ರಸಕ್ತ ರಾಜಕಾರಣ, ನಮ್ಮ ಪಕ್ಷ ಎಸ್‌ಯುಸಿಐ(ಸಿ) ನಿಲುವು ಮುಂತಾದವುಗಳ ಬಗ್ಗೆ ಚರ್ಚೆ ನಡೆಯಿತು. ಸಭೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ.ಉಮಾ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹಾಗೂ ಅಭ್ಯರ್ಥಿ ಕಾ. ಎಸ್.ಎನ್. ಸ್ವಾಮಿ ಮತ್ತು ಕಾ. ಲೋಕೇಶ್, ತಾಲೂಕು ಇನ್‌ಚಾರ್ಜ್ ಉಪಸ್ಥಿತರಿದ್ದರು. ■




**ಮಾತನಾಡುತ್ತಿರುವವರು ಕಾ.ಕೆ.ರಾಧಾಕೃಷ್ಣ, ಅವರೊಂದಿಗೆ ಕಾ. ಕೆ. ಉಮಾ**

## ಬಂಡವಾಳಶಾಹಿ ದೈತ್ಯನ ಕಪಿಮುಷ್ಟಿಯಲ್ಲಿ ಸರ್ಕಾರ

ನರೇಂದ್ರ ಮೋದಿ ಸರ್ಕಾರವು, ಗುಜರಾತಿನ ಜಾಮ್‌ನಗರದಲ್ಲಿರುವ ಅತಿಸೂಕ್ಷ್ಮ ರಕ್ಷಣಾ ವಾಯುನೆಲೆಯಲ್ಲಿ ಮುಖೇಶ ಅಂಬಾನಿಯ ಕಿರಿಯ ಮಗನ ಮದುವೆ ಸಮಾರಂಭಕ್ಕೆ ಆಹ್ವಾನಿತ ಅತಿಥಿಗಳು ಆಗಮಿಸಲು ಅನುಕೂಲವಾಗುವಂತೆ 10 ದಿನಗಳವರೆಗೆ ಅಂತರರಾಷ್ಟ್ರೀಯ ವಿಮಾನಗಳು ಪ್ರಯಾಣಿಸಲು ಅವಕಾಶ ನೀಡಿದ ವಿರಳ ವಿದ್ಯಮಾನವೊಂದು ಘಟಿಸಿದೆ. ಪಾಕಿಸ್ತಾನ ಗಡಿಗೆ ಅತಿ ಹತ್ತಿರದಲ್ಲಿರುವ ಭಾರತೀಯ ವಾಯುಪಡೆಯ ವಿಮಾನ ನಿಲ್ದಾಣಕ್ಕೆ ಫೆಬ್ರುವರಿ 25 ರಿಂದ ಮಾರ್ಚ್ 5 ರವರೆಗೆ ಅಂತರರಾಷ್ಟ್ರೀಯ ಸಂಪರ್ಕವನ್ನು ನೀಡಲಾಗಿದೆ.

ಪ್ರಧಾನಿ ಮೋದಿಯವರ ಪರಮಾಪ್ತ, ಬಹುಶತಕೋಟ್ಯಾಧೀಶ ಉದ್ಯಮಿ ಮುಖೇಶ ಅಂಬಾನಿಯ ಮಗ ಅನಂತ ಅಂಬಾನಿಯ ವಿವಾಹಪೂರ್ವ ಸಮಾರಂಭಕ್ಕೆ ವಿಶ್ವದ ವಿವಿಧ ಭಾಗಗಳಿಂದ ಅತಿಥಿಗಳು ಆಗಮಿಸಿದ್ದರು. ವಿಮಾನ ನಿಲ್ದಾಣದ ಅಧಿಕಾರಿಗಳ ಪ್ರಕಾರ ಫೆಬ್ರುವರಿ 28 ಹಾಗೂ ಮಾರ್ಚ್ 4 ರ ನಡುವೆ ಜಾಮನಗರ ನಿಲ್ದಾಣಕ್ಕೆ ಕನಿಷ್ಠ 150 ವಿಮಾನಗಳು ಬರಬಹುದೆಂದು ನಿರೀಕ್ಷಿಸಲಾಗಿತ್ತು. ಇವುಗಳ ಪೈಕಿ 50 ವಿಮಾನಗಳು ನೇರವಾಗಿ ವಿದೇಶಗಳಿಂದ ಬರುವಂತಹವಾಗಿದ್ದವು. ಈ ಐದು ದಿನಗಳ ಅವಧಿಯಲ್ಲಿ, 300ಕ್ಕೂ ಹೆಚ್ಚು ವಿಮಾನಗಳ ಹಾರಾಟವನ್ನು ನಿರೀಕ್ಷಿಸಲಾಗಿತ್ತು. ಕೇಂದ್ರ ಸರ್ಕಾರದ ಆರೋಗ್ಯ, ಹಣಕಾಸು ಮತ್ತು ಗೃಹ ಸಚಿವಾಲಯಗಳಿಗೆ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್, ಇಮಿಗ್ರೇಶನ್ ಹಾಗೂ ಕ್ವಾರಂಟೈನ್ ಸೌಲಭ್ಯಗಳನ್ನು ಒದಗಿಸುವಂತೆ ಒತ್ತಡ ಹೇರಲಾಗಿತ್ತು. ಈಗಾಗಲೇ ಇರುವ 16 ಪರಿಚಾರಕರನ್ನು 35 ಕ್ಕೆ , ಭದ್ರತಾ ಸಿಬ್ಬಂದಿಯ ಸಂಖ್ಯೆಯನ್ನು 35 ರಿಂದ 70 ಕ್ಕೆ ಹಾಗೂ ಮೈದಾನವನ್ನು ನಿರ್ವಹಿಸುವ ಸಿಬ್ಬಂದಿಯ ಸಂಖ್ಯೆಯನ್ನು 65 ರಿಂದ 125ಕ್ಕೆ ಹೆಚ್ಚಿಸಲಾಗಿತ್ತು.

ಕಳೆದ ನವೆಂಬರ್‌ನಲ್ಲಿ ಪ್ರಧಾನಿ ಮೋದಿಯವರು, ತಮ್ಮ 'ಮನ್ ಕಿ ಬಾತ್' ಮಾಸಿಕ ರೇಡಿಯೋ ಕಾರ್ಯಕ್ರಮದಲ್ಲಿ ಶ್ರೀಮಂತ ಭಾರತೀಯರಿಗೆ 'ಭಾರತದಲ್ಲೇ ಮದುವೆಯಾಗಿ' ಎಂದು ಮನವಿ ಮಾಡಿಕೊಂಡಿದ್ದರು. ಈ ಹೊಸ ನೀತಿಯನುಸಾರವೇ ಅವರ ಸರ್ಕಾರವು ಆಗಲೇ ಜಾಮ್‌ನಗರ ವಿಮಾನನಿಲ್ದಾಣದಲ್ಲಿ ಅಂಬಾನಿ ಬಂಧುಗಳ ಮದುವೆ ಸಮಾರಂಭಕ್ಕೆ ಅಗತ್ಯ ತಯಾರಿ ನಡೆಸಿತ್ತೇ ಅಥವಾ ಅದು ಅಂಬಾನಿ ಕುಟುಂಬಕ್ಕೆ ನಿಷ್ಠೆಯನ್ನು ಪ್ರದರ್ಶಿಸುವ ಸೇವೆಯ ಭಾಗವಾಗಿತ್ತೇ ಎಂಬುದು ಇನ್ನೂ ಬಗೆಹರಿಯದ ಪ್ರಶ್ನೆ! ■

## 'ನಾರೀಶಕ್ತಿ ವಂದನ್'

ಪ್ರಧಾನಿ ಮೋದಿಯವರು ತಾವು ನಾರೀಶಕ್ತಿ ವಂದನಕ್ಕೆ ಬದ್ಧರಿರುವುದಾಗಿ ಹೇಳುತ್ತಾರೆ. ಆದಾಗ್ಯೂ ನಿಮಗೆಲ್ಲ ತಿಳಿದಿರುವಂತೆ ಇವರ ಅಧಿಕಾರಾವಧಿಯಲ್ಲಿ ಮಹಿಳೆಯರ ಮೇಲಿನ ಅಪರಾಧ ಕೃತ್ಯಗಳೂ ತೀವ್ರ ಹೆಚ್ಚಳ ಕಂಡಿವೆ. ನ್ಯಾಶನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ (ಎನ್‌ಸಿಆರ್‌ಬಿ)ದ ಬಿ ವರದಿಯು, ಮಹಿಳೆಯರ ಮೇಲಿನ ಅಪರಾಧಗಳು ಹೆಚ್ಚಳವಾಗಿರುವುದನ್ನು ವಿವರಿಸಿದೆ. 2020ರಲ್ಲಿ 3,71,503 ಪ್ರಕರಣಗಳು ದಾಖಲಾಗಿದ್ದರೆ 2022ರಲ್ಲಿ 4,45,256 ಪ್ರಕರಣಗಳು ಬೆಳಕಿಗೆ ಬಂದಿವೆ. 2021ರ 4,28,278 ಪ್ರಕರಣಗಳಿಗೆ ಹೋಲಿಸಿದರೆ 2022 ರಲ್ಲಿ ವಾರ್ಷಿಕ ಶೇ4 ರಷ್ಟು ಅಪರಾಧಗಳು ಹೆಚ್ಚಳವಾಗಿರುವ ಭಯಾನಕ ಸತ್ಯ ಬಹಿರಂಗವಾಗಿದೆ. ಪ್ರತಿಗಂಟೆಗೆ 15 ಎಫ್‌ಐಆರ್‌ಗಳು ದಾಖಲಾಗುತ್ತಿವೆ ಇದು ನಾರಿಶಕ್ತಿ ವಂದನ್‌ದ ಒಂದು ಮುಖ.

ಕಾರ್ಮಿಕ ಕ್ಷೇತ್ರದಲ್ಲಿ ಮಹಿಳಾ ಕೆಲಸಗಾರರು ಹೇಗೆ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆಂದು ಇದೀಗ ಸೂರ್ಯಸ್ಪಷ್ಟವಾಗಿದೆ. ಒಂದೇ ರೀತಿಯ ಉದ್ಯೋಗಗಳಲ್ಲಿಯೂ ಮಹಿಳೆಯರು ಪುರುಷರಿಗೆ ನೀಡುವ ಪಗಾರದ ಅರ್ಧದಷ್ಟನ್ನು ಮಾತ್ರ ಪಡೆಯುತ್ತಿದ್ದಾರೆ. (ಎನ್‌ಎಸ್‌ಎಸ್‌ಓ 2022). 90% ಮಹಿಳೆಯರಿಗೆ ಮಾತೃತ್ವ ರಜೆಯಲ್ಲಿ ವೇತನವನ್ನು ನೀಡುತ್ತಿಲ್ಲ. ಅವರು ರಜೆ ಕೇಳಿದರೆ, ಕೆಲಸದಿಂದಲೇ ಕಿತ್ತುಹಾಕಲಾಗುತ್ತದೆ. ಮಹಾರಾಷ್ಟ್ರದಲ್ಲಿ, ಕಬ್ಬು ಕಟಾವು ಮಾಡುವ ಮಹಿಳೆಯರಲ್ಲಿ ಶೇ 30 ರಷ್ಟು ಮಂದಿ ತಮ್ಮ ಕೂಲಿಗೆ ಋತುಸ್ರಾವದ ದಿನಗಳು ತೊಂದರೆ ಕೊಡಬಾರದೆಂದು ಗರ್ಭಕೋಶವನ್ನೇ ತೆಗೆಸುತ್ತಿದ್ದಾರೆ. ಉತ್ತರ ಪ್ರದೇಶ, ಆಸ್ಸಾಂ, ಮಹಾರಾಷ್ಟ್ರ, ಕರ್ನಾಟಕ, ಒಡಿಶಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮಹಿಳೆಯರಿಗೆ ಪುರುಷರ ವೇತನಕ್ಕಿಂತ ಶೇ 70 ರಷ್ಟು ಕಡಿಮೆ ನೀಡಲಾಗುತ್ತದೆ. ಸೆಣಬು ಸಂಸ್ಕರಣಾ ಘಟಕ ಹಾಗೂ ಚಹಾ ತೋಟಗಳಲ್ಲಿ ಕೆಲಸ ಮಾಡಲು ಮಹಿಳಾ ಕೆಲಸಗಾರರಿಗೆ ಬೇಡಿಕೆ ಇದೆ. ಏಕೆಂದರೆ ಅವರಿಗೆ ಅತಿ ಕಡಿಮೆ ಪಗಾರ ನೀಡಬಹುದೆಂದು. ಕೆಲಸದ ಸ್ಥಳದಲ್ಲಿ ಅದರಲ್ಲೂ, ರಾತ್ರಿಪಾಳಿಯಲ್ಲಿ ಲೈಂಗಿಕ ಕಿರುಕಳವನ್ನು ತಡೆಯಲು ಪ್ರತಿ ಕೆಲಸದ ಸ್ಥಳದಲ್ಲಿ 'ಮಹಿಳಾ ಸುರಕ್ಷತಾ ಸಮಿತಿ'ಯನ್ನು ರಚಿಸಬೇಕೆಂಬ ನಿಯಮವಿದೆ. ಆದರೆ ಇದು ಕೇವಲ ಕಾಗದದ ಮೇಲಷ್ಟೇ ಇದೆ. ಮಹಿಳಾ ಕೆಲಸಗಾರರು ಶೌಚಾಲಯಗಳ ಕೊರತೆಯಿಂದಲೂ ಕಷ್ಟಪಡುತ್ತಾರೆ. ಇರುವ ಶೌಚಾಲಯಗಳೂ ಗಬ್ಬೆದ್ದು ನಾರುತ್ತಿರುತ್ತವೆ. ಇದೇ ನಮ್ಮ ಪ್ರಧಾನಮಂತ್ರಿಯವರು ಪ್ರತಿಪಾದಿಸುವ 'ನಾರೀಶಕ್ತಿ ವಂದನ್' ಇರಬೇಕು! ■

## ಪ್ರತಿಭಟನೆಯ ಜ್ವಾಲೆಯಲ್ಲಿ ಬೇಯುತ್ತಿರುವ ಸಂದೇಶ್‌ಖಾಲಿ

ಪಶ್ಚಿಮ ಬಂಗಾಳದ ಸುಂದರಬನ್ಸ್ ಪ್ರದೇಶದ ಹಿಂದುಳಿದ ತಾಲೂಕು ಸಂದೇಶ್‌ಖಾಲಿಯು ಕಳೆದೊಂದು ತಿಂಗಳಿಂದ ರಾಜಕೀಯ ಬಿರುಗಾಳಿಯ ಕೇಂದ್ರವಾಗಿದೆ. ದೀರ್ಘಕಾಲದಿಂದ ಇಲ್ಲಿನ ಬಡ ನಿವಾಸಿಗಳು, ಮುಖ್ಯವಾಗಿ ಮಹಿಳೆಯರು ಆಡಳಿತಾರೂಢ ಟಿಎಂಸಿಗೆ ನಿಷ್ಠರಾಗಿರುವ ಗೂಂಡಾಗಳು ಮತ್ತು ಮಾಫಿಯಾಗಳಿಂದ ಕ್ರೂರ ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ಜನರಿಂದ ಅವರು ಬಲವಂತವಾಗಿ ನೂರಾರು ಎಕರೆಗಳಷ್ಟು ಕೃಷಿಭೂಮಿಯನ್ನು ಕಿತ್ತುಕೊಳ್ಳುತ್ತಿದ್ದಾರೆ, ಬೆಳೆಗಳನ್ನು ಲೂಟಿ ಮಾಡುತ್ತಿದ್ದಾರೆ ಹಾಗೂ ಕೃಷಿಯೋಗ್ಯ ಭೂಮಿಗೆ ಉಪ್ಪು ನೀರು ಹರಿಸಿ ಸೀಗಡಿ ಹಾಗೂ ಮೀನುಗಳನ್ನು ಬೆಳೆಸಲು ಕೊಳಗಳನ್ನು ನಿರ್ಮಿಸುತ್ತಿದ್ದಾರೆ. ಪೊಲೀಸ್ ಹಾಗೂ ಆಡಳಿತವು ಮೂಕ ಪ್ರೇಕ್ಷಕರಾಗಿರುವುದರಿಂದ ಅಲ್ಲಿ ಅವರದೇ ಕೊನೆಯ ಮಾತು. ಇಂತಹ ದಬ್ಬಾಳಿಕೆಯ ಮೂಲಕ ಈ ಗೂಂಡಾಗಳು ಬಡರೈತರು ಮತ್ತು ಇತರ ಶ್ರಮಜೀವಿಗಳನ್ನು ಶೋಷಿಸಿ ಅಪಾರ ಹಣ ಹಾಗೂ ಆಸ್ತಿಪಾಸ್ತಿಯ ಒಡೆಯರಾಗಿದ್ದಾರೆ. ಅತಿ ಘೋರವಾದ ಸಂಗತಿಯೆಂದರೆ, ಅವರು ಪ್ರತಿ ಮನೆಮನೆಯನ್ನೂ ಸಮೀಕ್ಷೆ ಮಾಡಿ ಅಲ್ಲಿ ಯಾವುದೇ ಸುಂದರ ಯುವತಿಯರು ಅಥವಾ ಹುಡುಗಿಯರು ಕಂಡರೆ ಅವರನ್ನು ಆಡಳಿತ ಪಕ್ಷದ ಕಚೇರಿಗೆ ಕೊಂಡೊಯ್ಯುತ್ತಾರೆ; ತಮಗೆ ತೃಪ್ತಿಯಾಗುವವರೆಗೆ ಅವರನ್ನು ಬಳಸಿಕೊಂಡು ಇಡೀ ರಾತ್ರಿ ಅವರನ್ನು ಅಲ್ಲಿಯೇ ಇಟ್ಟುಕೊಳ್ಳುತ್ತಾರೆ. ಆ ಅಸಹಾಯಕ ಹೆಣ್ಣುಮಕ್ಕಳನ್ನು ರಕ್ಷಿಸಲು ಬರುವ ಪುರುಷರನ್ನು ದಬ್ಬಾಳಿಕೆಯ ಮೂಲಕ ಓಡಿಸಲಾಗುತ್ತದೆ. ಈ ಎಲ್ಲ ಮಾಫಿಯಾದ ಕಿಂಗ್‌ಪಿನ್ ಶೇಖ್ ಶಹಾಜಹಾನ್ ಆಗಿದ್ದು ಮೊದಲು ಸಿಪಿಎಂನಲ್ಲಿದ್ದ ಆತ ಟಿಎಂಸಿ ಅಧಿಕಾರಕ್ಕೆ ಬಂದ ಕೂಡಲೇ ಆ ಪಕ್ಷವನ್ನು ಸೇರಿದ. ಇಂತಹ ಅಪರಾಧಿಗಳು ತಮ್ಮ ಕುಕೃತ್ಯಗಳಿಂದ ರಕ್ಷಿಸಿಕೊಳ್ಳಲು ಆಡಳಿತಪಕ್ಷವೇ ಆಶ್ರಯತಾಣ. ತಮ್ಮ ಮತಬ್ಯಾಂಕ್‌ನ್ನು ಗಟ್ಟಿಗೊಳಿಸಿಕೊಳ್ಳಲು, ಅಪರಾಧಿಕರಣಗೊಂಡ ಇಂದಿನ ಬೂರ್ಜ್ವಾ ರಾಜಕೀಯದ ಸನ್ನಿವೇಶದಲ್ಲಿ ಅಧಿಕಾರದಾಹಿ ಪಕ್ಷಗಳು ಇಂತಹ ಅಪರಾಧಿಗಳನ್ನು ತೆರೆದ ಬಾಹುಗಳಿಂದ ಸ್ವಾಗತಿಸುತ್ತವೆ. ಈ ಅಪರಾಧಿಗಳು ಭಯ ಹಾಗೂ ದಬ್ಬಾಳಿಕೆಯ ಮೂಲಕ ಚುನಾವಣೆಗಳನ್ನು ತಮ್ಮ ಪರವಾಗಿ ನಡೆಸಿಕೊಂಡು ಅಧಿಕಾರದ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಾರೆ. ಜನವರಿ 5 ರಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶಹಾಜಹಾನ್ ಶೇಖ್ ಹಾಗೂ ಅವನ ಸಹಚರರಾದ ಶಿಬು ಹಜ್ರಾ ಮತ್ತು ಉತ್ತಮ ಸರ್ದಾರ್ ಅವರ ಮನೆಗಳ ಮೇಲೆ ದಾಳಿ ನಡೆಸಲು ವ್ಯವಸ್ಥೆ ಮಾಡಿಕೊಂಡಿದ್ದರು. ಆದರೆ ಇವರ ಗೂಂಡಾಗಳು ಅವರ ಮೇಲೆಯೇ ತಿರುಗಿ ಬಿದ್ದು ಅವರನ್ನು ಓಡಿಸಿದರು. ಸ್ಥಳೀಯ ಪೊಲೀಸರು ಶಹಾಜಹಾನ್ ಮತ್ತು ಇತರರಿಗೆ ಲುಕ್ ಔಟ್ ನೋಟಿಸ್ ಜಾರಿಗೊಳಿಸಿದರೂ ಅವರು ಬಂಧನದಿಂದ ತಪ್ಪಿಸಿಕೊಂಡರು. ಇದು ಅಲ್ಲಿಯ ಪೊಲೀಸರ ಕಾರ್ಯವೈಖರಿಗೆ ಸಾಕ್ಷಿ! ಸ್ವಲ್ಪ ಸಮಯದ ನಂತರ ಶಿಬು, ಉತ್ತಮ್ ಮತ್ತು ಇತರರನ್ನು ಬಂಧಿಸಲಾಯಿತಾದರೂ ಶಹಜಹಾನ್ 'ಪತ್ತೆಯಾಗಲಿಲ್ಲ' ಎಂದು ತಿಪ್ಪೆ ಸಾರಿಸಲಾಯಿತು.

ಆದರೆ ಶೋಷಿತ ಜನತೆಯ ಸಹನೆಗೂ ಒಂದು ಮಿತಿ ಇದೆ. ಆದ್ದರಿಂದ ಕಳೆದ ಫೆಬ್ರುವರಿ 5 ರಂದು, ಶಹಜಹಾನ್‌ನ ಕಡೆಯವರು ಆ ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಹೊಂದಲು ಗ್ರಾಮಸ್ಥರಿಗೆ ಬೆದರಿಕೆ ಹಾಕಲು ಹೊರಗಿನಿಂದ ಶಸ್ತ್ರಸಜ್ಜಿತ ಗೂಂಡಾಗಳನ್ನು ಕರೆತಂದಾಗ ಅಲ್ಲಿನ ಮಹಿಳೆಯರು ಸಿಡಿದೆದ್ದರು. ಅವರು ಗೂಂಡಾಗಳನ್ನು ಓಡಿಸಿ, ಸ್ಥಳೀಯ ಟಿಎಂಸಿ ನಾಯಕರ ಮೇಲೆ ಹರಿಹಾಯ್ದರು.ಅಂತಿಮವಾಗಿ, ಹೋರಾಟದ ಒತ್ತಡ ಹಾಗೂ ಹೆಚ್ಚುತ್ತಿರುವ ಜನರ ಸಿಟ್ಟಿನಿಂದಾಗಿ ಶಹಜಹಾನ್‌ನನ್ನು ಫೆಬ್ರುವರಿ 29ರಂದು ಬಂಧಿಸಿ ಟಿಎಂಸಿಯಿಂದ ಅಮಾನತು ಮಾಡಲಾಗಿದೆ.

ನಮ್ಮ ಪಕ್ಷ ಎಸ್‌ಯುಸಿಐ (ಸಿ), ಮೊದಲಿನಿಂದಲೂ ಈ ಹೋರಾಟನಿರತ ಜನರೊಂದಿಗೆ ನಿಂತಿದೆ. ಪಕ್ಷವು ಫೆಬ್ರುವರಿ 16 ಅನ್ನು ರಾಜ್ಯಾದ್ಯಂತ 'ಪ್ರತಿಭಟನಾ ದಿನ'ವಾಗಿ ಸಂಘಟಿಸಿತು. ಪಕ್ಷ ಹಾಗೂ ಮುಂದಳಗಳ ನಾಯಕರು ಹಲವು ಬಾರಿ ಸಂದೇಶ್‌ಖಾಲಿಗೆ ಭೇಟಿ ನೀಡಿ ಸಂತ್ರಸ್ತರೊಂದಿಗೆ ಮಾತುಕತೆ ನಡೆಸಿ ಧೈರ್ಯ ತುಂಬಿದ್ದಾರೆ. ■

# ಏಪ್ರಿಲ್ 24, 2024:

# ಎಸ್‌ಯುಸಿಐ(ಸಿ) ಪಕ್ಷದ 77ನೇ ಸಂಸ್ಥಾಪನಾ ದಿನ

ಪ್ರತಿವರ್ಷ ಏಪ್ರಿಲ್ 24, ಶ್ರಮಿಕ ಜನತೆಯಲ್ಲಿ ಸಮರೋತ್ಸಾಹವನ್ನು ತುಂಬುತ್ತಾ ಸಮಾಜವಾದದತ್ತ ಮುನ್ನಡೆಯುವ ಅವರ ಹೆಜ್ಜೆಗಳಿಗೆ ವೇಗೋತ್ಕರ್ಷ ನೀಡುತ್ತದೆ. ಈ ವರ್ಷವಂತೂ ಲೋಕಸಭಾ ಚುನಾವಣೆಯ ಕಾವು ತಾರಕದಲ್ಲಿ ಇದ್ದಂಥಾ ಸಂದರ್ಭ. ಬೆಂಗಳೂರು, ರಾಯಚೂರು, ಬಳ್ಳಾರಿ, ತುಮಕೂರು, ಚಿತ್ರದುರ್ಗ, ವಿಜಯಪುರ, ಕಲಬುರಗಿ, ಧಾರವಾಡ, ಮುಂತಾದೆಡೆ ಬಹಳ ಗೌರವಾದರಗಳಿಂದ ನಮ್ಮ ಪಕ್ಷದ ಸಂಸ್ಥಾಪಕರೂ, ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿಗಳೂ ಆದ ಕಾ. ಶಿವದಾಸ್ ಘೋಷ್‌ರವರಿಗೆ ಕೆಂಪು ನಮನ ಸಲ್ಲಿಸುತ್ತಾ, ಪಕ್ಷದ ಕೆಂಬಾವುಟವನ್ನು ಹಾರಿಸಿ ಈ ದಿನವನ್ನು ಯೋಗ್ಯ ರೀತಿಯಲ್ಲಿ ಆಚರಿಸಲಾಯಿತು.



ಬೆಂಗಳೂರು: ಮಾತನಾಡುತ್ತಿರುವವರು: ಕಾ. ಕೆ. ರಾಧಾಕೃಷ್ಣ, ವೇದಿಕೆಯಲ್ಲಿ: ಕಾ. ಕೆ. ಉಮಾ, ರಾಜ್ಯ ಕಾರ್ಯದರ್ಶಿ ಮತ್ತಿತರ ರಾಜ್ಯ ಸಮಿತಿ ಸದಸ್ಯರು

**28.04.24, ಬೆಂಗಳೂರು:**

ನಗರದ ಯುವಿಸಿಇ ಅಲುಮ್ನಿ ಹಾಲಿನಲ್ಲಿ ಸಂಘಟಿಸಲಾಗಿದ್ದ ಸಭೆಯ ಮುಖ್ಯ ಭಾಷಣಕಾರರಾಗಿ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣರವರು ಪಕ್ಷದ ಬೆಂಬಲಿಗರು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಅವರು ಸಂಕ್ಷಿಪ್ತವಾಗಿ ಮುಂದಿಡುತ್ತಾ, ಈ ಆಂದೋಳನದಲ್ಲಿದ್ದ ಎರಡು ಪ್ರಮುಖ ಪಂಥಗಳ ಬಗ್ಗೆ ವಿವರಿಸಿದರು. ಗಾಂಧೀಜಿ, ನೆಹರೂ, ಪಟೇಲ್ ಪ್ರತಿನಿಧಿಸಿದ ರಾಜಿಪರ ಪಂಥ ಒಂದೆಡೆಯಾದರೆ, ಮತ್ತೊಂದೆಡೆ ಇದ್ದದ್ದು, ಕ್ರಾಂತಿಕಾರಿಗಳಾಗಿದ್ದ ಭಗತ್ ಸಿಂಗ್, ನೇತಾಜಿ, ಚಂದ್ರಶೇಖರ ಆಜಾದ್ ಪ್ರತಿನಿಧಿಸಿದ ರಾಜಿರಹಿತ ಪಂಥ. ಗಾಂಧೀಜಿಯವರು ಸಾಮ್ರಾಜ್ಯಶಾಹಿ ಬ್ರಿಟಿಷರು ಮತ್ತು ರಾಜಸತ್ತೆಗಳೊಂದಿಗೆ ರಾಜಿ ಮಾಡಿಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು, ಅಹಿಂಸೆಯನ್ನು ಪ್ರತಿಪಾದಿಸುತ್ತಾ ಬ್ರಿಟಿಷ್ ಆಳ್ವಿಕರಿಗೆ ಪ್ರಿಯರಾದರು. ಹಾಗಾಗಿಯೇ ಅವರು, ಚಳುವಳಿಗಾರರು ಚೌರಿಚೌರಾದಲ್ಲಿ ಪೊಲೀಸರ ಮೇಲೆ ಹಿಂಸೆ ನಡೆಸಿದರು ಎಂಬ ಕಾರಣದಿಂದ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರು. ಅವರು ಪ್ರಾಮಾಣಿಕರಾಗಿದ್ದರು, ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದರು, ಕೊನೆಗೆ ಪ್ರಾಣದ ಬಲಿದಾನವನ್ನೂ ನೀಡಿದರು. ಆದರೆ, ವರ್ಗಪ್ರಜ್ಞೆ ಇಲ್ಲದಿದ್ದರಿಂದ, ಬಂಡವಾಳಶಾಹಿ ವರ್ಗದ ಚಿಂತನೆಯನ್ನು ಅಪ್ರಜ್ಞಾಪೂರ್ವಕವಾಗಿ ಅಪ್ಪಿಕೊಂಡಿದ್ದರಿಂದ ದೇಶೀಯ ಬಂಡವಾಳಶಾಹಿಗಳ ಪರ ವಹಿಸಿದರು. ಆದರೆ, ಇದಕ್ಕೆ ತದ್ವಿರುದ್ಧವಾಗಿ, ಬ್ರಿಟಿಷರಿಗೆ ಸಿಂಹಸಪ್ನರಾಗಿದ್ದ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ನೇತಾಜಿ, ಕೇವಲ ಬ್ರಿಟಿಷರಿಂದ ಮಾತ್ರವಲ್ಲ, ದೇಶೀಯ ಬಂಡವಾಳಿಗರಿಂದಲೂ ಸ್ವಾತಂತ್ರ್ಯವನ್ನು ಬಯಸಿದ್ದರು; ಅದಕ್ಕಾಗಿ ಸಮಾಜವಾದಿ ಕ್ರಾಂತಿಯ ಮಾರ್ಗ ಹಿಡಿದಿದ್ದರು, ಎಂದವರು ವಿಶ್ಲೇಷಿಸಿದರು.

ಆ ಸಂದರ್ಭದಲ್ಲಿ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷ ಎಂದು ಗುರುತಿಸಿಕೊಂಡಿದ್ದ, ಭಾರತ ಕಮ್ಯುನಿಸ್ಟ್ ಪಕ್ಷವು(ಅವಿಭಜಿತ ಸಿಪಿಐ) ಭಗತ್ ಸಿಂಗ್‌ರನ್ನು ತೀವ್ರವಾದಿ ಎಂದು ಹಾಗೂ ನೇತಾಜಿಯವರನ್ನು ಜಪಾನೀ ಏಜೆಂಟ್ ಅಂತಲೂ ಕರೆದಿದ್ದರು. ಅಲ್ಲದೇ, ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ಗಾಂಧೀಜಿಯವರು ಕರೆಕೊಟ್ಟ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಸಹ ಇವರು ಭಾಗವಹಿಸಿರಲಿಲ್ಲ. ಆಗ ಸಮಾಜವಾದಿ ಸೋವಿಯತ್ ಒಕ್ಕೂಟದ ಮಿತ್ರ ರಾಷ್ಟ್ರವಾಗಿದ್ದ ಬ್ರಿಟನ್ ಅನ್ನು ವಿರೋಧಿಸಿದರೆ, ಅದು ಸಮಾಜವಾದಕ್ಕೆ ದ್ರೋಹ ಬಗೆದಂತೆ ಎಂದು ತಪ್ಪರ್ಥ ಮಾಡಿಕೊಂಡಿದ್ದರು; ಅಂತರರಾಷ್ಟ್ರೀಯತಾವಾದ ಮತ್ತು ರಾಷ್ಟ್ರವಾದಗಳ ನಡುವಿನ ವ್ಯತ್ಯಾಸವನ್ನು ಅವರಿಗೆ ಅರಿಯಲು ಆಗಿರಲಿಲ್ಲ. ಹಾಗಾಗಿ, ಇಂಥಾ ಹಲವು ತಪ್ಪುಹೆಜ್ಜೆಗಳನ್ನು ಇಡುತ್ತಾ, ಸರಿದಾರಿಯಲ್ಲಿ ಹೋಗುವ ಯಾವುದೇ ಲಕ್ಷಣಗಳು ಇರದ ಸಿಪಿಐ ಅನ್ನು ಕಾ. ಶಿವದಾಸ್ ಘೋಷ್‌ರವರು, ನೈಜ ಕಮ್ಯುನಿಸ್ಟ್ ಪಕ್ಷ ಅಲ್ಲ ಎಂದು ತೀರ್ಮಾನಿಸಿ ನೈಜ ಕಮ್ಯುನಿಸ್ಟ್ ಪಕ್ಷವಾದ ಎಸ್‌ಯುಸಿಐ(ಸಿ) ಅನ್ನು 1948ರ ಏಪ್ರಿಲ್ 24 ರಂದು ಸ್ಥಾಪಿಸಿದರು ಎಂದು ಕಾ. ರಾಧಾಕೃಷ್ಣರವರು ಪಕ್ಷ ಹುಟ್ಟಿದ ಹಿನ್ನೆಲೆಯನ್ನು ಮುಂದಿಟ್ಟರು.

ಮುಂದುವರೆದು ಅವರು, ಇಂದು ಬಂಡವಾಳಶಾಹಿ ವ್ಯವಸ್ಥೆಯು ಮರಣಾವಸ್ಥೆಯಲ್ಲಿದೆ; ಅದನ್ನು ಉಳಿಸಿಕೊಳ್ಳಲು ಬಂಡವಾಳಗಾರರು ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆ, ಫ್ಯಾಸೀವಾದವನ್ನು ತರಲು ಹವಣಿಸುತ್ತಿದ್ದಾರೆ. ಇಂದು ಸಮಾಜವನ್ನು ಇದರಿಂದ ರಕ್ಷಿಸಬೇಕಾದರೆ, ಬಂಡವಾಳಶಾಹಿ ವ್ಯವಸ್ಥೆಗೇ ಕೊನೆ ಹಾಕಬೇಕಾಗುತ್ತದೆ. ಇದಕ್ಕಾಗಿ, ವರ್ಗಪ್ರಜ್ಞೆಯನ್ನು ಬೆಳೆಸಿಕೊಂಡು ಜನಹೋರಾಟವನ್ನು ಕಟ್ಟಬೇಕಿದೆ. ತನ್ಮೂಲಕ, ಪರ್ಯಾಯ ರಾಜಕೀಯ ಶಕ್ತಿಗೆ ಜನ್ಮ ನೀಡಿ ಸಮಾಜವಾದಿ ಸಮಾಜವನ್ನು ಸ್ಥಾಪಿಸಬೇಕಾಗಿದೆ. ಇದು ಇಂದಿನ ತುರ್ತು. ನಮ್ಮ ಪಕ್ಷಕ್ಕೆ ನಮ್ಮನ್ನು ಮತ್ತಷ್ಟು ಸಮರ್ಪಿಸಿಕೊಳ್ಳುವ ಮೂಲಕ, ಪಕ್ಷವನ್ನು ಇನ್ನಷ್ಟು ಬಲಿಷ್ಠವಾಗಿ ಕಟ್ಟುವ ಪ್ರತಿಜ್ಞೆಯನ್ನು ನಾವೆಲ್ಲರೂ ತೆಗೆದುಕೊಳ್ಳೋಣ ಎಂದು ಕರೆ ನೀಡಿದರು.

ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ ಉಮಾರವರು ಸಹ ಮಾತನಾಡಿದರು. ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿಗಳಾದ ಕಾಮ್ರೇಡ್ ಎಂ. ಎನ್. ಶ್ರೀರಾಮ್ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿಗಳಾದ ಕಾ. ವಿ.ಜ್ಞಾನಮೂರ್ತಿ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಕಾ. ವಿ.ಎನ್. ರಾಜಶೇಖರ್ ಉಪಸ್ಥಿತರಿದ್ದರು.

**ನಂಜನಗೂಡು, ಮೈಸೂರು:** ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಕಾಮ್ರೇಡ್ ಕೆ. ಉಮಾರವರು ನಮ್ಮ ಪಕ್ಷದ ಕಾರ್ಯಕರ್ತರು, ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು.

ಇತರೆಡೆಗಳಲ್ಲೂ ಪಕ್ಷದ ಚಿಂತನೆಗಳು ಮತ್ತು ಚುನಾವಣೆಯಲ್ಲಿ ಪಕ್ಷದ ಪಾತ್ರದ ಬಗ್ಗೆ ಚರ್ಚೆಗಳು ನಡೆದವು.



ವಾಡಿ: ಮಾತನಾಡುತ್ತಿರುವವರು: ಕಾ. ಕೆ. ಸೋಮಶೇಖರ್, ಎಸ್‌ಯುಸಿಐ(ಸಿ) ರಾಜ್ಯ ಸಮಿತಿ ಸದಸ್ಯರು



ನಂಜನಗೂಡು: ಮಾತನಾಡುತ್ತಿರುವವರು: ಕಾ. ಕೆ. ಉಮಾ

## ಮೇ ದಿನ ಚಿರಾಯುವಾಗಲಿ! ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ!!

(ಐತಿಹಾಸಿಕ 133 ನೇ ಮೇ ದಿನದ ವಾರ್ಷಿಕದ ಅಂಗವಾಗಿ ಕಾರ್ಮಿಕರ ಹಾಗೂ ಕಾರ್ಮಿಕವರ್ಗ ಹೋರಾಟದ ಐತಿಹಾಸಿಕ ಸಂಘರ್ಷಗಳು ಹಾಗೂ ಯಶಸ್ಸುಗಳನ್ನು ನೆನಪಿಸಿಕೊಳ್ಳುತ್ತಾ, ಮಹಾನ್ ಲೆನಿನ್‌ರ ಬರಹಗಳಿಂದ ಆಯ್ದ ಭಾಗವನ್ನು ನಿಮ್ಮ ಮುಂದಿರಿಸುತ್ತಿದ್ದೇವೆ.)

**ಕಾರ್ಮಿಕ ಸಂಗಾತಿಗಳೇ!**

ಮೇ ದಿನ ಸಮೀಪಿಸುತ್ತಿದೆ. ವಿಶ್ವದ ಎಲ್ಲಾ ಕಾರ್ಮಿಕರು ತಮ್ಮಲ್ಲಿ ವರ್ಗ ಪ್ರಜ್ಞೆಯ ಬದುಕು ಜಾಗೃತಗೊಂಡಿರುವುದನ್ನು; ಮಾನವನಿಂದ ಮಾನವನ ಮೇಲಿನ ಎಲ್ಲಾ ದಬ್ಬಾಳಿಕೆ ಮತ್ತು ಶೋಷಣೆಗಳ ವಿರುದ್ಧದ ಹೋರಾಟದಲ್ಲಿನ ತಮ್ಮ ಐಕಮತ್ಯವನ್ನು, ಕೋಟ್ಯಂತರ ಶ್ರಮಜೀವಿಗಳನ್ನು ಹಸಿವು, ಬಡತನ ಮತ್ತು ಅವಮಾನಗಳಿಂದ ಮುಕ್ತಗೊಳಿಸುವ ಹೋರಾಟವನ್ನು ಸಂಭ್ರಮದಿಂದ ಆಚರಿಸುವ ದಿನ ಇದು. ಈ ಮಹಾನ್ ಸಂಘರ್ಷದಲ್ಲಿ ಎರಡು ವಿಶ್ವಗಳು ಒಂದಕ್ಕೊಂದು ಮುಖಾಮುಖಿಯಾಗಿವೆ: ಬಂಡವಾಳಶಾಹಿಗಳ ವಿಶ್ವ ಹಾಗೂ ಕಾರ್ಮಿಕರ ವಿಶ್ವ; ಶೋಷಣೆ ಮತ್ತು ಗುಲಾಮಗಿರಿಯ ವಿಶ್ವ ಹಾಗೂ ಸೋದರತೆ ಮತ್ತು ಸ್ವಾತಂತ್ರ್ಯದ ವಿಶ್ವ.

ಒಂದೆಡೆ ಕೆಲವೇ ಕೆಲವು ಶ್ರೀಮಂತ ರಕ್ತ ಪಿಪಾಸುಗಳು ಕಾರ್ಖಾನೆ, ಮಿಲ್‌ಗಳು, ಯಂತ್ರ, ಉಪಕರಣಗಳನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಕೋಟ್ಯಂತರ ಎಕರೆ ಭೂಮಿ, ರಾಶಿರಾಶಿ ದುಡ್ಡನ್ನು ತಮ್ಮ ಖಾಸಗಿ ಆಸ್ತಿಯನ್ನಾಗಿ ಮಾಡಿಟ್ಟುಕೊಂಡಿದ್ದಾರೆ. ಸರ್ಕಾರ ಹಾಗೂ ಸೈನ್ಯವನ್ನು ತಮ್ಮ ಅಡಿಯಾಳುಗಳನ್ನಾಗಿಸಿ, ತಾವು ಕೂಡಿಟ್ಟುಕೊಂಡಿರುವ ಸಂಪತ್ತನ್ನು ಕಾಯುವ ಕಾವಲು ನಾಯಿಗಳನ್ನಾಗಿ ಮಾಡಿಕೊಂಡಿದ್ದಾರೆ.

ಇನ್ನೊಂದೆಡೆ ಮಿಲಿಯಾಂತರ ಆಸ್ತಿವಿಹೀನರು. ಶ್ರೀಮಂತರ ಅನುಮತಿ ಕೇಳಿ ಅವರಲ್ಲಿ ದುಡಿಯುವ ಅನಿವಾರ್ಯತೆ ಇವರಿಗೆ. ಇವರು ತಮ್ಮ ಶ್ರಮದಿಂದ ಇಡೀ ಸಂಪತ್ತನ್ನು ಸೃಷ್ಟಿಸುತ್ತಾರೆ, ಆದರೂ ಜೀವನಪರ್ಯಂತ ತುಂಡು ರೊಟ್ಟಿಗಾಗಿ ಅವರು ಸಂಘರ್ಷ ನಡೆಸಬೇಕು. ಭಿಕ್ಷೆ ಬೇಡುವಂತೆ ಕೆಲಸಕ್ಕಾಗಿ ಅಂಗಲಾಚಬೇಕು. ಬೆನ್ನು ಮುರಿಯುವಂತಹ ದುಡಿಮೆಯಲ್ಲಿ ತಮ್ಮ ದೇಹದ ಶಕ್ತಿ, ಆರೋಗ್ಯವನ್ನು ಹಿಂಡಿ ಹೀರಿ ಮಾಲಿಕರಿಗೆ ಒಪ್ಪಿಸಿ ಹಳ್ಳಿ ಜೋಪಡಿಗಳಲ್ಲಿ, ದೊಡ್ಡ ಪಟ್ಟಣಗಳ ನೆಲಮಾಳಿಗೆಗಳಲ್ಲಿ ಹಸಿದುಕೊಂಡಿರಬೇಕು.

ಆದರೆ ಇಂದು ಈ ಎಲ್ಲವನ್ನೂ ಕಳಕೊಂಡಿರುವ ಶ್ರಮಿಕರು ಶ್ರೀಮಂತರ ಹಾಗೂ ಶೋಷಕರ ವಿರುದ್ಧ ಯುದ್ಧ ಸಾರಿದ್ದಾರೆ. ಕೂಲಿ ಗುಲಾಮಗಿರಿ, ಬಡತನ ಮತ್ತು ನಿರ್ಗತಿಕತನಗಳಿಂದ ಬಿಡುಗಡೆಗೊಳಿಸಲು ಇಡೀ ವಿಶ್ವದ ಕಾರ್ಮಿಕರು ಹೋರಾಡುತ್ತಿದ್ದಾರೆ. ಎಲ್ಲಾ ಕಾರ್ಮಿಕರ ದುಡಿಮೆಯಿಂದ ಸೃಷ್ಟಿಸಲ್ಪಟ್ಟ ಸಂಪತ್ತು ಕೆಲವೇ ಕೆಲವು ಜನ ಶ್ರೀಮಂತರ ಕೈಸೇರದೆ ಎಲ್ಲಾ ಶ್ರಮಿಕರಿಗೆ ಸೇರುವಂತಹ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆಗಾಗಿ ಹೋರಾಡುತ್ತಿದ್ದಾರೆ. ಭೂಮಿ, ಕಾರ್ಖಾನೆಗಳು, ಮಿಲ್‌ಗಳು, ಯಂತ್ರಗಳು, ಇವೆಲ್ಲವನ್ನೂ ಸರ್ವ ದುಡಿಯುವ ಜನತೆಯ ಆಸ್ತಿಯನ್ನಾಗಿ ಮಾಡಲು ಬಯಸುತ್ತಾರೆ. ಶ್ರೀಮಂತ–ಬಡವ ಎಂಬ ತಾರತಮ್ಯಕ್ಕೆ ಅಂತ್ಯ ಹಾಡಿ, ಶ್ರಮದ ಪ್ರತಿಫಲ ದುಡಿಯುವವರ ಕೈಗೇ ಸೇರಬೇಕು, ಮಾನವ ಚಿಂತನೆಯ ಎಲ್ಲಾ ಸಾಧನೆಗಳು, ಕೆಲಸ ಮಾಡುವ ವಿಧಾನದಲ್ಲಿನ ಎಲ್ಲಾ ಸುಧಾರಣೆಗಳು, ಇವೆಲ್ಲಾ ಮಾನವನನ್ನು ಮತ್ತಷ್ಟು ದಮನಕ್ಕೆ ಒಳಪಡಿಸುವ ಸಾಧನೆಗಳಾಗದೇ ಶ್ರಮನಿರತ ಕಾರ್ಮಿಕನ ಪರಿಸ್ಥಿತಿ ಸುಧಾರಿಸುವಂತಿರಬೇಕು ಎಂದು ಇಚ್ಛಿಸುತ್ತಾರೆ.

ಬಂಡವಾಳದ ವಿರುದ್ಧದ ಶ್ರಮಿಕರ ಹೋರಾಟದಲ್ಲಿ ಎಲ್ಲಾ ದೇಶಗಳ ಕಾರ್ಮಿಕರು ಬಹಳವೇ ತ್ಯಾಗ–ಬಲಿದಾನಗಳನ್ನು ಪುಟ 11 ಕ್ಕೆ

## ಬಿಜೆಪಿಯ 'ಡಬ್ಬಲ್ ಇಂಜಿನ್' ಸರ್ಕಾರ:

# ನರಕಸದೃಶ ಆಳ್ವಿಕೆಯ ಅನಾವರಣ!

ಅಧಿಕಾರದ ಗದ್ದುಗೆಗೇರಿದ ಮೇಲೆ ಬಿಜೆಪಿಯು, ಒಂದು ಸಂಯುಕ್ತರಾಜ್ಯ ಸ್ವರೂಪದ ಬದಲು ಕೇಂದ್ರೀಕೃತ ಆಡಳಿತದ ಕಡೆಗೆ ವಾಲುತ್ತಿರುವುದು ಹೆಚ್ಚು ಗಮನಾರ್ಹವಾಗಿದೆ. ಆದ್ದರಿಂದಲೇ 'ಡಬ್ಬಲ್ ಇಂಜಿನ್ ಸರ್ಕಾರ' ಎನ್ನುವ ರೂಪಕವು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಸರಳವಾಗಿ ಹೇಳುವುದಾದರೆ, ಅವರ ಪ್ರಕಾರ ರಾಜ್ಯ ಮತ್ತು ಕೇಂದ್ರಗಳೆರಡರಲ್ಲೂ ಒಂದೇ ಸರ್ಕಾರ (ಅಂದರೆ ಬಿಜೆಪಿ) ಆಳ್ವಿಕೆ ನಡೆಸಿದರೆ, ಆಗ ಬಹಳ ತ್ವರಿತ ಗತಿಯಲ್ಲಿ ದೇಶದ ಅಭಿವೃದ್ಧಿಯಾಗುತ್ತದೆ. ಈ ವಿಚಾರದ ಮೂಲಕ ಬಿಜೆಪಿಯು, 'ಡಬ್ಬಲ್ ಇಂಜಿನ್ ಆಡಳಿತ'ದೊಂದಿಗೆ ಇಡೀ ದೇಶದಲ್ಲಿ ಸಮಗ್ರ ರಾಜಕೀಯ ಶಿಸ್ತನ್ನು ತರಬಹುದೆಂದು ಪ್ರಚಾರ ಮಾಡಲು ಪ್ರಯತ್ನಿಸುತ್ತಿದೆ. ಈ ಲೇಖನವು ಬಿಜೆಪಿಯ ಘೋಷಣೆ ಹಾಗೂ ಬಿಜೆಪಿ ಆಳ್ವಿಕೆಯೇ ಇರುವ ರಾಜ್ಯಗಳ ಕಟುವಾಸ್ತವಗಳನ್ನು ಹೋಲಿಸಿ ವಿಮರ್ಶಾತ್ಮಕವಾಗಿ ವಿಶ್ಲೇಷಣೆ ನೀಡುವ ಒಂದು ಪ್ರಯತ್ನ.

### ಮಹಿಳೆಯರ ಸುರಕ್ಷತೆ ಬಗ್ಗೆ ಮೋದಿಯವರ ಆಷಾಢಭೂತಿತನ!

ಸೂಕ್ಷ್ಮವಾಗಿ ಪರಿಶೀಲಿಸಿದರೆ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಪಟ್ಟಂತೆ ಘೋಷಣೆಗಳಿಗೂ ಮತ್ತು ಕಟುವಾಸ್ತವಕ್ಕೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗಲೇ ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ, ಎಲ್ಲಾ ನಾಗರಿಕರಿಗೂ ಅಭಿವೃದ್ಧಿ ಹಾಗೂ ಸುರಕ್ಷತೆಯ ಭರವಸೆ ನೀಡಿತು. ಆದರೆ ವಾಸ್ತವತೆಯು ಆರ್ಥಿಕ ದುಸ್ಥಿತಿ, ಏರುತ್ತಿರುವ ನಿರುದ್ಯೋಗ, ವ್ಯಾಪಕವಾಗುತ್ತಿರುವ ಮಹಿಳೆಯರ ಮೇಲಿನ ಅಪರಾಧಗಳ ಕರಾಳ ಚಿತ್ರಣವನ್ನು ಕೊಡುತ್ತದೆ. ಅತ್ಯಾಚಾರ, ಗುಂಪು ಅತ್ಯಾಚಾರ, ಕೌಟುಂಬಿಕ ಹಿಂಸೆ ಮತ್ತು ಹೆಣ್ಣುಮಕ್ಕಳ ಕಳ್ಳ ಸಾಗಾಣಿಕೆಗಳ ವರದಿಗಳು ಹೆಚ್ಚುತ್ತಲೇ ಇವೆ; ಅವುಗಳು 'ಮೋದಿ ಗ್ಯಾರಂಟಿ'ಯ ಪೊಳ್ಳುತನವನ್ನು ಬಯಲಿಗೆಳೆದಿವೆ.

### ಮಂತ್ರಕ್ಕಿಂತ ಉಗುಳೇ ಜಾಸ್ತಿ.....

ಕೇಂದ್ರ ಹಾಗೂ ರಾಜ್ಯಗಳೆರಡರಲ್ಲೂ ಬಿಜೆಪಿ ಅಧಿಕಾರದಲ್ಲಿದ್ದಾಗ, ಆ ರಾಜ್ಯಗಳಲ್ಲಿ ಮಹಿಳೆಯರ ಸ್ಥಿತಿಗತಿ ಏನೆಂದು ನೋಡಿದರೆ ಡಬ್ಬಲ್ ಇಂಜಿನ್ ಸರ್ಕಾರದ ಬಣ್ಣ ಸ್ಪಷ್ಟವಾಗಿ ಕಾಣುತ್ತದೆ. ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಮತ್ತು ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯುರೊ (ಎನ್‌ಸಿಆರ್‌ಬಿ) ಪ್ರಕಾರ, ದೇಶದೆಲ್ಲೆಡೆ ಮಹಿಳೆಯರ ಮೇಲಿನ ದೌರ್ಜನ್ಯಗಳು ವಿಪರೀತವಾಗಿ ಹೆಚ್ಚುತ್ತಿವೆ. ಈ ಅಂಕಿಅಂಶಗಳಿಂದ ಮೋದಿಯವರ 'ಬೇಟಿ ಬಚಾವೋ, ಬೇಟಿ ಪಡಾವೊ' ಘೋಷಣೆಯ ಪೊಳ್ಳುತನ ಬಟಾಬಯಲಾಗಿದೆ.

### ಉತ್ತರ ಪ್ರದೇಶ – ದೌರ್ಜನ್ಯಗಳ ನೆಲೆವೀಡು

ಉತ್ತರ ಪ್ರದೇಶವು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಇನ್ನೊಂದು ಹೆಸರಾಗಿದೆ. 2014 ರಲ್ಲಿ 'ಮಹಿಳೆಯರ ಮೇಲಿನ ದಾಳಿ ಸಾಕು. ಇದೀಗ ಮೋದಿ ಆಳ್ವಿಕೆಗೆ ಸಕಾಲ' ಮತ್ತು 'ಹೆಣ್ಣುಮಕ್ಕಳಿಗೆ ರಕ್ಷಣೆ, ಹೆಣ್ಣುಮಕ್ಕಳಿಗೆ ಶಿಕ್ಷಣ' ಎನ್ನುವ ಘೋಷಣೆಗಳನ್ನು ಎತ್ತುತ್ತಾ ಮೋದಿ ಪ್ರಧಾನ ಮಂತ್ರಿಯಾದರು. ಆದರೆ, ಎನ್‌ಸಿಆರ್‌ಬಿ ಬೇರೆಯೇ ಕಥೆ ಹೇಳುತ್ತದೆ. ಈ ವರದಿಯ ಪ್ರಕಾರ, ದೇಶದ 28 ರಾಜ್ಯಗಳಲ್ಲಿ, ಬಿಜೆಪಿ ಆಳ್ವಿಕೆಯ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಮೇಲಿನ ಅಪರಾಧಗಳು ದಾಖಲಾಗಿವೆ. 2019ರಲ್ಲಿ 3,065 ಅತ್ಯಾಚಾರ ಪ್ರಕರಣಗಳು ನಡೆದಿವೆ. ಅದೇ ವರ್ಷ 65,743 ಮಹಿಳೆಯರ ಮೇಲಿನ ಅಪರಾಧಗಳು ದಾಖಲಾಗಿವೆ. ಈ ರಾಜ್ಯ ಹೆಣ್ಣುಮಕ್ಕಳಿಗೆ ಅತ್ಯಂತ ಅಸುರಕ್ಷಿತ ಪ್ರದೇಶ. 2022ರಲ್ಲಿ ದೇಶದೆಲ್ಲೆಡೆ 1,07,000 ಕ್ಕೂ ಹೆಚ್ಚು ಹೆಣ್ಣುಮಕ್ಕಳ ಅಪಹರಣವಾಗಿದೆ. ಅದರಲ್ಲಿ ಉತ್ತರ ಪ್ರದೇಶವೇ ಮುಂದಿದ್ದು, 16,000 ಅಪಹರಣದ ಪ್ರಕರಣಗಳು ದಾಖಲಾಗಿರುವುದು ಅಲ್ಲಿಯೇ. ಎನ್‌ಸಿಆರ್‌ಬಿ ಪ್ರಕಾರ, 2022 ರಲ್ಲಿ 2,218 ವರದಕ್ಷಿಣೆ ಕೊಲೆಗಳಾಗಿವೆ; ಕೌಟುಂಬಿಕ ದೌರ್ಜನ್ಯದ ಪ್ರಕರಣಗಳು 20,371; 2022 ರಲ್ಲಿ ಗುಂಪು ಅತ್ಯಾಚಾರಕ್ಕೆ ಒಳಪಟ್ಟು ಕೊಲೆಯಾದವರು 62 ಮಹಿಳೆಯರು. ಇದೆಲ್ಲವೂ ದೇಶದಲ್ಲೇ ಅತಿ ಹೆಚ್ಚು.

**ಉನ್ನಾವೊ– ಅನ್ಯಾಯ, ದೌರ್ಜನ್ಯಗಳ ಕರ್ಮಕಾಂಡ:** ಉನ್ನಾವೊ ಅತ್ಯಾಚಾರ ಪ್ರಕರಣವು ಅಧಿಕಾರದ ದುರುಪಯೋಗ ಹಾಗೂ ಬಲಿಯಾದವರನ್ನು ವ್ಯವಸ್ಥಿತವಾಗಿ ನಿರ್ಲಕ್ಷಿಸುವುದಕ್ಕೆ ಕನ್ನಡಿ ಹಿಡಿದಂತಿದೆ. ನ್ಯಾಯಕ್ಕಾಗಿ ಎಷ್ಟೇ ಮೊರೆಯಿಟ್ಟರೂ ಕೂಡ ಬಲಿಯಾದವರ ಕುಟುಂಬಗಳು ಜೀವ ಬೆದರಿಕೆ ಎದುರಿಸಿದರೆ, ಪಾತಕಿಗಳಿಗೆ ದಂಡನೆಯಿಂದ ಅಭಯ (ಶಿಕ್ಷೆಯಿಂದ ಶ್ರೀರಕ್ಷೆ) ಸಿಕ್ಕಿತು. ಬೆದರಿಕೆ, ಕೈದು ಮತ್ತು ಅನುಮಾನಾಸ್ಪದ ಸಾವುಗಳ ಕರ್ಮಕಾಂಡವು ಕೊಳೆತ ವ್ಯವಸ್ಥೆಯ ಪ್ರತಿರೂಪಗಳಾಗಿವೆ.

**ಹತ್ರಾಸ್: ಜಾತಿ ಆಧಾರಿತ ಹಿಂಸೆಯ ಪ್ರಕರಣ:** ಹತ್ರಾಸ್ ದುರಂತವು ದಲಿತ ಮಹಿಳೆಯರು ಹೇಳಲಾಗದ ಹಿಂಸೆ ಹಾಗೂ ತಾರತಮ್ಯಗಳಿಗೆ ಸುಲಭದ ತುತ್ತಾಗುತ್ತಾರೆ ಎನ್ನುವುದನ್ನು ತೋರಿಸಿದೆ. ತರಾತುರಿಯಲ್ಲಿ ಶವ ದಹನ ಮಾಡುವುದರಿಂದ ಹಿಡಿದು ಮಾಹಿತಿಯನ್ನು ಮುಚ್ಚಿಡುವವರೆಗೂ ಪ್ರಕರಣವನ್ನು ಕೆಟ್ಟದಾಗಿ ನಿರ್ವಹಿಸಿದ ರೀತಿಯು ನ್ಯಾಯ ನೀಡುವಲ್ಲಿನ ವ್ಯವಸ್ಥಿತ ವಿಫಲತೆಯನ್ನು ತೋರಿಸುತ್ತದೆ.

### ಮಧ್ಯಪ್ರದೇಶ: ಭೀಕರ ಕಟು ವಾಸ್ತವ!

**ಹೃದಯಭಾಗದಲ್ಲಿ ಹಿಂಸೆಯ ಪ್ರತಿಧ್ವನಿಗಳು:** ಅಪಾಯದ ಗಂಟೆ ಬಾರಿಸುವ ಅಂಕಿಅಂಶಗಳು ತೋರಿಸುವಂತೆ, ಮಧ್ಯಪ್ರದೇಶದಲ್ಲಿ ಅತ್ಯಾಚಾರ ಹಾಗೂ ವರದಕ್ಷಿಣೆ ಸಾವುಗಳು ವಿಪರೀತವಾಗಿ ಉಲ್ಬಣಗೊಂಡಿವೆ; ಮಹಿಳೆಯರು ಸಾರ್ವಜನಿಕವಾಗಿ ಏಟು ತಿನ್ನುವುದರಿಂದ ಹಿಡಿದು ಗುಂಪು ಅತ್ಯಾಚಾರದವರೆಗೆ ವಿವಿಧ ರೀತಿಯ ಹಿಂಸೆಯನ್ನು ಎದುರಿಸುತ್ತಿರುವುದನ್ನು ಇಂಥಾ ಪ್ರಕರಣದ ಅಧ್ಯಯನಗಳು ಒತ್ತಿ ಹೇಳುತ್ತಿವೆ. ಇಲ್ಲಿ ಯಾವುದೇ ಕಾನೂನು ಕ್ರಮಗಳು ಜಾರಿಯಾಗದೆ ಇರುವುದು, ಮಹಿಳೆಯರ ರಕ್ಷಣೆ ಹಾಗೂ ಘನತೆಗೆ ಧಕ್ಕೆ ತರುತ್ತಿರುವ ವ್ಯವಸ್ಥಿತ ಕೊಳೆತಕ್ಕೆ ಸಾಕ್ಷಿಯಾಗಿದೆ.

2019 ರಲ್ಲಿ ಮಧ್ಯಪ್ರದೇಶದಲ್ಲಿ 2,485 ಅತ್ಯಾಚಾರದ ಪ್ರಕರಣಗಳು ಹಾಗೂ 3,550 ವರದಕ್ಷಿಣೆ ಸಾವುಗಳು ದಾಖಲಾಗಿವೆ. ಇದು ದೇಶದಲ್ಲಿ ಮಹಿಳೆಯರ ಮೇಲಿನ ಅಪರಾಧಗಳ ಪ್ರಕರಣಗಳಲ್ಲಿ ಮಧ್ಯಪ್ರದೇಶವನ್ನು ಮೂರನೇ ಸ್ಥಾನಕ್ಕೇರಿಸಿದೆ. ಸಂಸತ್ತಿಗೆ ನೀಡಿದ ಮಾಹಿತಿಯ ಪ್ರಕಾರ 2019 ರಿಂದ 2021 ರ ಮಧ್ಯೆ 1,60,180 ಮಹಿಳೆಯರು ಮತ್ತು 38,234 ಹೆಣ್ಣುಮಕ್ಕಳು ಕಾಣೆಯಾಗಿದ್ದಾರೆ. ಎನ್‌ಸಿಆರ್‌ಬಿ ನೀಡಿದ ಇತ್ತೀಚಿನ ಮಾಹಿತಿಯ ಪ್ರಕಾರ, 2022ರಲ್ಲಿ ಮಧ್ಯಪ್ರದೇಶದಲ್ಲಿ 3,046 ಮಹಿಳೆಯರು ಮತ್ತು ಹೆಣ್ಣುಮಕ್ಕಳು ಅತ್ಯಾಚಾರ ಹಾಗೂ ಗುಂಪು ಅತ್ಯಾಚಾರಕ್ಕೆ ಬಲಿಯಾಗಿದ್ದಾರೆ. ಮಧ್ಯಪ್ರದೇಶದಲ್ಲಿ ಮಕ್ಕಳ ಮೇಲಿನ ಅಪರಾಧ (ಐಪಿಸಿ 379) ಹಾಗೂ ಲೈಂಗಿಕ ದೌರ್ಜನ್ಯ (ಐಪಿಸಿ 354) ಕಾಯ್ದೆಗಳಡಿ ಮತ್ತು ಪೊಕ್ಸೊ ಕಾಯ್ದೆಯಡಿ ದಾಖಲಾಗುವ ಲೈಂಗಿಕ ಕಿರುಕುಳಗಳ ಪ್ರಕರಣಗಳು ವಿಪರೀತವಾಗಿ ಹೆಚ್ಚುತ್ತಿವೆ.

### ಗುಜರಾತ್: ಮಾದರಿ ರಾಜ್ಯದಿಂದ ಭೀತಿಯ ರಾಜ್ಯದ ಕಡೆಗೆ.....

**ನುಚ್ಚು ನೂರಾದ ಸುರಕ್ಷತೆಯ ಭ್ರಮೆ:** ಗುಜರಾತಿನಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅಪರಾಧಗಳ ಹೊಡೆತಕ್ಕೆ ಅದರ ಸುರಕ್ಷತೆಯ ಮುಖವಾಡವು ನುಚ್ಚುನೂರಾಗಿದೆ. ಅತ್ಯಾಚಾರ, ಗುಂಪು ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಗಳು ಮಹಿಳೆಯರು ಎದುರಿಸುತ್ತಿರುವ ಕಟುವಾಸ್ತವವನ್ನು ತೋರಿಸುತ್ತಾ, ಗುಜರಾತಿನ ಅಭಿವೃದ್ಧಿಯ ಇಮೇಜನ್ನೇ ಪ್ರಶ್ನಿಸುತ್ತಿವೆ. ಈ ದೌರ್ಜನ್ಯಗಳನ್ನು ತಡೆಯುವಲ್ಲಿ ಆದ ಅಧಿಕಾರಸ್ಥರ ವಿಫಲತೆಯು ವ್ಯವಸ್ಥೆಯ ವಿಫಲತೆಯನ್ನು ಎತ್ತಿ ತೋರಿಸುತ್ತದೆ.

ಗುಜರಾತಿನಲ್ಲಿ ಕಳೆದ 5 ವರ್ಷಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ನಿರಂತರವಾಗಿ ಏರುತ್ತಿವೆ; ಸರ್ಕಾರಿ ದಾಖಲೆಗಳ ಪ್ರಕಾರವೇ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಮತ್ತು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) 2,294 ದೂರುಗಳನ್ನು ಸ್ವೀಕರಿಸಿವೆ.

2023 ರ ಡಿಸೆಂಬರ್ 6 ರಂದು ರಾಜ್ಯ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, 2018–19 ರಲ್ಲಿ 77; 2019–20 ರಲ್ಲಿ 1,478; 2020–21 ರಲ್ಲಿ 42; 2021–22 ರಲ್ಲಿ 279; 2022–23 ರಲ್ಲಿ 418 ಮಕ್ಕಳಿಗೆ ಕಿರುಕುಳ ನೀಡಿದ ದೂರುಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದ್ದಾರೆ. ಒಟ್ಟಾರೆಯಾಗಿ 2018–19 ರಿಂದ 2022–23 ರ ವರೆಗಿನ 5 ವರ್ಷಗಳಲ್ಲಿ ದಾಖಲಾದ 2294 ದೂರುಗಳು ಐದು ಪಟ್ಟು ಹೆಚ್ಚಾಗಿವೆ. 2022–23 ರಲ್ಲಿ ಪ್ರತಿದಿನ ಸರಾಸರಿ 6 ಅತ್ಯಾಚಾರದ ಪ್ರಕರಣಗಳು ದಾಖಲಾಗಿವೆ. ಕಳೆದ 3 ವರ್ಷಗಳಲ್ಲಿ ಅಹಮದಾಬಾದಿನಲ್ಲಿ ಒಟ್ಟು 1,065 ಅತ್ಯಾಚಾರದ ಹಾಗೂ 16 ಗುಂಪು ಅತ್ಯಾಚಾರದ ಪ್ರಕರಣಗಳು ದಾಖಲಾಗಿವೆ. ವರ್ಷದಿಂದ ವರ್ಷಕ್ಕೆ ಹದಗೆಡುತ್ತಿರುವ ಪರಿಸ್ಥಿತಿಯು ಗುಜರಾತಿನಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನೆತ್ತಿದೆ. ಮಹಿಳೆಯರ ಮೇಲಿನ ಅಪರಾಧಗಳನ್ನು ತಡೆಯುವಲ್ಲಿ ಡಬ್ಬಲ್ ಇಂಜಿನ್ ಸರ್ಕಾರವು ಖಂಡಿತವಾಗಿಯೂ ಸಂಪೂರ್ಣವಾಗಿ ವಿಫಲವಾಗಿರುವ ಸಂಕೇತ ಇದು!

**'ಡಬಲ್ ಇಂಜಿನ್' ಸರ್ಕಾರದ ಆಳ್ವಿಕೆಯಲ್ಲಿ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು, ನಿರುದ್ಯೋಗ, ರಾಜಕೀಯದ ಪಾತಕೀಕರಣ, ಇವುಗಳು ವಿಪರೀತವಾಗಿ ಹೆಚ್ಚುತ್ತಿದ್ದು, 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' (ಎಲ್ಲರೊಡಗೂಡಿ, ಎಲ್ಲರ ಅಭಿವೃದ್ಧಿ) ಎಂಬುದೊಂದು ಪೊಳ್ಳು ಘೋಷಣೆ ಎನ್ನುವುದು ವಾಸ್ತವ.**

### ರಾಜಕೀಯ ಅಡ್ಡಪರಿಣಾಮಗಳು: ಕಥಾರೂಪಕಗಳ ಮರುವ್ಯಾಖ್ಯಾನ

ಬಿಜೆಪಿಯ ಡಬ್ಬಲ್ ಇಂಜಿನ್ ಆಳ್ವಿಕೆಯ ರಾಜಕೀಯ ಅಡ್ಡಪರಿಣಾಮಗಳು ಅಂಕಿಅಂಶಗಳ ವಿಶ್ಲೇಷಣೆ ಹಾಗೂ ಪ್ರಕರಣಗಳ ಅಧ್ಯಯನಗಳನ್ನು ಮೀರಿ ಹೋಗಿವೆ. ಅದು ನಾಗರಿಕರು ಹಾಗೂ ಅದರ ಚುನಾಯಿತ ಪ್ರತಿನಿಧಿಗಳ ನಡುವಿನ ವಿಶ್ವಾಸದ ಹೃದಯಭಾಗಕ್ಕೇ ಹೊಡೆತ ನೀಡಿದೆ. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಎದುರಿನಲ್ಲಿ ಬಿಜೆಪಿಯ ಅಭಿವೃದ್ಧಿ ಹಾಗೂ ಸುರಕ್ಷತೆಯ ದೊಡ್ಡ ದೊಡ್ಡ ಮಾತುಗಳು ಪೊಳ್ಳು ಎನ್ನುವುದು ಬಹಿರಂಗವಾಗಿವೆ. ಬಿಜೆಪಿಯ ಡಬ್ಬಲ್ ಇಂಜಿನ್ ಆಳ್ವಿಕೆಯ ರಾಜಕೀಯ ವೈಫಲ್ಯವು, ಲಿಂಗಾಧಾರಿತ ಹಿಂಸೆ ಹಾಗೂ ವ್ಯವಸ್ಥಿತ ಅನ್ಯಾಯಗಳ ಕ್ರೂರ ವಾಸ್ತವವನ್ನು ಬಯಲುಗೊಳಿಸಿದೆ. ಇಂಥಾ ಆಳ್ವಿಕರ ಬೂಟಾಟಿಕೆಯನ್ನು ಎದುರಿಸಲು ಹಾಗೂ ಅವರ ವಿಫಲತೆಗೆ ಹೊಣೆಗಾರಿಕೆಯನ್ನು ಆಗ್ರಹಿಸಲು ನಾವು ಸಜ್ಜಾಗಬೇಕಿದೆ.

### ವಿಶ್ವಾಸಘಾತುಕತನ ಮತ್ತು ಮಹಿಳಾ ಸುರಕ್ಷತೆಯಲ್ಲಿ ದ್ರೋಹ

**ದಂಡನೆಯಿಂದ ರಕ್ಷೆಯ ಸಂಸ್ಕೃತಿ:** ಉನ್ನಾವೊ ಮತ್ತು ಹತ್ರಾಸ್ ಪ್ರಕರಣಗಳು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ವ್ಯಾಪಕವಾಗಿರುವ ದಂಡನೆಯಿಂದ ರಕ್ಷೆಯ ಸಂಸ್ಕೃತಿಗೆ ಪ್ರತಿರೂಪಗಳಾಗಿವೆ. ಎರಡೂ ಸಂದರ್ಭಗಳಲ್ಲಿ ಬಲಾಢ್ಯರಾದ ಪಾತಕಿಗಳು ಹೊಣೆಗಾರಿಕೆಯಿಂದ ತಪ್ಪಿಸಿಕೊಂಡರು ಮತ್ತು ತಮ್ಮ ರಾಜಕೀಯ ಸಂಬಂಧಗಳ ಕಾರಣದಿಂದ ಭಯಭೀತಿ ಇಲ್ಲದವರಾದರು. ಬಹಳ ತ್ವರಿತಗತಿಯಲ್ಲಿ ಮತ್ತು ನಿಷ್ಪಕ್ಷಪಾತವಾಗಿ ನ್ಯಾಯ ಕೊಡುವುದರಲ್ಲಾಗುವ ವಿಫಲತೆಯು ಪುನರಾವರ್ತಿತ ಹಿಂಸೆಯನ್ನು ಹುಟ್ಟುಹಾಕುತ್ತದೆ; ಅಷ್ಟೇ ಅಲ್ಲದೆ ಸಾರ್ವಜನಿಕರಿಗೆ ಕಾನೂನಿನ ಮೇಲೆ ವಿಶ್ವಾಸ ಕಳೆದುಹೋಗುತ್ತದೆ. ಇವೆರಡೂ ಘಟನೆಗಳು ಖಂಡಿತವಾಗಿಯೂ ದಂಡನೆಯಿಂದ ರಕ್ಷೆಯ ಸಂಸ್ಕೃತಿಯನ್ನು ಸೂಚಿಸುತ್ತವೆ.

### ಹೋರಾಟದ ಧ್ವನಿಯ ಬಲವರ್ಧನೆ ಮತ್ತು ಬದಲಾವಣೆಗೆ ಆಗ್ರಹ

**ಅನ್ಯಾಯದ ವಿರುದ್ಧ ಬಂಡಾಯ:** ವಿಪತ್ಕಾಲದ ಸಂದರ್ಭ ಎದುರಾದಾಗ ಪ್ರತಿಭಟನೆ ಮತ್ತು ಪ್ರತಿರೋಧಗಳ ಧ್ವನಿ ಹೊರಹೊಮ್ಮುತ್ತದೆ. ಅದು ಹೊಣೆಗಾರಿಕೆಯನ್ನು ಮತ್ತು ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಆಗ್ರಹಿಸುತ್ತದೆ. ಸ್ವತಃ ನಾಗರಿಕ ಸಮಾಜದ ಸಂಸ್ಥೆಗಳು, ತಳಮಟ್ಟದ ಕಾರ್ಯಕರ್ತರು ಮತ್ತು ದೌರ್ಜನ್ಯಗಳಿಂದ ಬದುಕುಳಿದ ನಿರ್ಭಯರು ಮಹಿಳಾ ಹಕ್ಕುಗಳ ಚಾಂಪಿಯನ್‌ಗಳಾಗಿದ್ದಾರೆ. ಅವರು ಬೆದರಿಕೆ, ದಮನಗಳಿಗೆ ಹೆದರಿ ಮೌನವಾಗಿರಲು ನಿರಾಕರಿಸಿದ್ದಾರೆ. ಅವರ ದಿಟ್ಟತನ ಹಾಗೂ ಧೈರ್ಯಗಳು ಅನ್ಯಾಯದ ವಿರುದ್ಧ ನಡೆಯುವ ಹೋರಾಟದಲ್ಲಿ ದೀಪಸ್ತಂಭಗಳಾಗಿವೆ. ನಾಗರಿಕರಾಗಿ ನಾವು ಅನ್ಯಾಯದ ಎದುರಲ್ಲಿ ಮೂಕಪ್ರೇಕ್ಷಕರಾಗಿ ಉಳಿಯಲು ಸಾಧ್ಯವಿಲ್ಲ. ಅಧಿಕಾರಸ್ಥರಿಂದ ಹೊಣೆಗಾರಿಕೆಯನ್ನು ಆಗ್ರಹಿಸಲು ಜಾತಿ, ಧರ್ಮಗಳ ಭೇದಗಳನ್ನು ಮೀರಿ ನಾವು ಒಂದಾಗಬೇಕು. ಸಾಮೂಹಿಕ ಕಾರ್ಯಾಚರಣೆ, ಸಮರ್ಥವಾದ ಹಾಗೂ ಬೇರುಮಟ್ಟದ ಜನ ಸಂಘಟನೆಗಳ ಮೂಲಕ ಭದ್ರವಾಗಿ ತಳವೂರಿರುವ ದಮನಕಾರಿ ವ್ಯವಸ್ಥೆಗಳಿಗೆ ಸವಾಲು ಹಾಕಬೇಕು ಮತ್ತು ನ್ಯಾಯಬದ್ಧವಾದ, ಸರ್ವ ಸಮಾನತೆಯ ಸಮಾಜವನ್ನು ಕಟ್ಟಬೇಕು.

### ಬರಿ ಮಾತಲ್ಲ, ನಿಜವಾದ ಬದಲಾವಣೆಯತ್ತ.......

ಆದ್ದರಿಂದ, ಮೇಲಿನ ಸಂಗತಿಗಳು, ಡಬ್ಬಲ್ ಇಂಜಿನ್ ಸರ್ಕಾರ ಎನ್ನುವುದು, ಮನುಷ್ಯತ್ವವಿಲ್ಲದ ಬಂಡವಾಳಶಾಹಿ ಶೋಷಣಾ ಚಕ್ರವು ಮತ್ತಷ್ಟು ಉಗ್ರವಾಗಿ ಜನಗಳ ಮೇಲೆ ಹರಿಯಲು ರಾಜ್ಯ ಹಾಗೂ ಕೇಂದ್ರಗಳಲ್ಲಿ ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳಲು ಬಳಸಿಕೊಳ್ಳುವ ಒಂದು ನಯವಂಚನೆಯ ಘೋಷಣೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ನಾವು ಒಂದು ವಿಷಯವನ್ನು ಒಂದರೆಕ್ಷಣವೂ ಮರೆಯಬಾರದು. ಮಹಿಳೆಯರ ಮೇಲೆ ನಡೆಯುತ್ತಿರುವ ಎಲ್ಲಾ ಅಪರಾಧಗಳು ಹಾಗೂ ದೌರ್ಜನ್ಯಗಳು, ತನ್ನ ಕಾಲ ಮುಗಿದು ಕೊಳೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ಕೊಳಕಿನ ಒಂದು ಭಾಗ; ಬಂಡವಾಳಶಾಹಿ ವ್ಯವಸ್ಥೆಯು ಸಾಮಾಜಿಕ–ಸಾಂಸ್ಕೃತಿಕ ವಾತಾವರಣವನ್ನು ಕಲುಷಿತಗೊಳಿಸುತ್ತಿದೆ. ಮಾನವರಲ್ಲಿ ಮೃಗತ್ವವನ್ನು ತುಂಬುತ್ತಿದೆ; ಮಹಿಳೆಯರನ್ನು ಭೋಗದ ವಸ್ತುವನ್ನಾಗಿ ಮಾಡಿದೆ. ಹಾಗಾಗಿ, ಡಬ್ಬಲ್ ಇಂಜಿನ್ ಸರ್ಕಾರದಲ್ಲಿ ಆಳುವ ಪಕ್ಷಗಳೇ ಅಪರಾಧಗಳಿಗೆ ಕುಮ್ಮಕ್ಕು ಕೊಟ್ಟಿರುವುದರಿಂದ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಆದ್ದರಿಂದ ಆಳುವ ಬೂರ್ಜ್ವಾಜಿಯ ಅತ್ಯಂತ ನಿಷ್ಠಾವಂತ ರಾಜಕೀಯ ನಿರ್ವಾಹಕನಾದ ಬಿಜೆಪಿಯ ಪ್ರಚಾರಕ್ಕೆ ಸಂಕಷ್ಟದಲ್ಲಿರುವ ಜನತೆ ಬಲಿಯಾಗಬಾರದು. ■

## ಆವಿಷ್ಕಾರ, ಎಐಡಿಎಸ್‌ಓ, ಎಐಡಿವೈಓ, ಎಐಎಂಎಸ್‌ಎಸ್ ಸಂಘಟಿತ 13ನೇ 'ವಿಜಯಪುರ ಸಾಂಸ್ಕೃತಿಕ ಜನೋತ್ಸವ'

### "ಇಂದು ಸಮಾಜದಲ್ಲಿ ಮೂಲಭೂತ ಬದಲಾವಣೆ ತರಲು ಯುವಜನರಿಂದ ಮಾತ್ರ ಸಾಧ್ಯ"–ರೂಪ ಹಾಸನ



ಜನೋತ್ಸವ ಉದ್ಘಾಟನೆ: ಶ್ರೀಮತಿ ರೂಪ ಹಾಸನ ಅವರಿಂದ, ಅವರ ಎಡಕ್ಕೆ: ಡಾ. ಚೆನ್ನಪ್ಪ ಕಟ್ಟಿ ಮತ್ತು ಡಾ. ಎನ್. ಪ್ರಮೋದ್, ಬಲಕ್ಕೆ: ಕಾ. ಡಿ. ನಾಗಲಕ್ಷ್ಮಿ

"ಒಳಗೆ ಹಾಗೂ ಹೊರಗೆ ಅಕ್ಷರಶಃ ಬೇಯುವ ಸ್ಥಿತಿಯಲ್ಲಿ ನಾವು ಬಂದು ತಲುಪಿದ್ದೇವೆ. ಅದು ಹವಾಮಾನ ವೈಪರೀತ್ಯ, ಧಗೆ ಆಗಿರಬಹುದು, ಜೊತೆಗೆ ಲೋಕಸಭಾ ಚುನಾವಣೆಗೆ ಹಬ್ಬಿರುವಂತಹ ರಾಜಕೀಯ ಧೂರ್ತತೆಯ ಕಾವು, ಉರಿ ಇವು ಕೂಡ ಆಗಿರಬಹುದು. ಇದೆಲ್ಲಕ್ಕಿಂತ ಮುಖ್ಯವಾಗಿ ನಾವು ಮಾನವೀಯವಾದಂತಹ ಶಾಂತಿ, ಸೌಹಾರ್ದತೆಯ ವಾತಾವರಣ ಕಟ್ಟಲು ಆಗ್ತಿಲ್ಲ ಅನ್ನುವ ಪ್ರಜ್ಞಾವಂತ ಒಳಮನಸಿನ ತಳಮಳ, ಒದ್ದಾಟ, ಇದು ತುಂಬಾ ಪ್ರಮುಖವಾಗಿ ಈಗ ಕೆಲಸ ಮಾಡಬೇಕು" ಎಂದು ಖ್ಯಾತ ಲೇಖಕರು ಹಾಗೂ ಸಾಮಾಜಿಕ ಹೋರಾಟಗಾರರಾದ ಶ್ರೀಮತಿ ರೂಪ ಹಾಸನ ಅಭಿಪ್ರಾಯಪಟ್ಟರು. ಆವಿಷ್ಕಾರ, ಎಐಡಿಎಸ್‌ಓ, ಎಐಡಿವೈಓ ಹಾಗೂ ಎಐಎಂಎಸ್‌ಎಸ್ ಸಂಘಟನೆಗಳ ನೇತೃತ್ವದಲ್ಲಿ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆದ '13ನೇ ವಿಜಯಪುರ ಸಾಂಸ್ಕೃತಿಕ ಜನೋತ್ಸವ'ದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು.

ಅತಿಥಿಗಳಾಗಿ ಆಗಮಿಸಿದ್ದ ಕಥೆಗಾರರು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ನೂತನ ಅಧ್ಯಕ್ಷರಾದ ಡಾ. ಚೆನ್ನಪ್ಪ ಕಟ್ಟಿಯವರು ಮತ್ತು ಎಐಡಿಎಸ್‌ಓನ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಎನ್. ಪ್ರಮೋದ್ ಸಭೆಯನ್ನುದ್ದೇಶಿಸಿ ಮಾತನಾಡಿದರು

ರಂಗಮಂದಿರದ ಆವರಣದಲ್ಲಿಯ ಸೂಕ್ತಿ ಹಾಗೂ ಛಾಯಾಚಿತ್ರ ಪ್ರದರ್ಶನವನ್ನು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಕಾ. ಡಿ. ನಾಗಲಕ್ಷ್ಮಿ ಉದ್ಘಾಟಿಸಿದರು. ಪ್ರಾಸ್ತಾವಿಕವಾಗಿ ಆವಿಷ್ಕಾರದ ಮುಖಂಡರಾದ ಶ್ರೀ ಅಶೋಕ ದೇಸಾಯಿ ಮಾತನಾಡಿದರು. ಎಐಡಿವೈಓ ರಾಜ್ಯ ಕಾರ್ಯದರ್ಶಿಗಳಾದ ಕಾ. ಸಿದ್ಧಲಿಂಗ ಬಾಗೇವಾಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ನಂತರ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮಗಳಾದ ವಿಜಯಪುರದ ಅನೌಪಚಾರಿಕ ಶಿಕ್ಷಣ ಸಂಸ್ಥೆಯಿಂದ ಸಮೂಹ ಗಾಯನ, ಗೀತಾಂಜಲಿ ಆಂಗ್ಲ ಮಾಧ್ಯಮ ಪ್ರೌಢ ಶಾಲಾ ವಿದ್ಯಾರ್ಥಿನಿಯರಿಂದ ಸಮೂಹ ನೃತ್ಯ, ಕಲಾವಿದರಾದ ಸಿದ್ದಣ್ಣ ಬಿಜ್ಜರಗಿ ಅವರಿಂದ ತತ್ವ ಪದಗಳು, ವಿದೂಷಿ ಲಕ್ಷ್ಮೀ ತೇರದಾಳಮಠ ಅವರ ನಾಟ್ಯಕಲಾ ಡಾನ್ಸ್ ಕ್ಲಾಸ್‌ನವರಿಂದ ನೃತ್ಯ ರೂಪಕ, ಹಾಗೂ ಕಾವ್ಯ–ಕುಂಚ–ನೃತ್ಯ ಎಂಬ ವಿಶಿಷ್ಠ ಕಾರ್ಯಕ್ರಮದಲ್ಲಿ ಕ.ರಾ.ಅ.ಮ.ವಿ. ವಿಜಯಪುರದ ಸಂಗೀತ ಉಪನ್ಯಾಸಕರಾದ ಹರೀಶ ಹೆಗಡೆ ಮತ್ತು ತಂಡದವರಿಂದ ಕಾವ್ಯ, ಮಹಾಲ(ಐನಾಪುರ)ನ ಚಿತ್ರ ಕಲಾವಿದರಾದ ಪರಶುರಾಮ ಇಂಚಗೇರಿ ಹಾಗೂ ನಂದ್ಯಾಳ ಗ್ರಾಮದ ಚಿತ್ರ ಕಲಾವಿದರಾದ ಮಲ್ಲು ಹಡಪದ ಅವರಿಂದ ಕುಂಚ ಹಾಗೂ ಬಳ್ಳಾರಿಯ ಜಾನಪದ ಕಲಾವಿದರಾದ ತಿರುಮಲ ಡಿ. ಜಿ. ಮತ್ತು ವಿಜಯಪುರದ ಸ್ಮಿತಾ ರೂಡಗಿ ಅವರಿಂದ ನೃತ್ಯ ಕಾಯಕ್ರಮಗಳು ಜನರ ಮನ ಸೆಳೆದವು. ಚಾಮರಾಜನಗರದ ಶಾಂತಲಾ ಕಲಾವಿದರು ಪ್ರಸ್ತುತ ಪಡಿಸಿದ, ಹೆನ್ರಿಕ್ ಇಬ್ಸೆನ್‌ರ ನಾಟಕವನ್ನು ಆಧರಿಸಿ ಎಸ್. ಸುರೇಂದ್ರನಾಥ ಅವರು ರಚಿಸಿ, ನಿರ್ದೇಶಿಸಿರುವ ಜನ ಶತ್ರು ಎಂಬ ನಾಟಕವು ಪ್ರಸಕ್ತ ವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲಿತು.

#### 'ಸಾಮಾಜಿಕ ಬದಲಾವಣೆಯಲ್ಲಿ ಯುವಜನರ ಪಾತ್ರ' ಕುರಿತು ಚರ್ಚೆ

ಈ ಕುರಿತ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಶ್ರೀಮತಿ ರೂಪ ಹಾಸನ, "ಇಂದು ಸಮಾಜದಲ್ಲಿ ಮೂಲಭೂತ ಬದಲಾವಣೆ ತರಲು ಯುವಜನರಿಂದ ಮಾತ್ರ ಸಾಧ್ಯವಿದೆ. ಇಂದು ಎಲ್ಲಾ ಆಳ್ವಿಕರು ಹಾಗೂ ಅವರ ಪಕ್ಷಗಳು ಉಳ್ಳವರ ಸೇವೆ ಮಾಡುತ್ತಿವೆ. ಆದ್ದರಿಂದ ಜನರೇ ವಿರೋಧ ಪಕ್ಷವಾಗಿ ರೂಪುಗೊಳ್ಳಬೇಕು"ಎಂದು ಕರೆ ನೀಡಿದರು. ಪ್ರಾಸ್ತಾವಿಕವಾಗಿ ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷರಾದ ಕಾ.ಸುರೇಖಾ ಕಡಪಟ್ಟಿ ಮಾತನಾಡಿದರು. ಎಐಎಂಎಸ್‌ಎಸ್ ಸಹ ಸಂಚಾಲಕರಾದ ಕಾ. ಗೀತಾ ಎಚ್. ಅಧ್ಯಕ್ಷತೆ ವಹಿಸಿದ್ದರು.

ಸಾಹಿತಿಗಳಾದ ಸುಭಾಷ್ ಯಾದವಾಡ, ವಿ. ಎ. ಪಾಟೀಲ, ನಾದ ಗ್ರಾಮದ ಮೆಹಬೂಬ್ ಮುಲ್ಲಾ, ಕನ್ನೊಳ್ಳಿಯ ಶೋಭಾ ವಾಲಿಕಾರ್, ಪೂಜಾ ಹೊರಕೇರ್, ಸಿಂದಗಿಯ ಸುಜಾತಾ ಅಗ್ನಿ, ಮೇಘಾ ವಾಲಿಕಾರ, ಕೊಕಟನೂರಿನ ಪ್ರೀತಿ ಹರಿಜನ ಸೇರಿದಂತೆ ಹಲವಾರು ಜನ ಆಸಕ್ತರು ಚರ್ಚೆಯಲ್ಲಿ ಭಾಗವಹಿಸಿದ್ದರು.

## ರಾಯಚೂರು: ಹುತಾತ್ಮ ಭಗತ್ ಸಿಂಗ್ ನೆನಪಿನಲ್ಲಿ ಸಾಂಸ್ಕೃತಿಕ ಸಂಜೆ

### ಭಗತ್ ಸಿಂಗ್ ಆದರ್ಶಗಳು ಇಂದಿನ ಯುವಜನರಿಗೆ ಮಾದರಿಯಾಗಬೇಕು : ವೀರ ಹನುಮಾನ್



ಶ್ರೀ.ವೀರಹನುಮಾನ್‌ರವರಿಂದ ಉದ್ಘಾಟನಾ ಭಾಷಣ

ರಾಯಚೂರು ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ಎಐಡಿಎಸ್‌ಓ, ಎಐಡಿವೈಓ ಮತ್ತು ಎಐಎಂಎಸ್‌ಎಸ್ ಜಂಟಿಯಾಗಿ ಶಹೀದ್ ಭಗತ್ ಸಿಂಗ್ ಅವರ ಹುತಾತ್ಮ ದಿನದ ನೆನಪಿನಲ್ಲಿ, 01.04.2024 ರಂದು 'ಸಾಂಸ್ಕೃತಿಕ ಸಂಜೆ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದವು.

ಕಾರ್ಯಕ್ರಮವನ್ನು ಹಿರಿಯ ಸಾಹಿತಿಗಳಾದ ಶ್ರೀ.ವೀರ ಹನುಮಾನ್ ಅವರು ಉದ್ಘಾಟಿಸುತ್ತಾ, ಭಗತ್ ಸಿಂಗ್‌ರ ಕ್ರಾಂತಿಕಾರಿ ವ್ಯಕ್ತಿತ್ವನ್ನು ಸಭಿಕರ ಮುಂದೆ ಬಿಚ್ಚಿಟ್ಟರು. ಇಂದಿನ ಯುವ ಪೀಳಿಗೆ ಭಗತ್‌ಸಿಂಗ್‌ರ ವಿಚಾರಗಳನ್ನು ಅಧ್ಯಯನ ಮಾಡಿ ಅವರನ್ನು ಮಾದರಿಯಾಗಿ ತೆಗೆದುಕೊಳ್ಳಬೇಕು; ಆ ಮೂಲಕ ದೇಶದ ಜನರ ಸಮಸ್ಯೆಗಳ ವಿರುದ್ಧ ಹೋರಾಟ ಕಟ್ಟುವ ಅವಶ್ಯಕತೆ ಇದೆ. ಭಗತ್ ಸಿಂಗ್ ಜನಪ್ರಿಯಗೊಳಿಸಿದ "ಇಂಕ್ವಿಲಾಬ್ ಜಿಂದಾಬಾದ್" ಘೋಷಣೆಯೊಂದಿಗೆ ಜನ ಒಂದಾಗಬೇಕಾಗಿದೆ ಎಂದು ಕರೆಕೊಟ್ಟರು.

ಮುಖ್ಯ ಅತಿಥಿಯಾಗಿ ಆಗಮಿಸಿದ ನಿವೃತ್ತ ಅಧ್ಯಾಪಕರಾದ ಶ್ರೀ. ಬಿ.ಜಿ.ಹುಲಿ ಅವರು ಮಾತನಾಡಿ, ಅಂದು ಭಗತ್ ಸಿಂಗ್‌ರನ್ನು ಬ್ರಿಟಿಷರು ಕುತಂತ್ರದಿಂದ ಕೇವಲ 23ನೇ ವಯಸ್ಸಿಗೇ ಗಲ್ಲಿಗೇರಿಸಿದರು. ಇಂದು ಆಳ್ವಿಕರು ದೇಶಕ್ಕೆ ಅನ್ನ ನೀಡುವ ರೈತರು ಹಾಗೂ ದೇಶದ ಅಮೂಲ್ಯ ಆಸ್ತಿಗಳಾದ ಯುವಕರು ನೇಣಿಗೆ ಶರಣಾಗುವ ಪರಿಸ್ಥಿತಿಯನ್ನು ತಂದೊಡ್ಡಿದ್ದಾರೆ ಎಂದರು. "ಹುಟ್ಟಿದವರಿಗೆ ಹಬ್ಬ, ಸತ್ತವರಿಗೆ ತಿಥಿಯು, ನಿನಗಿಲ್ಲ ಎರಡರ ಇತಿಮಿತಿಯು. ಹುಟ್ಟಿದವನಲ್ಲ ನೀನು, ಸತ್ತವನೂ ಅಲ್ಲ. ನೀನು ಚಿರಂಜೀವಿ, ನೀನು ಚಿರಂಜೀವಿ" ಎಂದು ಭಗತ್ ಸಿಂಗ್‌ರನ್ನು ನೆನೆಯುತ್ತಾ ಪ್ರಗತಿಪರ ಸಾಹಿತಿ, ಶ್ರೀ. ದಿನಕರ ದೇಸಾಯಿ ಬರೆದ 'ಚಿರಂಜೀವಿ' ಕವಿತೆಯನ್ನು ವಾಚನ ಮಾಡಿದರು.

ಎಐಯುಟಿಯುಸಿ ಜಿಲ್ಲಾ ಉಪಾಧ್ಯಕ್ಷರಾದ ಮಹೇಶ್ ಚೀಕಲಪರವಿ, ಪ್ರಾಸ್ತಾವಿಕವಾಗಿ ಎಐಡಿವೈಓ ಜಿಲ್ಲಾಧ್ಯಕ್ಷರಾದ ಚನ್ನಬಸವ ಜಾನೇಕಲ್ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಐಡಿಎಸ್‌ಓ ಜಿಲ್ಲಾಧ್ಯಕ್ಷರಾದ ಹಯ್ಯಾಳಪ್ಪ ವಹಿಸಿದ್ದರು. ಎಐಎಂಎಸ್‌ಎಸ್ ಜಿಲ್ಲಾ ಸಂಘಟಕರಾದ ಸರೋಜಾ ಗೋನವಾರ ನಿರ್ವಹಿಸಿದರು.

#### ಸಾಂಸ್ಕೃತಿಕ ಕಾರ್ಯಕ್ರಮಗಳು

ಸಿಗ್ನೇಚರ್ ಡ್ಯಾನ್ಸ್ ಸ್ಟುಡಿಯೋ ಪ್ರಸ್ತುತ ಪಡಿಸಿದ ಬಿ. ಶ್ರೀನಿವಾಸ್ ರಚಿಸಿ–ನಿರ್ದೇಶನ ಮಾಡಿದ "ಕ್ರಾಂತಿಯ ಕಿಡಿ ಭಗತ್ ಸಿಂಗ್" ಎಂಬ ಕಿರು ನಾಟಕ, ಶ್ರೀಮತಿ ಪಲ್ಲವಿ ಎಸ್. ಜಿ, ಸುಮಂತ್, ಬೃಂದಾ ಮತ್ತು ತಂಡದಿಂದ ಪ್ರಗತಿಪರ ಗೀತೆಗಳು, ಪ್ರಭಾ ಕುಲಕರ್ಣಿ ನೇತೃತ್ವದಲ್ಲಿ ಕೋಟೆ ಬಡಾವಣೆಯ "ಮಕ್ಕಳ ಮಂಟಪ" ತಂಡದಿಂದ "ಜಂಬದ ಕೋಳಿ" ನೃತ್ಯ ರೂಪಕ, ಸರೋಜಾ ಗೋನವಾರ ರೂಪಿಸಿದ, ಸಿಯಾತಾಲಾಬ್ ಮಕ್ಕಳಿಂದ ಪಂಡಿತ ತಾರಾನಾಥ ಸಂಸ್ಕೃತ ವೇದಿಕೆ(ರಿ) ನೇತೃತ್ವದ ಕೋಲಾಟ, ಅದ್ವೈತ್, ಚಿತ್ರಕಲಾವಿದರಾದ ಗೋವಿಂದ್. ಸಿ, ಸಿಗ್ನೇಚರ್ ಡ್ಯಾನ್ಸ್ ಸ್ಟುಡಿಯೋದಿಂದ "ಗಾಯನ –ಕುಂಚ– ನೃತ್ಯ", ಪ್ರಸ್ತುತಗೊಂಡವು. ಇವರಿಗೆ ವೀರೇಂದ್ರ ಕುರ್ಡಿ ಕ್ಯಾಶಿಯೋ, ಚಂದ್ರು ತಬಲಾ ಸಾತ್ ನೀಡಿದರು.

## ಮೇ ದಿನ ಚಿರಾಯುವಾಗಲಿ!

ಪುಟ 9 ರಿಂದ

ಮಾಡಿದ್ದಾರೆ. ಉತ್ತಮ ಬದುಕಿನ ಹಕ್ಕಿಗಾಗಿ, ನೈಜ ಸ್ವಾತಂತ್ರ್ಯಕ್ಕಾಗಿ ರಕ್ತದ ಹೊಳೆಹರಿಸಿದ್ದಾರೆ. ಕಾರ್ಮಿಕರ ಪರವಾಗಿ ಹೋರಾಡುವವರನ್ನು ಸರ್ಕಾರಗಳು ಹೇಳಲಾಗದ ಕಿರುಕುಳಕ್ಕೆ ಗುರಿಪಡಿಸುತ್ತವೆ. ಆದರೆ ಎಲ್ಲಾ ಕಿರುಕುಳಗಳ ನಡುವೆಯೂ ವಿಶ್ವದ ಕಾರ್ಮಿಕರ ಒಗ್ಗಟ್ಟು ಬೆಳೆಯುತ್ತಿದೆ ಮತ್ತು ಬಲಿಷ್ಠಗೊಳ್ಳುತ್ತಿದೆ. ಸಮಾಜವಾದಿ ಪಕ್ಷಗಳಲ್ಲಿ ಕಾರ್ಮಿಕರು ಹೆಚ್ಚೆಚ್ಚು ಒಗ್ಗೂಡುತ್ತಿದ್ದಾರೆ. ಆ ಪಕ್ಷಗಳ ಬೆಂಬಲಿಗರ ಸಂಖ್ಯೆ ಲಕ್ಷಗಳಲ್ಲಿ ಏರುತ್ತಿದೆ ಮತ್ತು ಬಂಡವಾಳಶಾಹಿ ಶೋಷಕ ವರ್ಗದ ವಿರುದ್ಧ ಸಂಪೂರ್ಣ ವಿಜಯದ ಕಡೆಗೆ ಹಂತ ಹಂತವಾಗಿ ಕಾರ್ಮಿಕರು ಸ್ಥಿರವಾಗಿ ಮುನ್ನಡೆಯುತ್ತಿದ್ದಾರೆ.

ಕಾರ್ಮಿಕ ಸಂಗಾತಿಗಳೇ! ನಮ್ಮ ಮುಂದಿರುವ ನಿರ್ಣಾಯಕ ಯುದ್ಧಕ್ಕೆ ನಾವು ದುಪ್ಪಟ್ಟು ಶಕ್ತಿಯೊಂದಿಗೆ ಸಿದ್ಧರಾಗೋಣ! ಹಿಂದೆಂದಿಗಿಂತಲೂ ಬಲವಾಗಿ ಸೋಷಲ್–ಡೆಮಾಕ್ರೆಟಿಕ್ ಕಾರ್ಮಿಕರ ಒಗ್ಗಟ್ಟನ್ನು ಬಲಪಡಿಸೋಣ! ಅವರ ಸಂದೇಶ ಎಲ್ಲಾ ಸೀಮೆಗಳ ದಾಟಿ ಹರಡಲಿ! ಕಾರ್ಮಿಕರ ಬೇಡಿಕೆಗಳಿಗಾಗಿ ನಡೆಯುತ್ತಿರುವ ಆಂದೋಲನ ದಿಟ್ಟತನದಿಂದ ಸಾಗಲಿ! ಮೇ ದಿನದ ಸಂಭ್ರಮಾಚರಣೆಯು ನಮ್ಮ ಉದ್ದೇಶ ಸಾಧನೆಗಾಗಿ ಸಾವಿರಾರು ಹೊಸ ಹೋರಾಟಗಾರರನ್ನು ನಮ್ಮತ್ತ ಸೆಳೆಯಲಿ ಮತ್ತು ಎಲ್ಲಾ ಜನರ ಸ್ವಾತಂತ್ರ್ಯಕ್ಕಾಗಿ, ಬಂಡವಾಳದ ನೊಗದಲ್ಲಿ ನಲುಗುತ್ತಿರುವ ಶ್ರಮಿಕರೆಲ್ಲರ ವಿಮುಕ್ತಿಗಾಗಿಯ ಮಹಾನ್ ಹೋರಾಟದಲ್ಲಿ ನಮ್ಮ ಪಡೆಗಳನ್ನು ಹೆಚ್ಚಿಸಲಿ!

**ದಿನಕ್ಕೆ ಎಂಟು ಗಂಟೆ ಕೆಲಸದ ಬೇಡಿಕೆ ಈಡೇರಲಿ!**

**ಕಾರ್ಮಿಕವರ್ಗದ ಅಂತರರಾಷ್ಟ್ರೀಯ ಕ್ರಾಂತಿಕಾರಿ ಸೋಷಲ್–ಡೆಮಾಕ್ರೆಸಿ ಚಿರಾಯುವಾಗಲಿ!**

**ಕ್ರೂರ, ಲೂಟಿಕೋರ ಜ಼ಾರ್‌ನ ನಿರಂಕುಶಪ್ರಭುತ್ವ ಕೊನೆಯಾಗಲಿ!** (ಸಮಗ್ರ ಕೃತಿಗಳು–ಸಂಚಿಕೆ 7)

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ನೇಹಾ ಹತ್ಯೆ ಪ್ರಕರಣ- ಪಾತಕಿಗೆ ನಿದರ್ಶನೀಯ ಶಿಕ್ಷೆ ನೀಡಿ! –ಎಸ್‌ಯುಸಿಐ(ಸಿ) ಆಗ್ರಹ




ಕಲಬುರಗಿ: ನೇಹಾಳ ಕೊಂದ ಪಾತಕಿಗೆ ಶಿಕ್ಷೆ ಆಗ್ರಹಿಸಿ ಎಐಡಿಎಸ್‌ಓ ಪ್ರತಿಭಟನೆ

ಹುಬ್ಬಳ್ಳಿಯ ನೇಹಾ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ.ಉಮಾ ಈ ಕೆಳಗಿನ ಹೇಳಿಕೆ ನೀಡಿದ್ದಾರೆ.

ಹುಬ್ಬಳ್ಳಿಯ ನೇಹಾ ಹಿರೇಮಠ ಹತ್ಯೆಯು ಅತ್ಯಂತ ಹೇಯ ಘಟನೆಯಾಗಿದ್ದು, ಇದರ ಪಾತಕಿಗೆ ಕಾನೂನಿನ ಪ್ರಕಾರ ಕಠಿಣ ಶಿಕ್ಷೆ ವಿಧಿಸಬೇಕೆಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಆಗ್ರಹಿಸುತ್ತದೆ.

ಇದೇ ಸಂದರ್ಭದಲ್ಲಿ, ಈ ಪ್ರಕರಣಕ್ಕೆ ಕೋಮು ಮತ್ತು ಚುನಾವಣಾ ರಾಜಕೀಯದ ಬಣ್ಣವನ್ನು ನೀಡುತ್ತಿರುವ ವಿದ್ಯಮಾನವನ್ನು ಕೂಡ ಎಸ್‌ಯುಸಿಐ(ಸಿ) ತೀವ್ರವಾಗಿ ಖಂಡಿಸುತ್ತದೆ. ರಾಜ್ಯದಲ್ಲಿ ಭಿನ್ನಮತ ಮತ್ತು ನಾಯಕತ್ವದ ಬಿಕ್ಕಟ್ಟಿನಲ್ಲಿರುವ ಬಿಜೆಪಿ ಪಕ್ಷಕ್ಕೆ ಜನರ ಮುಂದೆ ಪರಿಣಾಮಕಾರಿಯಾಗಿ ಹೇಳಿಕೊಳ್ಳುವ ವಿಷಯವೇನೂ ಇಲ್ಲದೆ ಸಪ್ಪಗಾಗಿತ್ತು. ಇಂತಹ ಸಂದರ್ಭದಲ್ಲಿ ನಡೆದ ಈ ದುರ್ಘಟನೆಯನ್ನು ಬಿಜೆಪಿಯು ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ. ಇದನ್ನು ಚುನಾವಣಾ ಆಯೋಗವು ಗಂಭೀರವಾಗಿ ಪರಿಗಣಿಸಿ, ಈ ವಿವಾದ ಕೋಮು ದಳ್ಳುರಿಗೆ ದಾರಿ ಮಾಡದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಾವು ಒತ್ತಾಯಿಸುತ್ತೇವೆ.

ಸಮಾಜದಲ್ಲಿ ಒಟ್ಟಾರೆಯಾಗಿ ಪ್ರಧಾನವಾಗಿರುವ ಸ್ವಕೇಂದ್ರಿತ ಮನಸ್ಸು, ಪುರುಷಾಧಿಕಾರದ ಅಹಂ, ಸಮೂಹ ಮಾಧ್ಯಮಗಳಲ್ಲಿನ ಹಿಂಸೆಯ ವೈಭವೀಕರಣ ಜೊತೆಗೆ, ಸಾಮಾಜಿಕ ನೈತಿಕ ಅಧಃಪತನಗಳಿಂದ ಇಂತಹ ದುರಂತಗಳು ಸಂಭವಿಸುತ್ತಿದ್ದು, ಘಟನೆ ನಡೆದಾಗ ಪ್ರತಿಕ್ರಿಯಿಸುವುದು ಮಾತ್ರವಲ್ಲದೆ, ಇವುಗಳ ನಿಯಂತ್ರಣಕ್ಕೆ ಆಳುವ ಸರ್ಕಾರಗಳು ಮತ್ತು ಸಮಾಜ ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಸ್‌ಯುಸಿಐ(ಸಿ) ಮನವಿ ಮಾಡುತ್ತದೆ. ■




ಬಳ್ಳಾರಿ: ಹುಬ್ಬಳ್ಳಿಯ ಬಿವಿಬಿ ಕಾಲೇಜಿನ ವಿದ್ಯಾರ್ಥಿನಿ ನೇಹಾ ಹಿರೇಮಠ್, ಮೈಸೂರಿನ ರುಕ್ಸಾನಾ, ಹೀಗೆ ರಾಜ್ಯಾದ್ಯಂತ ಹೆಚ್ಚುತ್ತಿರುವ ಹೆಣ್ಣುಮಕ್ಕಳ ಕೊಲೆಗಳನ್ನು ಖಂಡಿಸಿ ಮತ್ತು ಈ ಕೊಲೆ ಪಾತಕಿಗಳಿಗೆ ನಿದರ್ಶನೀಯ ಶಿಕ್ಷೆ ಆಗ್ರಹಿಸಿ ಎಐಎಂಎಸ್‌ಎಸ್ ಪ್ರತಿಭಟನೆ

## ಹಾಸನದ ಪೆನ್ ಡ್ರೈವ್ ಪ್ರಕರಣ:

## ಎಐಎಂಎಸ್‌ಎಸ್ ಉಗ್ರ ಖಂಡನೆ! ಸಂತ್ರಸ್ತರಿಗೆ ತುರ್ತು ರಕ್ಷಣೆಗಾಗಿ ಆಗ್ರಹ!




ವಿಜಯಪುರ: ಎಐಎಂಎಸ್‌ಎಸ್ ಸಂಘಟಿತ ಪ್ರತಿಭಟನೆ

ಹಾಸನದ ಪೆನ್ ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿಗಳಾದ ಕಾ. ಎಸ್.ಶೋಭಾ ನೀಡಿರುವ ಪತ್ರಿಕಾ ಹೇಳಿಕೆ:

ಹಾಸನದಲ್ಲಿ ಖ್ಯಾತ ಪ್ರಭಾವಿ ರಾಜಕಾರಣಿಯ ಕುಟುಂಬದ ಸದಸ್ಯರು ಸಾವಿರಾರು ಹೆಣ್ಣು ಮಕ್ಕಳನ್ನು ಕಾಮಕಾಂಡದಲ್ಲಿ ತೊಡಗಿಸಿರುವ ಪೆನ್ ಡ್ರೈವ್‌ಗಳನ್ನು ಹಾಸನದ ಹಾದಿ ಬೀದಿಗಳಲ್ಲಿ ಚೆಲ್ಲಲಾಗಿದೆ ಎನ್ನಲಾದ ಆಘಾತಕಾರಿ ಸಂಗತಿಯು ವಿವಿಧ ಮೂಲಗಳಿಂದ ತಿಳಿದು ಬಂದು ಇಡೀ ರಾಜ್ಯದಲ್ಲೇ ತಲ್ಲಣ ಉಂಟು ಮಾಡಿದೆ. ಈ ಘಟನೆಯ ಕುರಿತು ರಾಜ್ಯ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕು, ಈ ಭೀಕರ ಲೈಂಗಿಕ ದೌರ್ಜನ್ಯದಲ್ಲಿ ತೊಡಗಿದ ವ್ಯಕ್ತಿಗಳು ಮತ್ತು ಪೆನ್ ಡ್ರೈವ್‌ಗಳ ಮೂಲಕ ಸಂತ್ರಸ್ತೆಯರ ಗುರುತನ್ನು ಬಯಲುಗೊಳಿಸಿದವರು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರನ್ನು ಈ ಕೂಡಲೇ ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ರಾಜ್ಯ ಸಮಿತಿಯು ಆಗ್ರಹಿಸುತ್ತದೆ.

ಇದೇ ವೇಳೆಯಲ್ಲಿ ಈ ಅಮಾನುಷ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗಿ ಸಂತ್ರಸ್ತರಾದ ನೂರಾರು ಹೆಣ್ಣುಮಕ್ಕಳಿಗೆ ರಕ್ಷಣೆ ಹಾಗೂ ಆರೈಕೆ ತೀವ್ರ ಜರೂರಾಗಿದೆ. ಕೆಲವು ಹೆಣ್ಣು ಮಕ್ಕಳು ಆತ್ಮಹತ್ಯೆಯಂತಹ ಘೋರ ಮಾರ್ಗ ಹಿಡಿಯುವಂತಹ ವರದಿಗಳು ಬಂದಿವೆ. ಸರ್ಕಾರವು ಕೂಡಲೇ ಈ ಸಂತ್ರಸ್ತ ಮಹಿಳೆಯರಿಗೆ ರಕ್ಷಣೆ, ಪರಿಹಾರ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸಬೇಕೆಂದು ಎಐಎಂಎಸ್‌ಎಸ್ ಕರ್ನಾಟಕ ರಾಜ್ಯ ಸಮಿತಿಯು ಸರ್ಕಾರಕ್ಕೆ ಆಗ್ರಹಿಸುತ್ತದೆ. ■



29.04.2024, ಹಾಸನದ ಪ್ರಭಾವಿ ರಾಜಕಾರಣಿಯ ಕುಟುಂಬದ ಸದಸ್ಯರು ಎಸಗಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯದ ಬಗ್ಗೆ ತುರ್ತಾಗಿ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಹಾಸನದ ಜನಪರ ಚಳುವಳಿಗಳ ಒಕ್ಕೂಟದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಕಾ. ಶೋಭಾ ಎಸ್., ಮಾಧ್ಯಮದವರೊಂದಿಗೆ ಮಾತನಾಡುತ್ತಿರುವುದು

### ಪಿಯು ಮಂಡಳಿ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡುವೆ ತೀವ್ರ ಸಮನ್ವಯದ ಕೊರತೆ! 3.5 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ

## ತಪ್ಪಿತಸ್ಥರಿಗೆ ನಿದರ್ಶನೀಯ ಶಿಕ್ಷೆ ವಿಧಿಸಿ–ಎಐಡಿಎಸ್‌ಓ ಒತ್ತಾಯ

ರಾಜ್ಯದಲ್ಲಿ ಇತ್ತೀಚೆಗೆ ಕೊನೆಗೊಂಡ ಸಿಇಟಿ ಪರೀಕ್ಷೆಯಲ್ಲಿನ ಗೊಂದಲದ ಕುರಿತು ಎಐಡಿಎಸ್‌ಓ ನೀಡಿರುವ ಪತ್ರಿಕಾ ಹೇಳಿಕೆ:

ಏಪ್ರಿಲ್ 18 ಹಾಗೂ 19 ರಂದು ಜರುಗಿದ ಸಿಇಟಿ ಪರೀಕ್ಷೆಯಲ್ಲಿ ದಾಖಲೆ ಸಂಖ್ಯೆಯಲ್ಲಿ ಭಾಗವಹಿಸಿದ 3,49,637 ವಿದ್ಯಾರ್ಥಿಗಳು ತೀವ್ರ ಆತಂಕದಲ್ಲಿದ್ದಾರೆ. ಈ ಬಾರಿಯ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ ಒಳಗೊಂಡಂತೆ ಸುಮಾರು 59 ಅಂಕಗಳಿಗೆ ಸಮನಾದ, ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳು ಪ್ರಶ್ನೆ ಪತ್ರಿಕೆಯಲ್ಲಿ ಬಂದಿವೆ. ಪಿಯು ಮಂಡಳಿ ನೀಡಿದ, ಪುನರಾವರ್ತಿತ ಪಠ್ಯಕ್ರಮವನ್ನು ಕಾಲೇಜುಗಳಲ್ಲಿ ಬೋಧಿಸಲಾಗಿದ್ದು, ವಿದ್ಯಾರ್ಥಿಗಳು ಆ ಪ್ರಶ್ನೆಗಳಿಗೆ ತಯಾರಾಗಿದ್ದಾರೆ. ಆದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿಇಟಿ ಪರೀಕ್ಷೆಯಲ್ಲಿ ಹಳೆಯ ಪಠ್ಯಕ್ರಮವನ್ನು ಆಧಾರವಾಗಿಟ್ಟುಕೊಂಡು, ಪ್ರಶ್ನೆ ಪತ್ರಿಕೆಯನ್ನು ತಯಾರಿಸಲಾಗಿದೆ. ಎರಡು ಮಂಡಳಿಗಳ ಘೋರ ನಿರ್ಲಕ್ಷ್ಯದಿಂದಾಗಿ ವಿದ್ಯಾರ್ಥಿ ಸಮೂಹ ಅತಂತ್ರದಲ್ಲಿದೆ. ಒಬ್ಬರ ಮೇಲೆ ಒಬ್ಬರು ಗೂಬೆ ಕೂರಿಸುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಪ್ರಮುಖ ಪರೀಕ್ಷೆಯ ಕುರಿತು ಈ ಮಂಡಳಿಗಳ ಬೇಜವಾಬ್ದಾರಿತನವನ್ನು ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿ ಅತ್ಯುಗ್ರವಾಗಿ ಖಂಡಿಸುತ್ತದೆ.

ಸುಮಾರು ಎರಡು ವರ್ಷಗಳ ತಯಾರಿಯ ನಂತರ ಈ ಪರೀಕ್ಷೆಯನ್ನು ಲಕ್ಷಾಂತರ ವಿದ್ಯಾರ್ಥಿಗಳು ಬರೆಯುತ್ತಾರೆ. ಮೊದಲೇ ಇಂದಿನ ಒತ್ತಡಮಯ ವಾತಾವರಣದಲ್ಲಿ ಆತಂಕದಲ್ಲಿರುವ ವಿದ್ಯಾರ್ಥಿಗಳ ಮೇಲೆ ಇದೊಂದು ಬೃಹತ್ ಪ್ರಹಾರವಾಗಿದೆ. ಹೀಗಿರುವಾಗ, ಮರು ಪರೀಕ್ಷೆ ನಡೆಸುವುದು ಮತ್ತಷ್ಟು ಒತ್ತಡಕ್ಕೆ ಕಾರಣವಾಗುತ್ತದೆ. ಮುಂದಿನ ಎರಡು ವಾರಗಳಲ್ಲಿ ನೀಟ್ ಪರೀಕ್ಷೆ ಇರುವುದರಿಂದ, ಮರು ಪರೀಕ್ಷೆಯ ತಯಾರಿಗೂ ವಿದ್ಯಾರ್ಥಿಗಳಿಗೆ ಸಮಯವಿಲ್ಲ. ಆದ್ದರಿಂದ, ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯನ್ನು ಗಮನದಲ್ಲಿರಿಸಿ, ಪಠ್ಯಕ್ರಮದಿಂದ ಹೊರತಾಗಿರುವ ಅಷ್ಟೂ ಪ್ರಶ್ನೆಗಳನ್ನು ನಗಣ್ಯವೆಂದು ಪರಿಗಣಿಸಿ ವಿದ್ಯಾರ್ಥಿಗಳಿಗೆ ರಾಂಕಿಂಗ್ ನೀಡಬೇಕೆಂದು ಎಐಡಿಎಸ್‌ಓ ಆಗ್ರಹಿಸುತ್ತದೆ.

ಈ ಪ್ರಕರಣದಲ್ಲಿ ಎರಡೂ ಮಂಡಳಿಗಳ ಪಾತ್ರವಿದ್ದು, ರಾಜ್ಯ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಿ, ಈ ಅವಾಂತರಕ್ಕೆ ಕಾರಣರಾದವರಿಗೆ ನಿದರ್ಶನೀಯ ಶಿಕ್ಷೆ ವಿಧಿಸಬೇಕು ಹಾಗೂ ವಿದ್ಯಾರ್ಥಿಗಳು, ತೀವ್ರ ಸಂಕಷ್ಟದಲ್ಲಿದ್ದು, ಚುನಾವಣೆಯ ನೆಪ ನೀಡಿ, ಪರಿಹಾರ ನೀಡುವುದು ವಿಳಂಬವಾಗಬಾರದು ಎಂದು ಎಐಡಿಎಸ್‌ಓ ಆಗ್ರಹಿಸುತ್ತದೆ. ■

**ಇತ್ತೀಚೆಗೆ ಬಂದ ವರದಿಯಂತೆ ಸರ್ಕಾರ ಎಐಡಿಎಸ್‌ಓ ಮನವಿಯನ್ನು ಪರಿಗಣಿಸಿ ಅದರಂತೆ ಕ್ರಮ ಕೈಗೊಳ್ಳುತ್ತಿರುವುದು ವಿದ್ಯಾರ್ಥಿಗಳಿಗೆ ಸಮಾಧಾನ ತಂದಿದೆ.**

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA